ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ಅನಸಾರಾಗ್ರಾ&ಪಂರಾಸಂ

# ಮಾರ್ಗದರ್ಶಿ

ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ
ಸಾಮರ್ಥ್ಯಾಭಿವೃದ್ಧಿ ತರಬೇತಿಯ ಸುಗಮಗಾರರ ಮಾರ್ಗಸೂಚಿ



ಹೆಸರು: ___________________

ವಿಳಾಸ: ___________________

_________________________

_________________________

_________________________

ದೂರವಾಣಿ :

_________________________

**MAARGADARSHI -** TRAINING MANUAL FOR FACILITATORS OF GRAM PANCHAYATH ELECTED REPRESENTATIVES, Published by ANSSIRDPR, Mysuru.

Pages: 94

First Edition: 2021

No. of Copies – 1000

Copyright: ANSSIRDPR, Mysuru

Layout : Mahesha C., Mysuru

Cover Page, Page Design and Illustrations: Wishvaa Winyaas

Printed by:

# ಮುನ್ನುಡಿ

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು 1989ರಿಂದ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಿಗೆ ಪೂರಕವಾಗಿ ಸಾಮರ್ಥ್ಯಾಭಿವೃದ್ಧಿಯನ್ನು ಹೆಚ್ಚಿಸುವ ಕಾರ್ಯ ನಿರ್ವಹಿಸುತ್ತಿದೆ. 2016 ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯಾಗಿ ಮರು ನಾಮಕರಣಗೊಂಡಿರುತ್ತದೆ. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿಷಯಗಳಿಗೆ ಸಂಬಂಧಿಸಿದ ಮೂರು ಹಂತದ ಜನಪ್ರತಿನಿಧಿಗಳು, ಅಧಿಕಾರಿಗಳು, ಸಮುದಾಯ ಸಂಘಟನೆಗಳ ಸಾಮರ್ಥ್ಯಾಭಿವೃದ್ಧಿಗೆ ಶ್ರಮಿಸುತ್ತಿದೆ.

ಸಂವಿಧಾನದ 73ನೇ ತಿದ್ದುಪಡಿಯ ನಂತರ ರಾಜ್ಯದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮವನ್ನು 1993ರಲ್ಲಿ ಜಾರಿಗೆ ತರಲಾಗಿದ್ದು, ಇಲ್ಲಿನ ಮೂರು ಹಂತಗಳ ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯನಿರ್ವಹಿಸಲಾಗುತ್ತಿದೆ. 73ನೇ ಸಂವಿಧಾನದ ತಿದ್ದುಪಡಿಯನ್ವಯ ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಪ್ರಸಕ್ತ ಸಾಲಿನಲ್ಲಿ ಅಂದರೆ, 2020–21ನೇ ಸಾಲಿನಲ್ಲಿ ಚುನಾವಣೆಗಳನ್ನು ನಡೆಸಲಾಗಿದೆ. ಈ ನಿಟ್ಟಿನಲ್ಲಿ ನೂತನವಾಗಿ ಆಯ್ಕೆಯಾಗುವ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ಆಯೋಜಿಸುವ ಸಂಪೂರ್ಣ ಜವಾಬ್ದಾರಿಯನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ನೀಡಲಾಗಿರುತ್ತದೆ.

ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳಿಗೆ ಅವರ ಅಧಿಕಾರ, ಹೊಣೆಗಾರಿಕೆ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಅವರಿಗೆ ಮನದಟ್ಟು ಮಾಡಿ ಕೊಡುವುದು ಅವಶ್ಯಕ. ಜೊತೆಗೆ ಅವರು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸಿ ಅನುಷ್ಠಾನಗೊಳಿಸುವ ಮೂಲಕ ಪಂಚಾಯಿತಿಗಳನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ನಿಟ್ಟಿನಲ್ಲಿ ಅವರ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ತರಬೇತಿ ನಡೆಸಲು ಸಹಾಯಕವಾಗುವಂತೆ ಈ ತರಬೇತಿ ವಿನ್ಯಾಸವನ್ನು ಸಿದ್ಧಪಡಿಸಲಾಗಿದೆ.

ಈ ತರಬೇತಿ ವಿನ್ಯಾಸವು ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ನೀಡುವ ಸುಗಮಗಾರರಿಗೆ ಮಾರ್ಗಸೂಚಿಯಾಗಿದೆ. ಚುನಾಯಿತ ಪ್ರತಿನಿಧಿಗಳಲ್ಲಿ ಜ್ಞಾನ, ಕೌಶಲ್ಯ ನೀಡಿ ಅವರಲ್ಲಿ ರಚನಾತ್ಮಕ ಮನೋಭಾವವನ್ನು ವೃದ್ಧಿಸಲು ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಅವರು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಹಕಾರಿಯಾಗುವಂತೆ ತರಬೇತಿ ವಿನ್ಯಾಸವನ್ನು ರೂಪಿಸಲಾಗಿದೆ. ಪ್ರತ್ಯೇಕವಾಗಿ ಕೈಗೊಳ್ಳಬಹುದಾದಂತಹ ವಿಷಯಗಳು ಮತ್ತು ಅಧಿವೇಶನಗಳಿಗೆ ಸಂಬಂಧಿಸಿದಂತೆ ವಿವರವಾದ ಮತ್ತು ನಿಖರ ಮಾಹಿತಿಯನ್ನು ಒಳಗೊಂಡಿದೆ. ಅಲ್ಲದೇ ಪ್ರತಿ ಅಧಿವೇಶನದ ವಿಷಯ ಕುರಿತು ಮಾಹಿತಿಪೂರ್ಣವಾದ ಕಿರು ಟಿಪ್ಪಟಿಯನ್ನು ಪ್ರತಿ ಅಧಿವೇಶನದ ಅಂತ್ಯದಲ್ಲಿ ನೀಡಲಾಗಿದೆ.

ಈ ತರಬೇತಿ ಕೈಪಿಡಿಯನ್ನು ರಾಜ್ಯ ಮಟ್ಟದಲ್ಲಿ ಪರಿಣಿತರ (ಚಿಂತಕರ ಚಾವಡಿ) ಕಾರ್ಯಾಗಾರವನ್ನು ಏರ್ಪಡಿಸಿ ಸಿದ್ಧಪಡಿಸಲಾಗಿದೆ. ನಂತರ ಮತ್ತೊಮ್ಮೆ ಚರ್ಚೆಗೆ ಒಳಪಡಿಸಿ ಪರಿಷ್ಕರಿಸಲಾಗಿದೆ. ಇದರ ನಂತರ ನಡೆದ ಮೊದಲ ತರಬೇತಿದಾರರ ತರಬೇತಿಯಲ್ಲಿ ಎಲ್ಲ ತರಬೇತಿದಾರರಿಗೂ ಇದನ್ನು ನೀಡಿ ಅವರ ಅಭಿಪ್ರಾಯವನ್ನು ಸಂಗ್ರಹಿಸಿ ತಿದ್ದುಪಡಿ ಮಾಡಲಾಗಿದೆ. ಇದು ತರಬೇತಿದಾರರಿಗೆ ಮಾರ್ಗದರ್ಶಿಯಾಗಿದೆಯೆಂದು ಭಾವಿಸಲಾಗಿದೆ. ಈ ತರಬೇತಿ ಕೈಪಿಡಿಯನ್ನು ಸಿದ್ಧಪಡಿಸಲು ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಶಿಲ್ಪಾ ನಾಗ್,** ಐ.ಎ.ಎಸ್.,
ನಿರ್ದೇಶಕರು
ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಂಸ್ಥೆ, ಮೈಸೂರು

# ಕೃತಜ್ಞತೆಗಳು

**ಮಾರ್ಗದರ್ಶನ**

**ಶ್ರೀ ಕೆ.ಎಸ್. ಈಶ್ವರಪ್ಪ,** ಮಾನ್ಯ ಸಚಿವರು,

**ಶ್ರೀ ಅತೀಕ್.ಎಲ್.ಕೆ.,** ಭಾ.ಆ.ಸೇ., ಪ್ರಧಾನ ಕಾರ್ಯದರ್ಶಿಗಳು

**ಶ್ರೀಮತಿ ಉಮಾ ಮಹದೇವನ್,** ಭಾ.ಆ.ಸೇ., ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್)

**ಶ್ರೀಮತಿ ಪ್ರಿಯಾಂಕ ಮೇರಿ ಫ್ರಾನ್ಸಿಸ್,** ಭಾ.ಆ.ಸೇ., ಆಯುಕ್ತರು,(ಪಂ.ರಾ.ಆಯುಕ್ತಾಲಯ)

**ಶ್ರೀಮತಿ ಶಿಲ್ಪಾ ನಾಗ್,** ಭಾ.ಆ.ಸೇ., ನಿರ್ದೇಶಕರು,

**ಶ್ರೀ ಅಶೋಕಾನಂದ. ಹೆಚ್.ಎಸ್.,** ಭಾ.ಆ.ಸೇ.,(ನಿ)

ಚಿಂತಕರ ಚಾವಡಿಯ ಎಲ್ಲ ಮಾನ್ಯ ಸದಸ್ಯರು

**ತರಬೇತಿ ವಿನ್ಯಾಸ ತಂಡ**

**ಶ್ರೀ ಎಂ.ಬಿ.ಪಿ.ಪಾಂಡೆ,** ಜಂಟಿ ನಿರ್ದೇಶಕರು

**ಶ್ರೀ ಕೆ. ಎಸ್. ಮನೋಜ್‌ಕುಮಾರ್,** ಉಪನಿರ್ದೇಶಕರು (ತರಬೇತಿ)

**ಡಾ. ಜಿ.ಎಸ್. ಗಣೇಶ್ ಪ್ರಸಾದ್**

**ಶ್ರೀ ಅಬೂಬಕ್ಕರ್.ಟಿ.ಎಂ.**

**ಶ್ರೀ ಕೆ.ಆರ್.ಶಂಕರ್**

ಎ.ಎನ್.ಎಸ್.ಎಸ್.ಐ.ಆರ್.ಡಿ. & ಪಿ.ಆರ್. ಬೋಧಕ ವೃಂದ

ಮತ್ತು ಸಿಬ್ಬಂದಿ ವರ್ಗ

**ತರಬೇತಿ ಮಾರ್ಗದರ್ಶಿ ಸಂಪಾದನಾ ತಂಡ**

**ಡಾ. ಎಸ್. ತುಕಾರಾಮ್**

**ಡಾ. ಟಿ. ವೆಂಕಟೇಶ**

**ಶ್ರೀಮತಿ ಮಮತ ಎನ್. ಎಂ.**

**ಕಲೆ ಮತ್ತು ಪುಟ ವಿನ್ಯಾಸ**

ವಿಶ್ವ ವಿನ್ಯಾಸ್

ಮಹೇಶ. ಸಿ.

# ಪರಿವಿಡಿ


| | |
|---|---|
| ಮುನ್ನುಡಿ | |
| ಉದ್ಘಾಟನಾ ಕಾರ್ಯಕ್ರಮ | 01 |
| ಅಧಿವೇಶನ – 1 : ಪರಿಚಯಾತ್ಮಕ ಚಟುವಟಿಕೆ, ನಿರೀಕ್ಷೆಗಳ ಪಟ್ಟಿ ಮತ್ತು ಅನೌಪಚಾರಿಕ ನಿಯಮಗಳ ರಚನೆ | 04 |
| ಅಧಿವೇಶನ – 2 : ಪಂಚಾಯಿತಿ ಇತಿಹಾಸ, ಪ್ರಜಾಪ್ರಭುತ್ವ, ವಿಕೇಂದ್ರೀಕರಣ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ | 08 |
| ಅಧಿವೇಶನ – 3 : ಗ್ರಾಮ ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳು | 13 |
| ಅಧಿವೇಶನ – 4 : ಗ್ರಾಮ ಪಂಚಾಯಿತಿ ರಚನೆ, ಆಡಳಿತಾತ್ಮಕ ಸ್ವರೂಪ, ಅಧಿಕಾರಗಳು ಮತ್ತು ಹೊಣೆಗಾರಿಕೆಗಳು | 18 |
| ಅಧಿವೇಶನ – 5 : ಗ್ರಾಮ ಪಂಚಾಯಿತಿಯ ಕಡ್ಡಾಯ ಪ್ರಕಾರ್ಯಗಳು | 23 |
| ಅಧಿವೇಶನ – 6 : ನಾವೇನು ಮಾಡಬೇಕು? (ಅಭಿವೃದ್ಧಿಯ ದೃಷ್ಟಿಕೋನ) | 29 |
| ಅಧಿವೇಶನ – 7 : ದೂರದೃಷ್ಟಿ ಯೋಜನೆ ಮತ್ತು ನಮ್ಮ ಗ್ರಾಮ ನಮ್ಮ ಯೋಜನೆಯ ಪರಿಕಲ್ಪನೆ | 38 |
| ಅಧಿವೇಶನ – 8 : ಗ್ರಾಮ ಸ್ವರಾಜ್ ಘಟಕಗಳು | 44 |
| ಅಧಿವೇಶನ – 9 : ನಾಯಕತ್ವ | 49 |
| ಅಧಿವೇಶನ – 10 : ಗ್ರಾಮ ಪಂಚಾಯಿತಿ ಸಂಪನ್ಮೂಲಗಳು | 56 |
| ಅಧಿವೇಶನ – 11 : ಗ್ರಾಮ ಪಂಚಾಯಿತಿ ಸಭೆಗಳು, ಸ್ಥಾಯಿ ಸಮಿತಿಗಳು, ಉಪ ಸಮಿತಿಗಳು ಮತ್ತು ಕೆ.ಡಿ.ಪಿ. ಸಭೆ | 62 |
| ಅಧಿವೇಶನ – 12 : ಗ್ರಾಮ ಪಂಚಾಯಿತಿ ಆಡಳಿತ ಮತ್ತು ಮಹಿಳೆ | 67 |
| ಅಧಿವೇಶನ – 13 : ಕ್ರಿಯಾತ್ಮಕ ದೂರದೃಷ್ಟಿ ಯೋಜನೆ ತಯಾರಿಕೆ | 72 |
| ತರಬೇತಿ ಮೌಲ್ಯಮಾಪನ | 77 |
| ಅನುಬಂಧ – 1 : ತರಬೇತಿ ವೇಳಾಪಟ್ಟಿ | 80 |
| ಅನುಬಂಧ – 2 : ತರಬೇತಿ ಮೌಲ್ಯಮಾಪನ ನಮೂನೆ | 83 |

## ಗ್ರಾಮ ಪಂಚಾಯಿತಿ ಸದಸ್ಯರುಗಳ ತರಬೇತಿ ಕಾರ್ಯಕ್ರಮ

# ಉದ್ಘಾಟನಾ ಕಾರ್ಯಕ್ರಮ











## ಉದ್ದೇಶ

ನೂತನ ಚುನಾಯಿತ ಪ್ರತಿನಿಧಿಗಳಿಗೆ ಆತ್ಮೀಯ ಮತ್ತು ಆಪ್ತವಾದ ವಾತಾವರಣ ನಿರ್ಮಾಣ.

ಪರಸ್ಪರ ಆತ್ಮೀಯವಾಗಿ ಬೆರೆಯುವುದಕ್ಕೆ ಪೂರಕ ಅವಕಾಶ.

ನೂತನ ಚುನಾಯಿತ ಪ್ರತಿನಿಧಿಗಳು ಜಾತಿ, ಧರ್ಮ, ಲಿಂಗ ಸಮಾನತೆ ಮನೋಧರ್ಮದೊಂದಿಗೆ ಬೆರೆಯುವ ಮುಕ್ತ ಅವಕಾಶ.

ಭವಿಷ್ಯದ ದಿನಗಳಲ್ಲಿ ಅನೌಪಚಾರಿಕ ಮತ್ತು ಔಪಚಾರಿಕ ಕಾರ್ಯಕ್ರಮಗಳನ್ನು ಸಂಘಟಿಸುವ ಕೌಶಲವೃದ್ಧಿ.

ಜನಪ್ರತಿನಿಧಿಯಾಗಿ ಸರ್ಕಾರ ಮತ್ತು ಜನರ ನಡುವೆ ಸೇತುವೆಯಂತೆ ಕೆಲಸ ನಿರ್ವಹಿಸುವ ಮನೋಧರ್ಮಕ್ಕೆ ಉತ್ತೇಜನ.

## ಉಪ ವಿಷಯಗಳು

ನೂತನ ಚುನಾಯಿತ ಪ್ರತಿನಿಧಿಗಳಿಗೆ ಸ್ವಾಗತ

ತರಬೇತಿಯ ಉದ್ಘಾಟನೆ

ಪ್ರಾಸ್ತವಿಕ ನುಡಿಗಳು

ಮುಖ್ಯ ಅತಿಥಿಗಳ ಮಾತು

ವಿಶೇಷ ಆಹ್ವಾನಿತರ ಮಾತು

ಅಧ್ಯಕ್ಷರ ಭಾಷಣ

ವಂದನಾರ್ಪಣೆ

## ಸಮಯ

45 ನಿಮಿಷ

## ವಿಧಾನ

ಹಬ್ಬದ ವಾತಾವರಣದ ನಿರ್ಮಾಣದ ಮೂಲಕ ಸಮಸ್ತ ಜನರೂ ಪಾಲ್ಗೊಂಡು ನೆರವೇರಿಸುವುದು.

ಹಾಡು, ಸ್ಥಳೀಯ ಚಟುವಟಿಕೆ ಮತ್ತು ವಿಡಿಯೋ ಸಂದೇಶ.

ತರಬೇತಿ ಕೇಂದ್ರಕ್ಕೆ ಆಗಮಿಸುವಾಗ ಹಿನ್ನೆಲೆಯಲ್ಲಿ ಜನಾಧಿಕಾರ ಗೀತೆಯನ್ನು ಸ್ಥಳೀಯವಾಗಿ ಸಿಡಿ ಮೂಲಕ ಪ್ಲೇ ಮಾಡುವುದು.

ಸ್ಥಳೀಯವಾಗಿ ಸುಗಮಕಾರರು, ಪ್ರಶಿಕ್ಷಣಾರ್ಥಿಗಳ ನೋಂದಣಿಯನ್ನು ಸಂಸ್ಥೆಯಿಂದ ನೀಡುವ ನಿಗದಿತ ನಮೂನೆಯಲ್ಲಿ ಪಡೆದುಕೊಳ್ಳುವುದು ಹಾಗೂ ತರಬೇತಿ ಕಿಟ್ ಅನ್ನು ವಿತರಿಸುವುದು.

ತರಬೇತಿ ಉದ್ಘಾಟನೆಯನ್ನು 'ನಾಡಗೀತೆ'ಯೊಂದಿಗೆ ಆರಂಭಿಸುವುದು.

ತರಬೇತಿಯಲ್ಲಿ ಭಾಗವಹಿಸಿರುವ ಪ್ರಶಿಕ್ಷಣಾರ್ಥಿಗಳಲ್ಲಿ ಹಿರಿಯರನ್ನು ಗುರುತಿಸಿ ಅವರೊಂದಿಗೆ ಸಸಿಗೆ ನೀರನ್ನು ಎರೆಯುವುದರ ಮೂಲಕ ತರಬೇತಿಯನ್ನು ಉದ್ಘಾಟಿಸುವುದು.

ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರುಗಳ ಆಶಯ ನುಡಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ನಿರ್ದೇಶಕರು, ಅನಸಾರಾಗ್ರಾಪಂರಾ ಸಂಸ್ಥೆರವರ ಪ್ರಾಸ್ತವಿಕ ನುಡಿಗಳ ಮುದ್ರಿತ ವೀಡಿಯೋವನ್ನು ಪ್ರದರ್ಶಿಸುವುದು.

## ಪೂರಕ ಸಾಮಗ್ರಿಗಳು

ಜನಾಧಿಕಾರದ ಹಾಡು

ಬಳಕೆ ಸ್ಥಿತಿಯಲ್ಲಿರುವ ಟಿವಿ, ಕಂಪ್ಯೂಟರ್ಸ್, ಪ್ರೊಜೆಕ್ಟರ್, ಇಂಧನ ಸಹಿತ ಜನರೇಟರ್, ಆಡಿಯೋ & ವಿಡಿಯೋ ಪರಿಕರಗಳು

ಆಶಯ ನುಡಿಗಳ ಕಿರುಚಿತ್ರ.

ತರಬೇತಿ ಸಾಮಗ್ರಿಗಳು (ಫೋಲ್ಡರ್, ಪೆನ್ನು ಮತ್ತು ಪ್ಯಾಡ್ ಹಾಗು ಸಂಸ್ಥೆಯು ಒದಗಿಸುವ ಇತರೆ ಪೂರಕ ವಸ್ತುಗಳು)

## ನಿರೀಕ್ಷಿತ ಫಲಿತಾಂಶ

ಪ್ರತಿಶಿಕ್ಷಣಾರ್ಥಿಗಳು ಪರಸ್ಪರ ಸಂಕೋಚ ಮುಜಗರಗಳನ್ನು ಮೀರಿ ಪಾಲ್ಗೊಳ್ಳುತ್ತಾರೆ.

ಪ್ರಶಿಕ್ಷಣಾರ್ಥಿಗಳು ತರಬೇತಿಯ ಕಾರ್ಯ ಚೌಕಟ್ಟಿಗೆ ಸ್ಪಂದಿಸುತ್ತಾರೆ.

ಪೂರ್ಣಾವಧಿ ತರಬೇತಿಗೆ ಎಲ್ಲಾ ರೀತಿಯ ಸಹಕಾರ ಕೊಡಲು ಮುಕ್ತ ಮನಸ್ಸಿನಿಂದ ಸಜ್ಜುಗೊಳ್ಳುತ್ತಾರೆ.

## ಅಧಿವೇಶನ ಪ್ರಕ್ರಿಯೆ

ಜನಾಧಿಕಾರ ಗೀತೆ ಲಭ್ಯವಿರುವ ಬಗ್ಗೆ ಖಾತರಿಪಡಿಸಿಕೊಂಡು ಪ್ಲೇ ಮಾಡುವುದು.

ಪ್ರಶಿಕ್ಷಣಾರ್ಥಿಗಳ ನೋಂದಣಿಗೆ ಸಂಬಂಧಿಸಿದ ನಮೂನೆಯನ್ನು ಸಿದ್ಧಪಡಿಸಿಕೊಂಡು ಸಹಿ ಪಡೆಯಲು ಕ್ರಮವಹಿಸುವುದು.


ಆಹ್ವಾನಿತ ಚುನಾಯಿತ ಪ್ರತಿನಿಧಿ ಪ್ರಶಿಕ್ಷಣಾರ್ಥಿಗಳಿಗೆ ಮಾತ್ರ ತರಬೇತಿ ಕೇಂದ್ರದಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು

ತರಬೇತಿ ಕಾರ್ಯಕ್ರಮದ ಉದ್ಘಾಟಕರು ಯಾರೆಂದು ಖಾತರಿಪಡಿಸಿಕೊಳ್ಳುವುದು. (ಹಿರಿಯರನ್ನು ಗುರುತಿಸುವಾಗ ವಯೋಮಾನದಲ್ಲಿ ಹೆಚ್ಚಿರುವ ಒಬ್ಬರು ಮಹಿಳೆ ಮತ್ತು ಪುರುಷ ಪ್ರಶಿಕ್ಷಣಾರ್ಥಿಯನ್ನು ಪರಿಗಣಿಸುವುದು)

ಉದ್ಘಾಟನಾ ಕಾರ್ಯಕ್ರಮದ ವಂದನಾರ್ಪಣೆಯನ್ನು ಸಲ್ಲಿಸುವುದು.

## ಉಪ ಸಂಹಾರ

ತರಬೇತಿಗೆ ಚಾಲನೆ ನೀಡುವ ದೃಷ್ಟಿಯಿಂದ ಹಾಗೂ ಪರಸ್ಪರ ಸಮನ್ವಯ ಭಾವದಿಂದ ಪಾಲ್ಗೊಳ್ಳುವ ವಾತಾವರಣಕ್ಕೆ ಈ ಕಾರ್ಯಕ್ರಮವು ಪೂರಕವಾಗಿರುತ್ತದೆ. ಹೀಗಾಗಿ ಮುಕ್ತ ಮತ್ತು ಆತ್ಮೀಯ ವಾತಾವರಣದ ಮೂಲಕ ಉದ್ಘಾಟನಾ ಕಾರ್ಯಕ್ರಮ ನೆರವೇರಿದ್ದಲ್ಲಿ, ತರಬೇತಿಯ ಒಂದು ಅಂಶ ಯಶಸ್ವಿಯಾಗುತ್ತದೆ. ಜೊತೆಗೆ ಅಧಿಕಾರಿ ಮತ್ತು ಜನಪ್ರತಿನಿಧಿಗಳ ಮಧ್ಯೆ ಸಮನ್ವಯ ಭಾವ ಮೂಡುವಲ್ಲಿ ಸಫಲಗೊಳ್ಳುತ್ತದೆ.



## ಅಧಿವೇಶನ – 1

# ಪರಿಚಯಾತ್ಮಕ ಚಟುವಟಿಕೆ ಮತ್ತು ನಿರೀಕ್ಷೆಗಳ ಪಟ್ಟಿ








**ಉದ್ದೇಶ**

ಪ್ರಶಿಕ್ಷಣಾರ್ಥಿಗಳು ಪರಸ್ಪರ ಪರಿಚಯ ಮಾಡಿಕೊಳ್ಳುವುದರೊಂದಿಗೆ ತರಬೇತಿಯ ನಿರೀಕ್ಷೆಗಳನ್ನು ಮತ್ತು ತರಬೇತಿಯ ಅವಧಿಯಲ್ಲಿ ಪಾಲಿಸಬೇಕಾದ ನಿಯಮಗಳನ್ನು ಅರ್ಥೈಸಿಕೊಳ್ಳುತ್ತಾರೆ.

## ಉಪ ವಿಷಯಗಳು

ಪರಸ್ಪರ ಪರಿಚಯದೊಂದಿಗೆ ಒಬ್ಬರು ಮತ್ತೊಬ್ಬರ ಆಸಕ್ತಿಯನ್ನು ತಿಳಿಯುವ ಅವಕಾಶ.

ತಮ್ಮ ನಿರೀಕ್ಷೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವ ಅವಕಾಶ.

ಒಟ್ಟು ತರಬೇತಿಯ ನಿರೀಕ್ಷೆಗಳನ್ನು ತಲುಪಿಸುವುದು.

**ವಿಧಾನ**

**ಆಟದ ಮೂಲಕ ಮತ್ತು ವಿಚಾರ ಮಂಥನ**

**ಆಟ–1: ಜೋಡಣೆಯ ಆಟ**

ಈ ಜೋಡಣೆಯ ಆಟದಲ್ಲಿ ಸಣ್ಣ ಬಿಲ್ಲೆಯಂತಹ ಕಾರ್ಡ್‌ಗಳಲ್ಲಿ ಸಂಖ್ಯೆಗಳು ಅಥವಾ ಪ್ರಾಣಿಗಳ ಹೆಸರು ಅಥವಾ ಹಣ್ಣು – ತರಕಾರಿಗಳ ಹೆಸರುಗಳನ್ನು ಬಳಸಬಹುದು. ಹೀಗೆ ಎರಡು ಜೊತೆಯಲ್ಲಿ ಸಿದ್ಧಪಡಿಸಿಕೊಂಡಿರುವ ಕಾರ್ಡ್‌ಗಳನ್ನು ತರಬೇತಿಯಲ್ಲಿ ಹಾಜರಿರುವ ಪ್ರಶಿಕ್ಷಣಾರ್ಥಿಗಳಿಗೆ ಚದುರಿದಂತೆ ವಿತರಿಸುವುದು.

ನಂತರ ಸುಗಮಕಾರರು ಪ್ರಶಿಕ್ಷಣಾರ್ಥಿಗಳಿಗೆ ತಮ್ಮ ಕಾರ್ಡಿನಲ್ಲಿರುವ ಸಂಖ್ಯೆ / ಪ್ರಾಣಿ / ಹಣ್ಣು–ತರಕಾರಿ ಹೆಸರಿರುವ ಕಾರ್ಡ್‌ನ್ನು ಹೊಂದಿರುವ ಮತ್ತೊಬ್ಬ ಪ್ರಶಿಕ್ಷಣಾರ್ಥಿಯನ್ನು ಗುರುತಿಸಿಕೊಂಡು ಇಬ್ಬರು ಜೋಡಿಯಾಗುವುದು.

ಇಬ್ಬರು ಪ್ರಶಿಕ್ಷಣಾರ್ಥಿಗಳು ಜೋಡಿಯಾದ ನಂತರ ಸ್ವ ಪರಿಚಯದ ಮಾಹಿತಿಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದು. ವಿನಿಮಯ ಮಾಡಿಕೊಳ್ಳುವಾಗ ಹೆಸರು, ಹವ್ಯಾಸ, ಶೈಕ್ಷಣಿಕ ಮಾಹಿತಿ, ಕುಟುಂಬದ ಮಾಹಿತಿ ಮತ್ತು ಗ್ರಾಮ ಪಂಚಾಯತಿ ಸದಸ್ಯರಾಗಲು ಪ್ರೇರೆಪಿಸಿದ ಅಂಶಗಳ ಕುರಿತು ಚರ್ಚಿಸುವುದು.

ನಂತರ ಪ್ರಶಿಕ್ಷಣಾರ್ಥಿಗಳು ತಮ್ಮ ಸಹವರ್ತಿಯ ಕುರಿತು ದೊಡ್ಡ ಗುಂಪಿನಲ್ಲಿ ಇತರರಿಗೆ ಪರಿಚಯಿಸುವುದು.

**ಆಟ–2: ಮೇರಿಗೋ ರೌಂಡ್**

ಈ ಆಟದಲ್ಲಿ ಪ್ರಶಿಕ್ಷಣಾರ್ಥಿಗಳನ್ನು ಸಮಾನಾಗಿ ಎರಡು ವೃತ್ತಗಳಲ್ಲಿ ಎದುರು ಬದುರಾಗಿ ನಿಂತುಕೊಳ್ಳಲು ತಿಳಿಸುವುದು. ಈ ಎರಡು ವೃತ್ತಗಳು ಒಂದರೊಳಗೆ ಮತ್ತೊಂದು ರಚನೆಯಾಗುವಂತೆ ಪ್ರಶಿಕ್ಷಣಾರ್ಥಿಗಳಿಗೆ ಸೂಚನೆ ನೀಡುವುದು ಹಾಗು ಸುಗಮಕಾರರು ನೀಡುವ ಸೂಚನೆಗಳನ್ನು ಪಾಲಿಸಲು ತಿಳಿಸುವುದು.

ನಂತರ ಹೊರಗಿನ ವೃತ್ತದಲ್ಲಿ ನಿಂತಿರುವ ಪ್ರಶಿಕ್ಷಣಾರ್ಥಿಗಳಿಗೆ ಕ್ಲಾಕ್ ವೈಸ್‌ನಲ್ಲಿ ತಿರುಗಲು ಮತ್ತು ಒಳಗಿನ ವೃತ್ತದಲ್ಲಿ ನಿಂತಿರುವ ಪ್ರಶಿಕ್ಷಣಾರ್ಥಿಗಳಿಗೆ ವಿರುದ್ಧ ದಿಕ್ಕಿನಲ್ಲಿ ಅಂದರೆ ಆಂಟಿ ಕ್ಲಾಕ್ ವೈಸ್ ನಲ್ಲಿ ತಿರುಗಲು ತಿಳಿಸುವುದು.







ಸುಗಮಕಾರರು ಪ್ರಶಿಕ್ಷಣಾರ್ಥಿಗಳನ್ನು ವೃತ್ತಾಕಾರದಲ್ಲಿ ತಿರುಗುವುದನ್ನು ನಿಲ್ಲಿಸಲು ಸೂಚನೆಯನ್ನು ಚಪ್ಪಾಳೆ ತಟ್ಟುವುದು ಅಥವಾ ವಿಷಲ್ ಬಾರಿಸುವ ಅಥವಾ ಘಂಟೆ ಬಾರಿಸುವದರ ಮೂಲಕ ನೀಡುವುದು.

ಪ್ರಶಿಕ್ಷಣಾರ್ಥಿಗಳು ವೃತ್ತಾಕಾರದಲ್ಲಿ ತಿರುಗುವುದನ್ನು ನಿಲ್ಲಿಸಿದಾಗ, ಮತ್ತೊಂದು ವೃತ್ತದಲ್ಲಿ ಎದುರಿಗೆ ನಿಂತಿರುವ ಪ್ರಶಿಕ್ಷಣಾರ್ಥಿಯ ಜೊತೆ ತಮ್ಮ ವೈಯಕ್ತಿಕ ಪರಿಚಯಗಳನ್ನು ಪರಸ್ಪರರು ವಿನಿಮಯ ಮಾಡಿಕೊಳ್ಳುವುದು. ವಿನಿಮಯ ಮಾಡಿಕೊಳ್ಳುವಾಗ ಹೆಸರು, ಹವ್ಯಾಸ, ಶೈಕ್ಷಣಿಕ ಮಾಹಿತಿ, ಕುಟುಂಬದ ಮಾಹಿತಿ ಮತ್ತು ಗ್ರಾಮ ಪಂಚಾಯತಿ ಸದಸ್ಯರಾಗಲು ಪ್ರೇರೆಪಿಸಿದ ಅಂಶಗಳ ಕುರಿತು ಚರ್ಚಿಸುವುದು.

ಒಂದು ಅಥವಾ ಎರಡು ನಿಮಿಷಗಳ ಅಂತರ ನೀಡಿದ ನಂತರೆ, ಇದೇ ರೀತಿಯಾಗಿ ಮೂರು–ನಾಲ್ಕು ಬಾರಿ ಪ್ರಶಿಕ್ಷಣಾರ್ಥಿಗಳು ವೃತ್ತದಲ್ಲಿ ತಿರುಗುವುದನ್ನು ಪುನರಾವರ್ತನೆ ಮಾಡುವುದು. ಹೀಗೆ ಮಾಡುವುದರಿಂದ ಹೆಚ್ಚಿನ ಪ್ರಶಿಕ್ಷಣಾರ್ಥಿಗಳ ಜೊತೆ ಸ್ವ–ಪರಿಚಯ ಮಾಡಿಕೊಳ್ಳಲು ಅವಕಾಶ




45 ನಿಮಿಷ




ಬಿಲ್ಲೆಯಂತಹ ಕಾರ್ಡುಗಳು
ಕೆಜಿ ಶೀಟ್‌ಗಳು
ಮಾರ್ಕರ್ ಪೆನ್‌ಗಳು
ದಾರ
ಕ್ಲಿಪ್ಪುಗಳು




ಸುಗಮಕಾರರು ಆಟದ ಬಳಿಕ ಎಲ್ಲಾ ಪ್ರಶಿಕ್ಷಣಾರ್ಥಿಗಳಿಂದ, ತರಬೇತಿಗೆ ಸಂಬಂಧಿಸಿದಂತೆ, ಅವರ ನಿರೀಕ್ಷೆಗಳನ್ನು ವಿಚಾರ ಮಂಥನದ ಮೂಲಕ ಪಟ್ಟಿ ಮಾಡುವುದು.

ಸದಸ್ಯರು ತಮ್ಮ ನಿರೀಕ್ಷೆಯಂತೆ ತರಬೇತಿಗಳು ನಡೆಯುವುದು ಎಂಬ ಭರವಸೆಯನ್ನು ಹೊಂದುವರು.

ಪ್ರಶಿಕ್ಷಣಾರ್ಥಿಗಳಿಂದ ಪಟ್ಟಿಯಾದ ನಿರೀಕ್ಷೆಗಳಲ್ಲಿ ಯಾವ ಅಂಶಗಳನ್ನು ಪ್ರಸ್ತುತ ತರಬೇತಿಯಲ್ಲಿ ನಿರ್ವಹಿಸಲಾಗುತ್ತಿದೆ ಎಂಬ ಮಾಹಿತಿಯನ್ನು ತರಬೇತಿ ವೇಳಾಪಟ್ಟಿ ಆಧರಿಸಿ ಸಂಕ್ಷಿಪ್ತ ಪರಿಚಯ ಮಾಡುವಲ್ಲಿ ಸಫಲಗೊಳ್ಳುವುದು.

ಪ್ರಶಿಕ್ಷಣಾರ್ಥಿಗಳು ಮತ್ತು ಸುಗಮಕಾರರು ಪರಸ್ಪರವಾಗಿ ಮನೋಭಾವವನ್ನು ಅರ್ಥೈಸಿಕೊಳ್ಳುತ್ತಾರೆ ಹಾಗು ಪರಸ್ಪರ ಸ್ನೇಹ ಮತ್ತು ನಂಬಿಕೆಯ ವಾತಾವರಣವನ್ನು ಸೃಷ್ಟಿಯಾಗುತ್ತದೆ.

ಪ್ರಶಿಕ್ಷಣಾರ್ಥಿಗಳು ತರಬೇತಿಯ ಪರಿಸರಕ್ಕೆ ಮುಕ್ತವಾಗಿ ಹೊಂದಿಕೊಳ್ಳುತ್ತಾರೆ.

ಪ್ರಶಿಕ್ಷಣಾರ್ಥಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳ ನಡುವೆ ಆತ್ಮೀಯತೆ ಉಂಟಾಗುವುದು.

ಪ್ರಶಿಕ್ಷಣಾರ್ಥಿಗಳ ತರಬೇತಿ ನಿರೀಕ್ಷೆಗಳಲ್ಲಿ ಪ್ರಸಕ್ತ ತರಬೇತಿಯಲ್ಲಿ ನಿರ್ವಹಿಸುವ ಅಂಶಗಳನ್ನು ಅರ್ಥೈಸುವುದು.

ತರಬೇತಿಯನ್ನು ಯಶಸ್ವಿಯಾಗಿ ಸಂಘಟಿಸಲು ಪ್ರಶಿಕ್ಷಣಾರ್ಥಿಗಳೇ ಅನೌಪಚಾರಿಕ ನಿಯಮಗಳನ್ನು ರಚಿಸುತ್ತಾರೆ.

**ಅಧಿವೇಶನ ಪ್ರಕ್ರಿಯೆ**

ಸಂಪನ್ಮೂಲ ವ್ಯಕ್ತಿಗಳು ಆಟವನ್ನು ಆಡಿಸಲು ಬೇಕಾಗುವ ಎಲ್ಲಾ ಕೌಶಲ್ಯಗಳನ್ನು ತರಬೇತಿಯ ಪೂರ್ವದಲ್ಲಿ ಪುನರ್ ಮನನ ಮಾಡಿಕೊಳ್ಳುವುದು.

ಪ್ರಶಿಕ್ಷಣಾರ್ಥಿಗಳ ಸಂಖ್ಯೆ, ಸ್ಪಂದನೆ, ಸ್ಥಳಾವಕಾಶ ಮತ್ತು ಸಮಯದ ಲಭ್ಯತೆಗೆ ಅನುಗುಣವಾಗಿ ಆಟವನ್ನು ಆಯ್ಕೆ ಮಾಡಿಕೊಳ್ಳುವುದು.

ಆಟದ ಮೂಲಕ ಪರಿಚಯಾತ್ಮಕ ಚಟುವಟಿಕೆ ಮುಕ್ತಾಯಗೊಂಡ ನಂತರ ತರಬೇತಿಯ ಕುರಿತು ಪ್ರಶಿಕ್ಷಣಾರ್ಥಿಗಳಿಂದ ನಿರೀಕ್ಷೆಗಳನ್ನು ಕೆ ಜಿ ಶೀಟ್‌ನಲ್ಲಿ ಪಟ್ಟಿ ಮಾಡಿಸುವುದು.

ನಿರೀಕ್ಷೆಗಳನ್ನು ಪಟ್ಟಿ ಮಾಡಿದ ಬಳಿಕ, ಈ ತರಬೇತಿಯಲ್ಲಿ ಅಳವಡಿಸಿಕೊಂಡ ವಿಷಯಗಳನ್ನು ಮನವರಿಕೆ ಮಾಡಿಕೊಡುವುದು, ಉಳಿದ ನಿರೀಕ್ಷೆಗಳನ್ನು ಮುಂದಿನ ಹಂತದ ತರಬೇತಿಗಳಲ್ಲಿ ಅಳವಡಿಸುವ ಕುರಿತು ಮನವರಿಕೆ ಮಾಡುವುದು.


ತರಬೇತಿ ಯಶಸ್ವಿಯಾಗ ಬೇಕಾದರೆ ಪ್ರಶಿಕ್ಷಣಾರ್ಥಿಗಳ ಕ್ರಿಯಾಶೀಲ ಭಾಗವಿಸುವಿಕೆ, ಸಹಕಾರ, ಸಮಯ ಪಾಲನೆ, ಮೋಬೈಲ್ ಬಳಕೆ, ವ್ಯಕ್ತಿ ಗೌರವ, ಮುಕ್ತ ಚರ್ಚೆಗೆ ಅವಕಾಶ, ವೈಯಕ್ತಿಕ ಅಭಿಪ್ರಾಯಗಳಿಗೆ ಮನ್ನಣೆ ಮತ್ತು ಗುಂಪುಗಾರಿಕೆ ರಹಿತ ಕಲಿಕೆಯಲ್ಲಿ ಪಾಲ್ಗೊಳ್ಳುವಿಕೆ ಮುಂತಾದ ಅಂಶಗಳ ಕುರಿತು ಅನೌಪಚಾರಿಕ ನಿಯಮಗಳನ್ನು ಮನದಟ್ಟು ಮಾಡುವುದು.


ತರಬೇತಿ ಕೊಠಡಿಯಲ್ಲಿ ಪ್ರಶಿಕ್ಷಣಾರ್ಥಿಗಳು ಸರ್ವಸಮ್ಮತವಾಗಿ ಒಪ್ಪಿಕೊಂಡ ನಿಯಮಗಳನ್ನು ಕೆ ಜಿ ಶೀಟ್‌ನಲ್ಲಿ ದಾಖಲಿಸಿ ಕೊಠಡಿಯಲ್ಲಿ ಪ್ರದರ್ಶಿಸುವುದು.

**ಉಪ ಸಂಹಾರ**

ಚುನಾಯಿತ ಸದಸ್ಯರು ಪರಸ್ಪರ ಪರಿಚಯ ಹೊಂದಿರುತ್ತಾರೆ ಅಥವಾ ಅಪರಿಚಿತರಾಗಿರುತ್ತಾರೆ. ಈ ಅವಧಿಯಲ್ಲಿ ಒಬ್ಬರನ್ನೊಬ್ಬರು ತಮ್ಮ ತಮ್ಮ ಅಭಿರುಚಿ ಮನೋಧರ್ಮಗಳನ್ನು ಅರಿಯುವಂತಾಗಬೇಕು. ವಿಶೇಷವಾಗಿ ಸದಸ್ಯರಾದವರು ಏನೇನು ಕನಸುಗಳನ್ನು ಹೊಂದಿರುತ್ತಾರೆ ಎಂಬುದರ ಬಗ್ಗೆ ಅರ್ಥೈಸಿಕೊಳ್ಳುವಂತವರಾಗಬೇಕು. ಸಾರ್ವಜನಿಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲಿರುವ ಅವಕಾಶದ ಮಹತ್ವವನ್ನು ಅರಿಯುವಲ್ಲಿ ಈ ಅಧಿವೇಶನ ನೆರವಾಗಬೇಕು.






# ಪಂಚಾಯಿತಿ ಇತಿಹಾಸ, ಪ್ರಜಾಪ್ರಭುತ್ವ, ವಿಕೇಂದ್ರೀಕರಣ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ

## ಉದ್ದೇಶ

ಪಂಚಾಯಿತಿ ಇತಿಹಾಸ ನಡೆದುಬಂದ ದಾರಿಯನ್ನು ತಿಳಿಯುವುದು.

ಸ್ವಯಂ ಆಡಳಿತ ವ್ಯವಸ್ಥೆಯ ಇತಿಹಾಸವನ್ನು ತಿಳಿಯುವುದು.

ಸ್ವಾತಂತ್ರ್ಯನಂತರದ ಸ್ವಯಂ ಆಡಳಿತ ವ್ಯವಸ್ಥೆಯ ಪರಿಚಯವನ್ನು ಮಾಡಿಕೊಳ್ಳುವುದು.

ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಮೂರು (3) ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ತಿಳಿಯುವುದು.

ಸಂವಿಧಾನದ ಪ್ರಸ್ತಾವನೆಯನ್ನು ಅವಲೋಕನ ಮಾಡುವುದರೊಂದಿಗೆ ಸಂವಿಧಾನದ ಮೂರು ಪ್ರಮುಖ ಸ್ಥಂಭಗಳ ಪ್ರಾಮುಖ್ಯತೆ ಬಗ್ಗೆ ತಿಳಿಯುವುದು.

## ಉಪ ವಿಷಯಗಳು

ಭಾರತದ ಸಂವಿಧಾನ – ಪ್ರಜಾಪ್ರಭುತ್ವ

ಪಂಚಾಯಿತಿ ಇತಿಹಾಸ

ವಿಕೇಂದ್ರೀಕರಣ ವ್ಯವಸ್ಥೆ

ಪಂಚಾಯತ್ ರಾಜ್ ವ್ಯವಸ್ಥೆ–ಸಂವಿಧಾನದ 73ನೇ ತಿದ್ದುಪಡಿಯ ಮುಖ್ಯಾಂಶಗಳು

## ವಿಧಾನ

ಕಿರುಚಿತ್ರ ಮತ್ತು ಸಂವಾದ

ವೀಕ್ಷಣೆ

ವಿಚಾರ ಮಂಥನ

## ಸಮಯ

60 ನಿಮಿಷಗಳು

## ಪೂರಕ ಸಾಮಗ್ರಿಗಳು


ಕಿರುಚಿತ್ರ ಮತ್ತು ಸಂವಾದದ ವೀಡಿಯೋ

ಕೆಜಿ.ಶೀಟ್ಸ್, ಮಾರ್ಕರ್

## ನಿರೀಕ್ಷಿತ ಫಲಿತಾಂಶ

ಗ್ರಾಮ ಅಥವಾ ವಾರ್ಡ್‌ನ ಚುನಾಯಿತ ಸದಸ್ಯರು ಪಂಚಾಯಿತಿ ಇತಿಹಾಸವನ್ನು ಅರ್ಥಮಾಡಿಕೊಳ್ಳುವರು.

ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಮೂರು (3) ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯ ಅನುಷ್ಠಾನಕ್ಕೆ ಬಂದ ಬಗೆಯನ್ನು ಗ್ರಹಿಸುವರು.





## ಅಧಿವೇಶನ ಪ್ರಕ್ರಿಯೆ

ಸುಗಮಕಾರರು 'ಪಂಚಾಯತಿ ಇತಿಹಾಸ' ವಿಷಯಕ್ಕೆ ಸಂಬಂಧಿಸಿದಂತೆ ಪ್ರಶಿಕ್ಷಣಾರ್ಥಿಗಳ ಅರ್ಥೈಸುವಿಕೆ ಕುರಿತು ವಿಚಾರ ಮಂಥನದ ಮೂಲಕ ತ್ವರಿತವಾಗಿ ಚರ್ಚಿಸುವುದು. (ಪಂಚಾಯತಿ ಇತಿಹಾಸ ಚಿತ್ರಕ್ಕಾಗಿ ಮುಂದಿನ ಯುಟ್ಯೂಬ್ ಲಿಂಕ್ ಅನ್ನು ಬಳಸುವುದು. (https://www.youtube.com/watch?v=6yBY14UOXFw)

ನಂತರ 'ಪಂಚಾಯಿತಿ ಇತಿಹಾಸ' ಕ್ಕೆ ಸಂಬಂಧಿಸಿದಂತೆ ಒಂದು ಕಿರುಚಿತ್ರವನ್ನು ವೀಕ್ಷಿಸೋಣವೆಂದು ಹಾಗು ಕಿರುಚಿತ್ರದಲ್ಲಿ ಬರುವ ಪ್ರಮುಖ ಅಂಶಗಳನ್ನು ಪಟ್ಟಿಮಾಡಿಕೊಳ್ಳಲು ಪ್ರಶಿಕ್ಷಣಾರ್ಥಿಗಳಿಗೆ ತಿಳಿಸುವುದು.

ಕಿರುಚಿತ್ರ ವೀಕ್ಷಿಸಿದ ನಂತರ ಗಮನಿಸಿದ ಅಂಶಗಳ ಕುರಿತು ಪ್ರಶಿಕ್ಷಣಾರ್ಥಿಗಳೊಂದಿಗೆ ತ್ವರಿತ ಪ್ರತಿಕ್ರಿಯೆಯನ್ನು ಪಡೆದುಕೊಳ್ಳುವುದು.

ನಂತರ ಪ್ರಜಾಪ್ರಭುತ್ವ, ವಿಕೇಂದ್ರೀಕರಣ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ ಕುರಿತು ಪ್ರಶಿಕ್ಷಣಾರ್ಥಿಗಳ ಅರ್ಥೈಸುವಿಕೆ ಕುರಿತು ವಿಚಾರ ಮಂಥನದ ಮೂಲಕ ತ್ವರಿತವಾಗಿ ಚರ್ಚಿಸುವುದು.

ನಂತರ ವಿಷಯಕ್ಕೆ ಸಂಬಂಧಿಸಿದಂತೆ ತಜ್ಞರು ಸಂವಿಧಾನದ ಪೀಠಿಕೆ, ನೀತಿ ನಿರ್ದೇಶಕ ತತ್ತ್ವಗಳು ಹಾಗೂ ಮೂಲಭೂತ ಹಕ್ಕುಗಳು, ಕರ್ನಾಟಕದಲ್ಲಿ ಪಂಚಾಯತ್ ವ್ಯವಸ್ಥೆ ಬೆಳೆದು ಬಂದ ದಾರಿ ಮತ್ತು ಸಂವಿಧಾನದ 73ನೇ ತಿದ್ದುಪಡಿ ಹಾಗು 5 ಹಂತದ ಸರ್ಕಾರಗಳ ಕುರಿತು ಚರ್ಚಿಸಿರುವ ಪ್ಯಾನಲ್ ಚರ್ಚೆಯ ವಿಡಿಯೋ ಚಿತ್ರವನ್ನು ವೀಕ್ಷಿಸೋಣವೆಂದು ಹಾಗು ಅದರಲ್ಲಿ ಚರ್ಚಿಸುವ ಪ್ರಮುಖ ಅಂಶಗಳನ್ನು ಪಟ್ಟಿಮಾಡಿಕೊಳ್ಳಲು ಪ್ರಶಿಕ್ಷಣಾರ್ಥಿಗಳಿಗೆ ತಿಳಿಸುವುದು.

ತಜ್ಞರ ವಿಡಿಯೋ ಕಿರುಚಿತ್ರ ವೀಕ್ಷಿಸಿದ ನಂತರ ಗಮನಿಸಿದ ಅಂಶಗಳ ಕುರಿತು ಪ್ರಶಿಕ್ಷಣಾರ್ಥಿಗಳೊಂದಿಗೆ ತ್ವರಿತ ಪ್ರತಿಕ್ರಿಯೆಯನ್ನು ಪಡೆದುಕೊಳ್ಳುವುದು.

ಕಡೆಯದಾಗಿ ಸಂವಿಧಾನದ ಪೀಠಿಕೆಯ ಮುದ್ರಿತ ಪ್ರತಿಯನ್ನು ಕೊಠಡಿಯಲ್ಲಿ ಪ್ರದರ್ಶಿಸುವುದು ಮತ್ತು ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಅವಕಾಶವಿದ್ದಾಗ ಓದಿಕೊಳ್ಳಲು ತಿಳಿಸುವುದು.

**ಸುಗಮಗಾರರಿಗೆ ಸೂಚನೆಗಳು**

ಪ್ರಜಾಪ್ರಭುತ್ವ, ವಿಕೇಂದ್ರೀಕರಣ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಪ್ರಶಿಕ್ಷಣಾರ್ಥಿಗಳೊಂದಿಗೆ ತ್ವರಿತ ವಿಚಾರ ಮಂಥನ ಮಾಡುವುದು ಮತ್ತು ಹೆಚ್ಚಿನ ಮಟ್ಟದ ಅರ್ಥೈಸಿಕೊಳ್ಳುವಿಕೆಗೆ ಕಿರುಚಿತ್ರಗಳನ್ನು ಪ್ರದರ್ಶಿಸುವುದು.

ಕಿರುಚಿತ್ರಗಳಲ್ಲಿ ಗಮನಿಸಿದ ಪ್ರಮುಖ ಅಂಶಗಳ ಕುರಿತು ಅಭಿಪ್ರಾಯವನ್ನು ಪಡೆದುಕೊಳ್ಳುವುದು.

ಪಂಚಾಯತಿ ಇತಿಹಾಸ ಕಿರುಚಿತ್ರದಲ್ಲಿ ಮಹಿಳಾ ಮೀಸಲಾತಿಗೆ ಸಂಬಂಧಿಸಿದಂತೆ ಶೇ.33 ಎಂದು ಸಂವಿಧಾನದ ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದೆ. ಆದರೆ ನಮ್ಮ ರಾಜ್ಯದಲ್ಲಿ ಪ್ರಸ್ತುತ ಶೇ.50 ರಷ್ಟು ಮೀಸಲಾತಿಯನ್ನು ಸ್ಥಳೀಯ ಸರ್ಕಾರದಲ್ಲಿ ನೀಡಿರುವುದನ್ನು ಮನವರಿಕೆ ಮಾಡುವುದು.

ವಿಷಯಕ್ಕೆ ಸಂಬಂಧಿಸಿದಂತೆ ಪ್ಯಾನಲ್ ಚರ್ಚೆ ಮತ್ತು ಕಿರುಚಿತ್ರದಲ್ಲಿ ಗಮನಿಸಿದಂತೆ ಮಹಿಳೆ ಮತ್ತು ಪುರಷರಿಗೆ ಇರುವ ಸಮಾನ ಅವಕಾಶಗಳು ಮತ್ತು ಪ್ರಾಮುಖ್ಯತೆಗಳನ್ನು ವಿವರಿಸುವುದು.

ಸಂಸ್ಥೆಯಿಂದ ಒದಗಿಸಲಾದ ಸಂವಿಧಾನದ ಪೀಠಿಕೆಯ ಮುದ್ರಿತ ಪ್ರತಿಯನ್ನು ಕೊಠಡಿಯಲ್ಲಿ ಪ್ರದರ್ಶಿಸುವುದನ್ನು ಖಾತರಿಪಡಿಸಿಕೊಳ್ಳುವುದು.

ಅಧಿವೇಶನದ ಯಾವುದೇ ವಿಷಯಗಳ ಕುರಿತು ಸ್ವಂತ ಅಭಿಪ್ರಾಯಗಳನ್ನು ಹೇರಬಾರದು.

ಪೂರಕ ಮಾಹಿತಿ

# ಪ್ರಜಾಪ್ರಭುತ್ವ ಮತ್ತು ಸಂವಿಧಾನ

ಭಾರತೀಯ ಸಂವಿಧಾನವು ವಿಶ್ವದಲ್ಲಿಯೇ ಅತಿ ದೊಡ್ಡದಾದ ಸಂವಿಧಾನವಾಗಿದೆ. ಸಂವಿಧಾನವು ದೇಶದ ಆಡಳಿತವನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯವಿರುವ ನೀತಿ–ನಿಯಮಗಳು, ಕಾನೂನುಗಳು ಮತ್ತು ಸಮಗ್ರ ಅಭಿವೃದ್ಧಿ ಹಾಗು ಜನರ ಒಳಿತಿಗಾಗಿ ಅವಶ್ಯಕವಿರುವ ಕ್ರಮಗಳನ್ನು ತಿಳಿಸುತ್ತದೆ. ಸಂವಿಧಾನವು ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ರಾಷ್ಟ್ರದ ಬೆನ್ನೆಲುಬಾಗಿದ್ದು, ರಾಜಕೀಯ ಕಾರ್ಯಚೌಕಟ್ಟು ಮತ್ತು ಸರ್ಕಾರವು ಚಲಾಯಿಸಬಹುದಾದ ಅಧಿಕಾರಗಳನ್ನು ವಿವರಿಸುತ್ತದೆ. ನಮ್ಮ ದೇಶದ ಸಂವಿಧಾನವು 9ನೇ ಡಿಸೆಂಬರ್, 1947 ರಿಂದ 26ನೇ ನವೆಂಬರ್, 1949ರ ಅವಧಿಯಲ್ಲಿ ಭಾರತದ ಸಂವಿಧಾನ ರಚನಾ ಸಭೆಯಿಂದ ರಚನೆಗೊಂಡು, ಜನವರಿ 26, 1950 ರಂದು ಜಾರಿಗೆ ಬಂದಿತು. ಆದ್ದರಿಂದ ಭಾರತದಲ್ಲಿ ಪ್ರತಿವರ್ಷ 26ನೇ ಜನವರಿಯಂದು ಗಣರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ.


**ಸಂವಿಧಾನದ ಮೂರು ಸ್ತಂಭಗಳು:**

ಭಾರತದ ಸಂವಿಧಾನವು ಮೂರು ಸ್ತಂಭಗಳನ್ನು ಒಳಗೊಂಡಿದೆ. ಅವುಗಳೆಂದರೆ ಸಂವಿಧಾನದ ಪ್ರಸ್ತಾವನೆ, ಮೂಲಭೂತ ಹಕ್ಕುಗಳು ಮತ್ತು ನೀತಿ ನಿರ್ದೇಶಕ ತತ್ವಗಳು. ಈ ಮೂರು ಸ್ತಂಭಗಳನ್ನು ದೇಶದ ಪ್ರತಿಯೊಬ್ಬ ಪ್ರಜೆ, ಸಮುದಾಯ, ಯಾವುದೇ ರೂಪದ ಸಂಸ್ಥೆಗಳು ಮತ್ತು ಸರ್ಕಾರಗಳು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಂಡು ಆಚರಣೆಗೆ ತರುವುದು ಅತ್ಯಾವಶ್ಯಕವಾಗಿದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬ ವ್ಯಕ್ತಿಯು ಅವುಗಳನ್ನು ತಿಳಿದುಕೊಳ್ಳುವುದು ಪ್ರಾಥಮಿಕ ಕರ್ತವ್ಯವಾಗಿದೆ.

**ಮೂಲಭೂತ ಹಕ್ಕುಗಳು:**

ಮೂಲಭೂತ ಹಕ್ಕುಗಳನ್ನು ಯಾವುದೇ ಸಂಸ್ಥೆಯು ತನ್ನ ವ್ಯಾಪ್ತಿಯೊಳಗೆ ಕರ್ತವ್ಯ ನಿರ್ವಹಿಸುವಾಗ ಪರಿಗಣನೆಗೆ ತೆಗೆದುಕೊಳ್ಳುವುದು ಮುಖ್ಯವಾಗುತ್ತದೆ. ಈ ಹಕ್ಕುಗಳನ್ನು ಸಂವಿಧಾನದ 12 ನೇ ವಿಧಿಯಿಂದ 35 ನೇ ವಿಧಿಯವರೆಗೆ ವಿವರಿಸಿದೆ. ಪ್ರಮುಖವಾದ ಮೂಲಭೂತ ಹಕ್ಕುಗಳು ಈ ಕೆಳಕಂಡಂತಿದೆ;

- ಸಮಾನತೆಯ ಹಕ್ಕು (14 ರಿಂದ 18 ನೇ ವಿಧಿ)
- ಸ್ವಾತಂತ್ರ್ಯದ ಹಕ್ಕು (19 ರಿಂದ 22 ನೇ ವಿಧಿ)
- ಶೋಷಣೆಯ ವಿರುದ್ಧ ಹಕ್ಕು (23 ರಿಂದ 24 ನೇ ವಿಧಿ)
- ಧರ್ಮ ಸ್ವಾತಂತ್ರ್ಯದ ಹಕ್ಕು (25 ರಿಂದ 28 ನೇ ವಿಧಿ)
- ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು (29 ರಿಂದ 31 ನೇ ವಿಧಿ)
- ಸಂವಿಧಾನಾತ್ಮಕ ಪರಿಹಾರೋಪಾಯಗಳ ಹಕ್ಕು (32 ರಿಂದ 35 ನೇ ವಿಧಿ)





## ಪಂಚಾಯತಿ ಇತಿಹಾಸ

ಪಂಚಾಯತಿ ಎಂಬುದು ಬಹಳ ಹಿಂದಿನಿಂದಲೂ ನಡೆದು ಬಂದಿರುವ ಒಂದು ವ್ಯವಸ್ಥೆ. ಬಹಳ ಹಿಂದೆ **"ಪಂಚರು"** ಪಂಚಾಯತಿಗಳ ಮುಖ್ಯಸ್ಥರಾಗಿರುತ್ತಿದ್ದರು. ಅಂದಿನ ಮೈಸೂರು ಪ್ರಾಂತ್ಯದಲ್ಲಿ **"ದಿ ಮೈಸೂರು ಲೋಕಲ್ ಬೋರ್ಡ್ ರೆಗ್ಯುಲೇಶನ್"** ಕಾಯಿದೆಯನ್ನು 1903ರಲ್ಲಿ ಜಾರಿಗೆ ತರಲಾಯಿತು. ಈ ಕಾಯಿದೆಯ ಪ್ರಕಾರ ಮೂರು ಹಂತಗಳ ಸ್ಥಳೀಯಾಡಳಿತ ವ್ಯವಸ್ಥೆ ಜಾರಿಗೆ ಬಂದಿತು.

**1. ಜಿಲ್ಲಾ ಮಂಡಳಿ 2. ತಾಲ್ಲೂಕು ಬೋರ್ಡ್ 3. ಪಂಚಾಯತಿ ಸಂಘಟನೆ**

### ಸ್ವಾತಂತ್ರ್ಯ ನಂತರದಲ್ಲಿ ...................

ಸ್ವಾತಂತ್ರ್ಯ ನಂತರದಲ್ಲಿ **ವೆಂಕಟಪ್ಪ ನೇತೃತ್ವದ ಸಮಿತಿಯನ್ನು** ರಚಿಸಲಾಯಿತು. ಗ್ರಾಮ ಮಟ್ಟದಲ್ಲಿ ಗ್ರೂಪ್ ಪಂಚಾಯತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಂಡಳಿ ಇರುವ ಎರಡು ಹಂತಗಳ ಸ್ಥಳೀಯಾಡಳಿತ ವ್ಯವಸ್ಥೆ ಜೊತೆಗೆ ತಾಲ್ಲೂಕು ಮಟ್ಟದ ಎಲ್ಲಾ ಗ್ರೂಪ್ ಪಂಚಾಯತಿಗಳ ಅಧ್ಯಕ್ಷರನ್ನು ಒಳಗೊಂಡ ಸಮನ್ವಯ ಸಮಿತಿಯ ರಚನೆಗೆ ವೆಂಕಟಪ್ಪ ಸಮಿತಿ ಶಿಫಾರಸ್ಸು ಮಾಡಿತು.

ಆನಂತರ ರಾಷ್ಟ್ರ ಮಟ್ಟದಲ್ಲಿ ಕೇಂದ್ರ ಸರ್ಕಾರವು **ಬಲವಂತರಾಯ್ ಮೆಹತಾ ಮತ್ತು ಅಶೋಕ್ ಮೆಹತಾ ನೇತೃತ್ವದಲ್ಲಿ ಸಮಿತಿಗಳನ್ನು ವಿವಿಧ ಕಾಲಘಟ್ಟಗಳಲ್ಲಿ ರಚಿಸಲಾಯಿತು.** ಪಂಚಾಯತ್ ರಾಜ್ ಸಂಸ್ಥೆಗಳು ಸರ್ಕಾರದ ರೀತಿಯಲ್ಲಿ ಕೆಲಸ ಮಾಡಬೇಕು. ಹೀಗಾಗಿ ಅವುಗಳಿಗೆ ಹೆಚ್ಚಿನ ಸಂಪನ್ಮೂಲ ಮತ್ತು ಅಧಿಕಾರವನ್ನು ಒದಗಿಸುವ ಅಗತ್ಯವಿದೆ ಎಂದು ಅಶೋಕ್ ಮೆಹತಾ ಸಮಿತಿ ಅಭಿಪ್ರಾಯಪಟ್ಟಿತ್ತು. ಕರ್ನಾಟಕದಲ್ಲಿ 1987–1992ರ ಅವಧಿಯಲ್ಲಿ ಜಾರಿಯಲ್ಲಿದ್ದ **ಮಂಡಲ ಪಂಚಾಯತಿ ಹಾಗು ಜಿಲ್ಲಾ ಪರಿಷತ್ ವ್ಯವಸ್ಥೆ** ಅಧಿಕಾರ ವಿಕೇಂದ್ರೀಕರಣ ಶಕ್ತಿಯನ್ನು ತೋರಿಸಿಕೊಟ್ಟಿತು. ಆಡಳಿತದಲ್ಲಿ ಜನಸಹಭಾಗಿತ್ವಕ್ಕೆ ಅವಕಾಶ ಕಲ್ಪಿಸುವ ಗ್ರಾಮ ಸಭೆಗಳ ರಚನೆ ಮತ್ತು ಆಡಳಿತದಲ್ಲಿ ಮಹಿಳೆಯರು ಮತ್ತು ಪರಿಶಿಷ್ಟರಿಗೆ ಅವಕಾಶ ಕಲ್ಪಿಸುವ ರಾಜಕೀಯ ಮೀಸಲಾತಿಯನ್ನು ಒದಗಿಸಿದ ಹೆಗ್ಗಳಿಕೆ ಅಬ್ದುಲ್ ನಜೀರ್ ಸಾಬ್ ಅವರಿಗೆ ಸಲ್ಲಬೇಕು. ಈ ವ್ಯವಸ್ಥೆಯ ಸಾಧನೆಯ ಪರಿಣಾಮವಾಗಿ ದೇಶದಾದ್ಯಂತ ಇಂದು ನಾವು ಕಾಣುತ್ತಿರುವ ಮೂರು ಹಂತಗಳ ಪಂಚಾಯತಿ ರಾಜ್ ವ್ಯವಸ್ಥೆ ಜಾರಿಗೆ ಬಂದಿದೆ.

**ಡಾ॥ ಎಲ್.ಎಮ್.ಸಿಂಘ್ವಿ ನೇತೃತ್ವದ ಸಮಿತಿಯ** ಶಿಫಾರಸ್ಸುಗಳ ಆಧಾರದಲ್ಲಿ 1993ರ ಏಪ್ರಿಲ್ 24ರಿಂದ ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

**1. ಗ್ರಾಮ ಪಂಚಾಯಿತಿ 2. ಮಧ್ಯಂತರ ಪಂಚಾಯತಿ (ತಾಲ್ಲೂಕು ಪಂಚಾಯತಿ) 3. ಜಿಲ್ಲಾ ಪಂಚಾಯತಿ**

### ಉಪ ಸಂಹಾರ

ಚುನಾಯಿತ ಸದಸ್ಯರುಗಳಿಗೆ ಮೌಖಿಕ ಪರಂಪರೆಯಲ್ಲಿ ನಡೆದುಬಂದ ನ್ಯಾಯ ವ್ಯವಸ್ಥೆ ಮತ್ತು ಅದರ ಮಿತಿ ಮಾತ್ರ ತಿಳಿದಿರುತ್ತದೆ. ಆದರೆ ಸಂವಿಧಾನದ ಆಶಯದಂತೆ ಪಂಚಾಯಿತಿ ಇತಿಹಾಸ ಮತ್ತು ವಿಕೇಂದ್ರೀಕರಣ ಹಾಗೂ ಪಂಚಾಯತ್ ವ್ಯವಸ್ಥೆ ನಡೆದುಬಂದ ದಾರಿಯನ್ನು ಮನದಟ್ಟು ಮಾಡಿಸಲು ಈ ಅಧಿವೇಶನ ಯಶಸ್ವಿಯಾಗಬೇಕು. ಹಾಗೆಯೇ ಪ್ರಮುಖ ಸಮಿತಿಗಳ ಮಹತ್ವ ಮತ್ತು ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ಮೂಲಕ ಯಶಸ್ವಿ ಪ್ರಜಾಪ್ರಭುತ್ವಕ್ಕೆ ಸಹಕಾರಿಯಾಗುವ ಆಶಯವನ್ನು ಈ ಅಧಿವೇಶನದಲ್ಲಿ ತಿಳಿದುಕೊಳ್ಳುವಂತಾಗಬೇಕು. ಸಂವಿಧಾನದ ಆಶಯವನ್ನು ಮನದಟ್ಟುಮಾಡಿಕೊಳ್ಳಲು ಚುನಾಯಿತ ಸದಸ್ಯರಿಗೆ ಈ ಅಧಿವೇಶನ ಉಪಯುಕ್ತವಾಗಬೇಕು.

ಅಧಿವೇಶನ – 3

# ಗ್ರಾಮ ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳು






ಗ್ರಾಮ ಸ್ವರಾಜ್ಯ





ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993



**ಉದ್ದೇಶ**

ಗ್ರಾಮ ಪಂಚಾಯಿತಿಯ ಸಮಗ್ರ ಅಭಿವೃದ್ಧಿಗೆ ನೀತಿ ನಿರ್ದೇಶಕ ತತ್ವಗಳು ಹೇಗೆ ಮಾರ್ಗದರ್ಶಕವೆಂಬುದನ್ನು ಪ್ರಶಿಕ್ಷಣಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದು.

ನೀತಿ ನಿರ್ದೇಶಕ ತತ್ವಗಳಿಗೆ ಅನುಗುಣವಾಗಿ ನಿರ್ವಹಿಸಬೇಕಾದ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಅರ್ಥ ಮಾಡಿಸುವುದು ಮತ್ತು ಅವುಗಳ ಪಟ್ಟಿ ಮಾಡಿಸುವುದು.

## ಉಪ ವಿಷಯಗಳು

ನೀತಿ ನಿರ್ದೇಶಕ ತತ್ವಗಳ ಹಿನ್ನೆಲೆ ಮತ್ತು ಸಂವಿಧಾನದಲ್ಲಿನ ಉಲ್ಲೇಖ.

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್** ಕಾಯ್ದೆಯಲ್ಲಿ ನೀತಿ ನಿರ್ದೇಶಕ ತತ್ವಗಳು.

ಗ್ರಾಮ ಪಂಚಾಯಿತಿ ಸರ್ವಾಂಗೀಣ ಅಭಿವೃದ್ಧಿಗೆ ನೀತಿ ನಿರ್ದೇಶಕ ತತ್ವಗಳ ಅಳವಡಿಕೆ.

**ವಿಧಾನ**

ಗುಂಪು ಚಟುವಟಿಕೆ/ಗುಂಪು ಚರ್ಚೆ

ತಜ್ಞ ಸಂಪನ್ಮೂಲ ವ್ಯಕ್ತಿಯವರಿಂದ ವಿಷಯ ಮಂಡನೆ (ವಿಡಿಯೋ ಪ್ರದರ್ಶನ)

**ಸಮಯ**

75 ನಿಮಿಷ

**ಪೂರಕ ಸಾಮಗ್ರಿಗಳು**

ವಿಡಿಯೋ

ಕೆಜಿ ಶೀಟ್ಸ್, ಮಾರ್ಕರ್ ಪೆನ್ನುಗಳು

**ನಿರೀಕ್ಷಿತ ಫಲಿತಾಂಶ**

ಚುನಾಯಿತ ಪ್ರತಿನಿಧಿಗಳು ನೀತಿ ನಿರ್ದೇಶಕ ತತ್ವಗಳು ಮನವರಿಕೆ ಮಾಡಿಕೊಂಡು ಗ್ರಾಮ ಪಂಚಾಯಿತಿ ಅಭಿವೃದ್ಧಿ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ಅಳವಡಿಸಿಕೊಂಡು ಅನುಷ್ಠಾನಗೊಳಿಸುವರು.

**ಅಧಿವೇಶನ ಪ್ರಕ್ರಿಯೆ**

ಸುಗಮಗಾರರು ಅಧಿವೇಶನದ ಆರಂಭದಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ–1993ಕ್ಕೆ 2016 ರಲ್ಲಿ ತಂದಿರುವ ತಿದ್ದುಪಡಿಗಳ ಬಗ್ಗೆ ಹಿಂದಿನ ಅಧಿವೇಶನಗಳಲ್ಲಿ ಕೇಳಿದ್ದೇವೆ ಮತ್ತು ಅರ್ಥೈಸಿಕೊಂಡಿದ್ದೇವೆ. ಈ ತಿದ್ದುಪಡಿಯ ಮತ್ತೊಂದು ಪ್ರಮುಖ ಅಂಶವೇ, ನೀತಿ ನಿರ್ದೇಶಕ ತತ್ವಗಳನ್ನು ಕಾಯಿದೆಯಲ್ಲಿ ಅಳವಡಿಸಿರುವುದು ಎಂಬುದನ್ನು ತಿಳಿಸುವುದು.

ನೀತಿ ನಿರ್ದೇಶಕ ತತ್ವಗಳು ಎಂಬುದನ್ನು ನಮ್ಮ ಕಾಯಿದೆಯ ಹೊರತಾಗಿ ಬೇರೆಲ್ಲಾದರೂ ಕೇಳಿದ್ದೀರಾ? ಎಂದು ಪ್ರಶಿಕ್ಷಣಾರ್ಥಿಗಳನ್ನು ಸುಗಮಗಾರರು ಪ್ರಶ್ನಿಸುವುದು. ಪ್ರಶಿಕ್ಷಣಾರ್ಥಿಗಳ ಉತ್ತರವನ್ನು ಆಲಿಸುವುದು ಮತ್ತು ಉತ್ತರಿಸಲು ಪ್ರೋತ್ಸಾಹಿಸುವುದು.

ನಂತರದಲ್ಲಿ ಅಧಿವೇಶನದ ವಸ್ತುವಿಷಯವನ್ನು ಅರ್ಥೈಸಿಕೊಳ್ಳಲು ಚಟುವಟಿಕೆಯೊಂದನ್ನು ಮಾಡೋಣವೆಂದು ತಿಳಿಸಿ, ಗ್ರಾಮ ಪಂಚಾಯಿತಿ ಮತ್ತು ಪ್ರಶಿಕ್ಷಣಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ 2 ಗುಂಪುಗಳನ್ನು ರಚಿಸುವುದು.

ಮೊದಲ ಗುಂಪಿಗೆ ನಿಮ್ಮ ಹಳ್ಳಿಯನ್ನು ಮಾದರಿ ಗ್ರಾಮವನ್ನಾಗಿ ಮಾಡಲು ಅಗತ್ಯವಿರುವ ಅಂಶಗಳನ್ನು ಪಟ್ಟಿ ಮಾಡಲು ತಿಳಿಸುವುದು.

ಎರಡನೇ ಗುಂಪಿಗೆ ಗ್ರಾಮಗಳಲ್ಲಿ ವಾಸಿಸಲು ಅತ್ಯಂತ ಅಗತ್ಯವಾಗಿ ಇರಲೇಬೇಕಾದ ಮೂಲಭೂತ ಸೌಕರ್ಯಗಳನ್ನು ಪಟ್ಟಿ ಮಾಡುವಂತೆ ತಿಳಿಸುವುದು.

ನಂತರ ಪ್ರತಿ ತಂಡದಿಂದ ಈ ಹಿಂದೆ ಚಟುವಟಿಕೆಯಲ್ಲಿ ತಂಡವನ್ನು ಪ್ರತಿನಿಧಿಸದ ವ್ಯಕ್ತಿಗಳು ಬಂದು ವಿಷಯವನ್ನು ವಿವರಿಸಬೇಕೆಂದು ತಿಳಿಸುವುದು ಮತ್ತು ಪ್ರತಿಯೊಂದು ತಂಡದವರಿಗೆ ಅವಕಾಶ ನೀಡುವುದು.

ಸುಗಮಗಾರರು ತಂಡದವರು ಮಂಡಿಸಿದ ವಿಷಯದಲ್ಲಿ ನೀತಿ ನಿರ್ದೇಶಕ ತತ್ವಗಳಿಗೆ ಪೂರಕವಾಗಿರುವ ಅಂಶಗಳನ್ನು ಒಂದೆಡೆ ಚಾರ್ಟಿನಲ್ಲಿ ಪಟ್ಟಿ ಮಾಡುವುದು. ನಂತರದಲ್ಲಿ ತಜ್ಞ ಸಂಪನ್ಮೂಲ ವ್ಯಕ್ತಿಗಳ 15 ನಿಮಿಷದ ವಿಡಿಯೋ ಚಿತ್ರವನ್ನು ವೀಕ್ಷಿಸುವುದು. ತಜ್ಞ ಸಂಪನ್ಮೂಲ ವ್ಯಕ್ತಿಗಳ ವಿಷಯ ಮಂಡನೆಯ ನಂತರ ಗ್ರಾಮ ಪಂಚಾಯಿತಿಯನ್ನು ಗಾಂಧೀಜಿಯವರ ಗ್ರಾಮ ಸ್ವರಾಜ್ಯವಾಗಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರಲ್ಲಿ ಅವಕಾಶ ನೀಡಲಾಗಿದೆ. ಮೂಲಭೂತ ಸೌಕರ್ಯಗಳ ಜೊತೆಗೆ ಗ್ರಾಮದಲ್ಲಿ ಜನರು ನೆಮ್ಮದಿಯಿಂದ ವಾಸಿಸಲು ಯೋಗ್ಯವಾದ ಪರಿಸರ ಮತ್ತು ಉತ್ತಮ ವಾತಾವರಣದ ಅತ್ಯಗತ್ಯವಾಗಿದ್ದು, ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳು ಒಗ್ಗಟ್ಟಾಗಿ ಶ್ರಮಿಸಬೇಕು ಎಂದು ತಿಳಿಸಿ, ಈ ನಿಟ್ಟಿನಲ್ಲಿ ಯೋಚನೆಗಳಿಗೆ ಚಾಲನೆ ನೀಡಿದಲ್ಲಿ, ತರಬೇತಿಯ ಅಂತಿಮದಲ್ಲಿ ತಮ್ಮ ಪಂಚಾಯಿತಿಯ ಗುರಿಗಳನ್ನು ನಿರ್ಧರಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿ ಅಧಿವೇಶನವನ್ನು ಮುಕ್ತಾಯಗೊಳಿಸುವುದು.

ಅಧಿವೇಶನದ ವಿಷಯ ಪರಿಚಯ.


ಪರಿಚಯ ಅಧಿವೇಶನದ ಆರಂಭದಲ್ಲಿ ಪ್ರಶಿಕ್ಷಣಾರ್ಥಿಗಳನ್ನು 2 ಗುಂಪುಗಳಲ್ಲಿ ವಿಂಗಡಿಸುವುದು.

ಗುಂಪುಚರ್ಚೆ.

ಚರ್ಚಿಸಿದ ವಿಷಯಗಳ ಮಂಡನೆ.

ತಜ್ಞ ಸಂಪನ್ಮೂಲ ವ್ಯಕ್ತಿಯವರಿಂದ ವಿಷಯ ಮಂಡನೆ.

ಅಧಿವೇಶನದ ಸಾರಾಂಶದೊಂದಿಗೆ ಉಪಸಂಹಾರ.








**ತರಬೇತಿ ವಿಷಯ ಕುರಿತ ಟಿಪ್ಪಣಿ**

## ನೀತಿ ನಿರ್ದೇಶಕ ತತ್ವಗಳು

ಭಾರತ ಸಂವಿಧಾನದಲ್ಲಿ ನೀತಿ ನಿರ್ದೇಶಕ ತತ್ವಗಳು ಸರ್ಕಾರದ ಕಾರ್ಯನೀತಿಯ ಮಾರ್ಗದರ್ಶಕಗಳಾಗಿವೆ. ಅಷ್ಟೇಅಲ್ಲ, ಕಲ್ಯಾಣ ರಾಜ್ಯ ಸ್ಥಾಪನೆಯ ಮೂಲ ಆಶಯವನ್ನು ಹೊಂದಿವೆ. ರಾಜ್ಯ ನೀತಿ ನಿರ್ದೇಶಕ ತತ್ವವು ಅತಿ ಪ್ರಮುಖವಾದ ಲಕ್ಷಣಗಳಲ್ಲೊಂದಾಗಿದೆ. ಇದರಲ್ಲಿ ರಾಜ್ಯವೆಂಬ ಪದವನ್ನು ವಿಶಾಲವಾದ ಅರ್ಥದಲ್ಲಿ ಬಳಸಲಾಗಿದ್ದು, ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳು ನಿರ್ವಹಿಸಬೇಕಾಗಿದೆ ಎಂದು ಪ್ರಸ್ತಾಪಿಸಿದೆ.

ನೀತಿ ನಿರ್ದೇಶಕ ತತ್ವಗಳು ನೈತಿಕ ತಳಹದಿಯ ಮೇಲೆ ನಿಂತಿದ್ದು, ಇವುಗಳನ್ನು ರಾಜ್ಯ ಕಾರ್ಯಗತಗೊಳಿಸದಿದ್ದರೆ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿರುವುದಿಲ್ಲ. ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರಕಾರ ರಾಜ್ಯ ನೀತಿ ನಿರ್ದೇಶಕ ತತ್ವಗಳು ಸರ್ಕಾರವು ಹೇಗೆ ಕಾರ್ಯಪ್ರವೃತ್ತವಾಗಬೇಕು ಎಂಬುದರ ದಿಕ್ಸೂಚಿಗಳಾಗಿವೆ. ಇದೇ ಅರ್ಥದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ಕ್ಕೆ 2ನೇ ತಿದ್ದುಪಡಿ ಮೂಲಕ ಹೊಸದಾಗಿ ಅಧ್ಯಾಯ 1 ಎ ಪ್ರಕರಣ 2 ಎ ನಲ್ಲಿ ಭಾರತದ ಸಂವಿಧಾನದ ರಾಜ್ಯ ನೀತಿ ನಿರ್ದೇಶಕ ತತ್ವದ ಮಾದರಿಯಲ್ಲಿಯೆ ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳನ್ನು ಸೇರಿಸಿ ಜಾರಿಗೊಳಿಸುವ ಮೂಲಕ ಪಂಚಾಯಿತಿಗಳು ಇವುಗಳನ್ನು ಪ್ರೋತ್ಸಾಹಿಸಲು ಶ್ರಮಿಸತಕ್ಕದ್ದು ಎಂದು ಉಲ್ಲೇಖಿಸಲಾಗಿರುತ್ತದೆ.

ಪಂಚಾಯತ್ ನೀತಿ ನಿರ್ದೇಶಕ ತತ್ವಗಳು ಗ್ರಾಮ ಪಂಚಾಯಿತಿಯ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ಗ್ರಾಮ ಪಂಚಾಯಿತಿಯ ಕಾರ್ಯನೀತಿಗೆ ಮಾರ್ಗದರ್ಶಕಗಳಾಗಿವೆ. ಕಾಯ್ದೆಯಲ್ಲಿ ಒಟ್ಟು 10 ಅಂಶಗಳಲ್ಲಿ ಸೂಚಿಸಲಾಗಿದೆ. ಅವುಗಳೆಂದರೆ,

1. ಎಲ್ಲರಿಗೂ ಶುದ್ಧ ಕುಡಿಯುವ ನೀರು, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಗ್ರಾಮ ಸಮುದಾಯದ ಜೀವನಮಟ್ಟವನ್ನು ಮತ್ತು ಬದುಕಿನ ಗುಣಮಟ್ಟವನ್ನು ಸುಧಾರಿಸುವುದು.
2. ಅಗತ್ಯ ಗ್ರಾಮೀಣ ಮೂಲ ಸೌಲಭ್ಯಗಳನ್ನು ಒದಗಿಸುವುದು ಮತ್ತು ಗ್ರಾಮೀಣ ಸಮುದಾಯಗಳು ಮತ್ತು ಸಂಘಟನೆಗಳನ್ನು ತನ್ನ ಸುಧಾರಣೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದು.
3. ತನ್ನ ನಿವಾಸಿಗಳ ಆರ್ಥಿಕ, ಸಾಮಾಜಿಕ ಮತ್ತು ಪರಿಸರಾತ್ಮಕ ಗುಣಮಟ್ಟವನ್ನು ವೃದ್ಧಿಸುವುದಕ್ಕಾಗಿ ಆಸ್ತಿಗಳ ನಿರ್ವಹಣೆ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಪಂಚಾಯಿತಿ ಪ್ರದೇಶದಲ್ಲಿ ಪ್ರಜಾಸತ್ತಾತ್ಮಕ ಪ್ರಾತಿನಿಧ್ಯ, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಅರ್ಥಪೂರ್ಣ ಸಮುದಾಯವನ್ನು ತೊಡಗಿಸಿಕೊಳ್ಳುವುದು.
4. ಪಂಚಾಯತ್ ಅಧೀನದಲ್ಲಿರುವ ಸಂಪನ್ಮೂಲಗಳನ್ನು ಬಳಕೆ ಮಾಡಿಕೊಂಡು ಪಂಚಾಯಿತಿ ಪ್ರದೇಶದ ಅರಣ್ಯ ಮತ್ತು ವನ್ಯ ಜೀವಿಗಳನ್ನು ಸುಸ್ಥಿರ ಅಭಿವೃದ್ಧಿಗೆ ಸಮರ್ಪಕವಾಗಿ ಮುಂದಿನ ಪೀಳಿಗೆಗಾಗಿ ಅವುಗಳನ್ನು ಸಂರಕ್ಷಿಸುವ ಸಮರ್ಥನೀಯ ವಿಧಾನವನ್ನು ಅನುಸರಿಸುವುದು.
5. ಸ್ಥಳೀಯ ಸಮುದಾಯದ ಕಲೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ರಕ್ಷಿಸುವುದು ಮತ್ತು ಕಾಪಾಡುವುದು ಹಾಗೂ ಪ್ರವಾಸೋದ್ಯಮಕ್ಕೆ ಉತ್ತೇಜನವನ್ನು ನೀಡುವುದು.
6. ನವಣೆ, ಸಜ್ಜೆ, ಬಿಳಿ ಜೋಳ, ಸಾಮೆ, ಸಾವೆ, ಕೋರ್ಲೆ ಇತ್ಯಾದಿ ಮತ್ತು ಔಷಧೀಯ ಮೌಲ್ಯವುಳ್ಳ ಗಿಡಮೂಲಿಕೆಗಳಂಥ ದೇಶಿ ವೈವಿಧ್ಯತೆಯುಳ್ಳ ಬೀಜಗಳನ್ನು ಸಂರಕ್ಷಿಸುವುದು, ಅಭಿವೃದ್ಧಿಪಡಿಸುವುದು ಮತ್ತು ಹಂಚಿಕೆ ಮಾಡುವುದು.
7. ಕೃಷಿ–ಕೈಗಾರಿಕಾ ಕೇಂದ್ರಗಳು, ಗ್ರಾಮೀಣ ಗುಡಿ ಕೈಗಾರಿಕೆಗಳನ್ನು ಉತ್ತೇಜಿಸುವ ಮೂಲಕ ಉದ್ಯೋಗಗಳನ್ನು ಸೃಜಿಸುವುದು ಮತ್ತು ವ್ಯವಹಾರ ಕಾರ್ಯಾಚರಣೆಗಳನ್ನು ಸುಗಮಗೊಳಿಸುವುದಕ್ಕಾಗಿ ದಸ್ತಾವೇಜುಗಳನ್ನು ಸ್ವೀಕರಿಸುವ ಏಕಗವಾಕ್ಷಿ ವ್ಯವಸ್ಥೆ ಮಾಡುವುದು.


8. ರಾಷ್ಟ್ರೀಯ ಮತ್ತು ರಾಜ್ಯ ಕಾರ್ಯನೀತಿಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸಲು ಸಮರ್ಥಗೊಳಿಸುವುದಕ್ಕಾಗಿ ಬೇರುಮಟ್ಟದಲ್ಲಿ ಸಹಕಾರಿ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಮೂಲಕ ಸಹಕಾರಿ ಮನೋಭಾವ ಮತ್ತು ವಾತಾವರಣವನ್ನು ನಿರ್ಮಿಸುವುದು.
9. ಗ್ರಾಮೀಣ ಪ್ರದೇಶಗಳಲ್ಲಿ ಜನರ ಕೌಶಲ, ಜ್ಞಾನ ಮತ್ತು ಇತರ ಸಾಮರ್ಥ್ಯಗಳಿಗೆ ಅನುಗುಣವಾಗಿ ಗ್ರಾಮೀಣ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಸಬಲೀಕರಣಗೊಳಿಸುವುದು.
10. ಶಾಂತಿಯುತ ಸಮಾಜ ಮತ್ತು ಕೋಮುಸೌಹಾರ್ದವನ್ನು ಸಂರಕ್ಷಿಸುವ ಹಾಗೂ ಎಲ್ಲಾ ರೀತಿಯ ಹಿಂಸೆಗಳನ್ನು ತಡೆಗಟ್ಟುವ ಸುರಕ್ಷಿತ ಮತ್ತು ಸಹನಶೀಲ ಸಮುದಾಯವನ್ನು ಪೋಷಿಸುವುದು.

ಗ್ರಾಮದ ನಿವಾಸಿಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದಾದರೂ ಒಂದು ನಿರಾಶಾದಾಯಕ ಪ್ರವೃತ್ತಿ ಅಥವಾ ಆಲೋಚನೆ ಹಬ್ಬಿದಾಗ ಅದು ನೆಲೆಗೊಳ್ಳುವುದನ್ನು ತಡೆಯುವುದು ಗ್ರಾಮ ಪಂಚಾಯಿತಿಯ ನೀತಿ ನಿರ್ದೇಶನ ತತ್ವಗಳ ಪ್ರಮುಖ ಆಶಯವಾಗಿರುತ್ತದೆ. ಹಣಕಾಸಿನ ಋಣಭಾರ, ಬಡತನ ಅಥವಾ ಇತರ ಕಾರಣಗಳಿಗಾಗಿ ಆತ್ಮಹತ್ಯೆಯಂತಹ ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಮಾನಸಿಕ ಸ್ಥಿತಿಯಿಂದ ಪೀಡಿತರಾದ ರೈತರು ಮತ್ತು ಇತರರು ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳ ಒತ್ತಡಕ್ಕೆ ಸಿಲುಕಿ ನಾಜೂಕಾದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಸಂದರ್ಭಗಳಲ್ಲಿ ಅವರೆಡೆಗೆ ಗ್ರಾಮ ಪಂಚಾಯಿತಿಯು ವಿಶೇಷ ಗಮನಹರಿಸತಕ್ಕದ್ದು ಮತ್ತು ಗ್ರಾಮ ಪಂಚಾಯಿತಿಯ ಸದಸ್ಯರು ಅಂತಹ ವ್ಯರ್ಥ ಸಾಹಸಗಳ ಮನಸ್ಥಿತಿಯಿಂದ ಉಂಟಾಗುವ ಪರಿಣಾಮಗಳ ಬಗ್ಗೆ ನಿವಾಸಿಗಳನ್ನು ಜಾಗೃತಗೊಳಿಸಿ ಅವರಲ್ಲಿ ವಿಶ್ವಾಸ ಹೆಚ್ಚಿಸುವ ಕ್ರಮ ಕೈಗೊಳ್ಳುವುದು.

ಪಂಚಾಯತ್ ರಾಜ್ ಸಂಸ್ಥೆಗಳು ಪಂಚಾಯಿತಿ ನೀತಿ ನಿರ್ದೇಶನ ತತ್ವಗಳಿಗುಣವಾಗಿ ಕಾರ್ಯೋನ್ಮುಖವಾಗಿ ತನ್ನ ಮೂಲಕ ಗ್ರಾಮೀಣ ಜನರ ಬದುಕಿನಲ್ಲಿ ನೆಮ್ಮದಿ ಮತ್ತು ಸಮೃದ್ಧಿಯ ಸುಂದರ ಜೀವನಕ್ಕೆ ಅಡಿಪಾಯ ಹಾಕಬೇಕಾಗಿರುತ್ತದೆ. ಗ್ರಾಮ ಪಂಚಾಯಿತಿಯು ನಿರ್ವಹಿಸುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವಾಗ ಈ ಮೇಲ್ಕಂಡ ತತ್ವಗಳನ್ನು ತಳಹದಿಯಾಗಿ ಬಳಸಬೇಕಾಗುತ್ತದೆ. ಈ ನಿರ್ದೇಶಕ ತತ್ವಗಳು ಕಾನೂನಿನ ತಳಹದಿಯ ಮೇಲೆ ರಚಿತವಾಗಿರದೆ ನೈತಿಕ ತಳಹದಿಯ ಮೇಲೆ ರಚಿತವಾಗಿವೆ. ಆದರೂ ಗ್ರಾಮ ಪಂಚಾಯಿತಿಗಳಿಗೆ ಈ ತತ್ವಗಳು ನೈತಿಕ ಕರ್ತವ್ಯಗಳಾಗಿರುತ್ತವೆ.


## ಉಪ ಸಂಹಾರ

ಸ್ಥಳೀಯ ಸರ್ಕಾರದ ಕನಸನ್ನು ಸಕಾರಗೊಳಿಸಲು ಮಾರ್ಗಸೂಚಿಯಾಗಿ ನೀತಿ ನಿರ್ದೇಶಕ ತತ್ವವು ರಚನೆಯಾಗಿರುತ್ತದೆ. ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಗ್ರಾಮ ಪಂಚಾಯಿತಿಗಳು ನಿರ್ವಹಿಸಬೇಕಾಗಿರುವ ಪ್ರಕಾರ್ಯಗಳಿಗೆ ನೀತಿ ನಿರ್ದೇಶಕ ತತ್ವವು ಬುನಾದಿಯಾಗಿರುತ್ತದೆ. ಇದು ಗ್ರಾಮ ಪಂಚಾಯಿತಿಯ ದೂರದೃಷ್ಟಿಯನ್ನು ರೂಪಿಸಿಕೊಳ್ಳಲು ಮತ್ತು ಗ್ರಾಮೀಣ ಜನರ ಸಮೃದ್ಧ, ನೆಮ್ಮದಿಯ ಬದುಕಿಗೆ ಸಹಕಾರಿಯಾಗಿದೆ ಎಂಬುದನ್ನು ಚುನಾಯಿತ ಸದಸ್ಯರಿಗೆ ಮನವರಿಕೆ ಮಾಡಿಕೊಡಲು ಈ ಅಧಿವೇಶನ ಸಹಕಾರಿಯಾಗಬೇಕು.



## ಅಧಿವೇಶನ – 4

# ಗ್ರಾಮ ಪಂಚಾಯಿತಿ ರಚನೆ, ಆಡಳಿತಾತ್ಮಕ ಸ್ವರೂಪ, ಅಧಿಕಾರಗಳು ಮತ್ತು ಹೊಣೆಗಾರಿಕೆಗಳು






## ಉದ್ದೇಶ

ಗ್ರಾಮ ಪಂಚಾಯಿತಿಗಳ ರಚನೆ ಪ್ರಕ್ರಿಯೆ, ಸ್ವರೂಪ ಪರಿಚಯಿಸುವುದು.

ಕಾಯ್ದೆ ಬದ್ದವಾದ ಅಧಿಕಾರಗಳು ಮತ್ತು ಜವಾಬ್ದಾರಿಗಳನ್ನು ಮನವರಿಕೆ ಮಾಡಿಕೊಡುವುದು.

ಸಮಗ್ರ ಅಭಿವೃದ್ಧಿಗೆ ಅಧಿಕಾರ ವಿಕೇಂದ್ರೀಕರಣದ ಮಹತ್ವವನ್ನು ಅರ್ಥೈಸುವುದು.

## ಉಪ ವಿಷಯಗಳು

ಸಮಯ: 60 ನಿಮಿಷಗಳು

ಭೌಗೋಳಿಕ ಮತ್ತು ಜನಸಂಖ್ಯೆ ಆಧಾರಿತ ವಿಂಗಡಣೆ

ವಾರ್ಡ್‌ಗಳ ರಚನೆ ಮತ್ತು ಚುನಾವಣೆ

ಗ್ರಾಮ ಪಂಚಾಯಿತಿಯ ಆಡಳಿತ ಮಂಡಳಿ ಮತ್ತು ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಸ್ಥಾಯಿ ಸಮಿತಿಗಳು ಮತ್ತು ಉಪ ಸಮಿತಿಗಳು

ಸಿಬ್ಬಂದಿ ವ್ಯವಸ್ಥೆ ಮತ್ತು ನಿರ್ವಹಿಸಬೇಕಾದ ಜವಾಬ್ದಾರಿಗಳು

ಗ್ರಾಮ ಪಂಚಾಯಿತಿ ಅಧ್ಯಕ್ಷರ ಅಧಿಕಾರಗಳು ಮತ್ತು ಜವಾಬ್ದಾರಿಗಳು

ಗ್ರಾಮ ಪಂಚಾಯಿತಿ ಸದಸ್ಯರುಗಳ ಅಧಿಕಾರಗಳು ಮತ್ತು ಜವಾಬ್ದಾರಿಗಳು

## ವಿಧಾನ

ಅಧ್ಯಕ್ಷರಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರುವ ಒಬ್ಬರು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಪಿ.ಡಿ.ಒ, ಒಬ್ಬರು ಮತ್ತು ವಿಷಯ ತಜ್ಞರನೊಳಗೊಂಡ ತಂಡದಿಂದ ಪ್ಯಾನಲ್ ಚರ್ಚೆಯ ಮೂಲಕ ಮಾಹಿತಿ ನೀಡುವುದು.

ಪ್ಯಾನಲ್ ಚರ್ಚೆ ಮುಗಿದ ನಂತರ ಸ್ಥಳೀಯವಾಗಿ ವಿವರವಾದ ಮಾಹಿತಿಯನ್ನು ಸಂವಾದದ ಮೂಲಕ ನೀಡುವುದು

## ಪೂರಕ ಸಾಮಗ್ರಿಗಳು

ಪ್ಯಾನಲ್ ಚರ್ಚೆಯ ಮುದ್ರಿತ ಸಿ.ಡಿ

ಸಂವಾದದ ಮೂಲಕ ಮಾಹಿತಿ ನೀಡಲು ಅಗತ್ಯವಿರುವ ಸುತ್ತೋಲೆಗಳು ಮತ್ತು ಪತ್ರ

ಚಾರ್ಟ್ ಮತ್ತು ಮಾರ್ಕ್‌ರ್ ಪೆನ್

ಪಿ.ಪಿ.ಟಿ.


## ನಿರೀಕ್ಷಿತ ಫಲಿತಾಂಶ

ಶಿಬಿರಾರ್ಥಿಗಳು ಗ್ರಾಮ ಪಂಚಾಯಿತಿಗಳ ರಚನೆ ಪ್ರಕ್ರಿಯೆ, ಸ್ವರೂಪ ಮತ್ತು ಸಾಮರ್ಥ್ಯವನ್ನು ಅರಿತುಕೊಳ್ಳುತ್ತಾರೆ.

ಕಾಯ್ದೆಬದ್ಧವಾಗಿ ತಮಗೆ ಇರುವ ಅಧಿಕಾರಗಳ ಜೊತೆಗೆ ತಾವು ನಿರ್ವಹಿಸಬೇಕಾಗಿರುವ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕಾದ ಅವಶ್ಯಕತೆಯ ಕುರಿತು ಮನವರಿಕೆ ಮಾಡಿಕೊಳ್ಳುತ್ತಾರೆ.

ಗ್ರಾಮ ಸರಕಾರ ಹೊಂದಿರುವ ನಿಯಂತ್ರಣಾಧಿಕಾರಗಳನ್ನು ಸಮಗ್ರವಾಗಿ ಬಳಸಿಕೊಳ್ಳುವ ಮೂಲಕ ದಕ್ಷ ಆಡಳಿತವನ್ನು ನೀಡಿ ಸಮಗ್ರ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವೆಂದು ಅರಿತುಕೊಳ್ಳುತ್ತಾರೆ.





ಅಧಿವೇಶನ ಪ್ರಕ್ರಿಯೆ

**ಪ್ಯಾನಲ್‌ಚರ್ಚೆ:**

ಪ್ಯಾನಲ್ ಚರ್ಚೆಯಲ್ಲಿ ಮೊದಲಿಗೆ ಸುಗಮಕಾರರು ಬಂದಿರುವ ತಜ್ಞ ಸಂಪನ್ಮೂಲ ವ್ಯಕ್ತಿಗಳು, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಸ್ವಾಗತಿಸುತ್ತಾರೆ. ನಂತರ ಅಧಿವೇಶನಕ್ಕೆ ಪೂರಕವಾಗಿ ಚರ್ಚೆ ಮಾಡಬಹುದಾದಂತಹ ವಿಷಯಗಳ ಕುರಿತು ಸಂಕ್ಷಿಪ್ತ ಪರಿಚಯದೊಂದಿಗೆ ಪ್ರಾರಂಭಿಸಿ, ಮೊದಲಿಗೆ ಗ್ರಾಮ ಪಂಚಾಯಿತಿ ರಚನೆ ಮತ್ತು ಸ್ವರೂಪದ ಬಗ್ಗೆ ತಜ್ಞ ಸಂಪನ್ಮೂಲ ವ್ಯಕ್ತಿಗೆ ತಿಳಿಸುವಂತೆ ಕೇಳುವುದರೊಂದಿಗೆ ಕಾಯ್ದೆಯನುಸಾರ ಪ್ರಮುಖ ಅಂಶಗಳು ಬಿಟ್ಟು ಹೋದಲ್ಲಿ ಅದನ್ನು ತಜ್ಞ ಸಂಪನ್ಮೂಲ ವ್ಯಕ್ತಿಗೆ ಪ್ರಶ್ನೆ ಹಾಕುವ ಮುಖೇನ ಆ ವಿಚಾರವನ್ನು ಚರ್ಚೆಯೊಂದಿಗೆ ಪರಿಪೂರ್ಣಗೊಳಿಸುತ್ತಾರೆ. ಹೀಗೆ ಅಧ್ಯಕ್ಷರು, ಉಪಾಧ್ಯಕರು ಮತ್ತು ಸದಸ್ಯರ ಅಧಿಕಾರ ಹಾಗೂ ಜವಾಬ್ದಾರಿಗಳ ಬಗ್ಗೆ ಮಾಜಿ ಅಧ್ಯಕ್ಷರನ್ನು ಮತ್ತು ಅಧಿಕಾರಿ/ಸಿಬ್ಬಂದಿಗಳ ಜವಾಬ್ದಾರಿಗಳ ಕುರಿತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ಪ್ರಶ್ನೆಗಳೊಂದಿಗೆ ಚರ್ಚಿಸುತ್ತಾ ಶಿಬರಾರ್ಥಿಗಳಿಗೆ ಪ್ರಾಥಮಿಕವಾಗಿ ಅಗತ್ಯವಿರುವ ವಿಷಯಗಳು ಹೊರಬರುವಂತೆ ಮತ್ತು ಸ್ಪಷ್ಟತೆ ಸಿಗುವಂತೆ ಸುಮಾರು 25 ನಿಮಿಷಗಳ ಕಾಲ ಈ ಒಂದು ಪ್ಯಾನಲ್ ಚರ್ಚೆಯನ್ನು ರೆಕಾರ್ಡಿಂಗ್ ಮಾಡಿ ತರಬೇತಿ ಸಂದರ್ಭದಲ್ಲಿ ಬಳಸುವುದು.

ರೆಕಾರ್ಡಿಂಗ್ ಮಾಡಿದ ವಿಡಿಯೋ ಪ್ಲೇ ಮಾಡಿದ ನಂತರ ಶಿಬಿರಾರ್ಥಿಗಳೊಂದಿಗೆ ಸುಗಮಗಾರರು ತ್ವರಿತ ಪ್ರತಿಕ್ರಿಯೆಯೊಂದಿಗೆ ಗೊಂದಲಗಳು ಮತ್ತು ಮಾಹಿತಿ ಕೊರತೆಗಳಿದ್ದಲ್ಲಿ ಅವುಗಳನ್ನು ಸ್ಪಷ್ಟಪಡಿಸಿ ಅಧಿವೇಶನವನ್ನು ಮುಕ್ತಾಯಗೊಳಿಸುವುದು.

ಪ್ಯಾನಲ್ ಚರ್ಚೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸುವುದು.

- ಪ್ಯಾನಲ್‌ನಲ್ಲಿ ಚರ್ಚೆಯ ಮೂಲಕ ಮಾಹಿತಿ ಕೊಡುವ ಚುನಾಯಿತ ಪ್ರತಿನಿಧಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ತಜ್ಞ ಸಂಪನ್ಮೂಲ ವ್ಯಕ್ತಿಯ ಸಂಕ್ಷಿಪ್ತ ಪರಿಚಯ ಮಾಡಿಸಬೇಕು.
- ಅವರು ಮಾಡಿರುವ ಸಾಧನೆಯನ್ನು ತಿಳಿಸಬೇಕು.

ಗ್ರಾಮ ಪಂಚಾಯಿತಿ ಜನರಿಗೆ ಹತ್ತಿರವಿರುವ ಸ್ಥಳೀಯ ಸರ್ಕಾರವಾಗಿದ್ದು, ಚುನಾಯಿತ ಸದಸ್ಯರು ತಮ್ಮ ಅಧಿಕಾರವನ್ನು ಮತ್ತು ಸಿಕ್ಕಿರುವ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು ಉತ್ತಮ ಆಡಳಿತವನ್ನು ನೀಡಲು ಸಾಧ್ಯವೆಂದು ಮನವರಿಕೆ ಮಾಡಬೇಕು.

ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗ ಮಾತ್ರವಲ್ಲದೆ ತಮ್ಮ ವ್ಯಾಪ್ತಿಗೆ ಬರುವ ವಿವಿಧ ಇಲಾಖೆಯ ಸಿಬ್ಬಂದಿಗಳ ಕೆಲಸಗಾರರ ಮೇಲ್ವಿಚಾರಣೆ ಮಾಡುವುದಲ್ಲದೆ ಅವರಿಗೆ ಗ್ರಾಮ ಪಂಚಾಯಿತಿಯಿಂದ ನೀಡಬಹುದಾದ ಸಹಕಾರದ ಬಗ್ಗೆ ಅರಿತುಕೊಂಡು ಸಮನ್ವಯ ಸಾಧಿಸುವ ಕುರಿತು ತಿಳಿಸಬೇಕು.

ತಳಹಂತದ ಗ್ರಾಮ ಸರಕಾರವಾಗಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಕಾಯ್ದೆಬದ್ಧವಾಗಿ ನೀಡಲಾಗಿರುವ ನಿಯಂತ್ರಣಾಧಿಕಾರಗಳನ್ನು ಅಭಿವೃದ್ಧಿಗೆ ಪೂರಕವಾಗಿ ಬಳಸುವ ಕುರಿತು ಸ್ಪಷ್ಟತೆ ಮೂಡಿಸಬೇಕು.




ತರಬೇತಿ ವಿಷಯ ಕುರಿತ ಟಿಪ್ಪಣಿ

## ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯ ಆಡಳಿತಾತ್ಮಕ ಸ್ವರೂಪ

ಕಳೆದ ನಾಲ್ಕು ದಶಕಗಳಿಂದ ಬೇರೆ ಬೇರೆ ಘಟ್ಟಗಳ ಬೇರೆ ಬೇರೆ ಸ್ವರೂಪಗಳಲ್ಲಿ ಅಸ್ತಿತ್ವದಲ್ಲಿದ್ದ ಸ್ಥಳೀಯ ಸಂಸ್ಥೆಗಳಿಗೆ **1993**ರಲ್ಲಿ ಒಂದು ರೂಪ ದೊರೆಯಿತು. ಸಂವಿಧಾನಕ್ಕೆ **73**ನೇ ತಿದ್ದುಪಡಿಯನ್ನು ತರುವ ಮೂಲಕ ಪಂಚಾಯತ್ ಸಂಸ್ಥೆಗಳ ರಚನೆ, ಗ್ರಾಮ ಸಭೆಗಳಿಗೆ ಸಾಂವಿಧಾನಿಕ ಮಾನ್ಯತೆಯನ್ನು ನೀಡಲಾಯಿತು. ಈಗ ನಾವು ಈ ತಿದ್ದುಪಡಿಯ ಪ್ರಮುಖ ಅಂಶಗಳನ್ನು ನೋಡೋಣ.

### ಪಂಚಾಯತ್ ರಚನೆ

ಎಲ್ಲಾ ರಾಜ್ಯಗಳ ಗ್ರಾಮೀಣ ಭಾಗದಲ್ಲಿ ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಯಲ್ಲಿದೆ.

ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತ್, ಗ್ರಾಮ ಹಾಗೂ ಜಿಲ್ಲೆಗಳ ಮಧ್ಯದ ಹಂತದಲ್ಲಿ ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಅಸ್ತಿತ್ವದಲ್ಲಿದೆ.

ಯಾವ ರಾಜ್ಯಗಳಲ್ಲಿ ಜನಸಂಖ್ಯೆ **20** ಲಕ್ಷಗಳಿಗಿಂತ ಕಡಿಮೆಯಿದೆಯೋ ಅಲ್ಲಿ ಎರಡು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯಿರಬೇಕು. ಅಂತಹ ರಾಜ್ಯಗಳಲ್ಲಿ ಮಧ್ಯಂತರ ಪಂಚಾಯತನ್ನು ರಚಿಸುವ ಅಗತ್ಯವಿಲ್ಲ. (ಉದಾ: ಸಿಕ್ಕಿಂ, ನಾಗಾಲ್ಯಾಂಡ್)

### ಪಂಚಾಯತ್ ಸ್ವರೂಪ

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಆಯ್ಕೆಯಾಗುವ ಪ್ರತಿನಿಧಿಗಳು ನಿಗದಿಪಡಿಸಿದ ಚುನಾವಣಾ ಕ್ಷೇತ್ರದಿಂದ ನೇರವಾಗಿ ಮತದಾರರಿಂದಲೇ ಆಯ್ಕೆಯಾಗಬೇಕು, ರಾಜಕೀಯ ಪಕ್ಷಗಳು ನೇರವಾಗಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಭಾಗವಹಿಸುವ ಹಾಗೆ ಇಲ್ಲ. ಪ್ರತಿ **400** ಜನಸಂಖ್ಯೆಗೆ ಒಬ್ಬ ಸದಸ್ಯರಂತೆ ಗ್ರಾಮ ಪಂಚಾಯತ್‌ಗೆ ಚುನಾಯಿತರಾಗುತ್ತಾರೆ.

ಈ ಪ್ರಕ್ರಿಯೆಯಲ್ಲಿ, ನಾಮನಿರ್ದೇಶನಕ್ಕಾಗಲೀ ಅಥವಾ ಸೇರ್ಪಡೆ (co-opt)ಗಾಗಲೀ ಅವಕಾಶವಿಲ್ಲ.


ಗ್ರಾಮ ಪಂಚಾಯತ್‌ನ್ನು ಹೊರತುಪಡಿಸಿ ಉಳಿದ ಹಂತಗಳಿಗೆ ವಿಧಾನ ಸಭಾ ಸದಸ್ಯರು/ ಸಂಸತ್ ಸದಸ್ಯರು ಪಾಲ್ಗೊಳ್ಳಬಹುದು.

### ಸ್ಥಾಯಿ ಸಮಿತಿಗಳ ರಚನೆ

ಪ್ರತಿ ಗ್ರಾಮ ಪಂಚಾಯತ್ ಚುನಾವಣೆಯ ಮೂಲಕ **ಮೂರು** ಸ್ಥಾಯಿ ಸಮಿತಿಗಳನ್ನು ರಚಿಸಬೇಕಿದೆ.

ಪ್ರತಿ ಸಮಿತಿಯಲ್ಲಿ ಸಮಿತಿಯ ಅಧ್ಯಕ್ಷರು ಸೇರಿದಂತೆ **3–5** ಸದಸ್ಯರಿರುತ್ತಾರೆ. ಸಮಿತಿಯ ಅವಧಿಯು ಚುನಾವಣೆಯ ದಿನಾಂಕದಿಂದ **30** ತಿಂಗಳು ಆಗಿರುತ್ತದೆ.

ಗ್ರಾಮ ಪಂಚಾಯತ್ ಮೇಲ್ಕಂಡ ಸಮಿತಿಗಳನ್ನು ಹೊರತುಪಡಿಸಿ, ಇತರ ಉದ್ದೇಶಗಳಿಗೆ ಸಂಬಂಧಿಸಿದಂತೆ ಸದಸ್ಯರನ್ನು ಒಳಗೊಂಡಂತೆ **61(ಎ)**ನಲ್ಲಿ ಉಪ ಸಮಿತಿಗಳನ್ನು ರಚಿಸಲು ಅವಕಾಶ ನೀಡಲಾಗಿದೆ.





**ಜವಾಬ್ದಾರಿಗಳು ಮತ್ತು ಹೊಣೆಗಾರಿಕೆ**

ಗ್ರಾಮಗಳ ಸಂಪೂರ್ಣ ಅಭಿವೃದ್ಧಿಯ ಜವಾಬ್ದಾರಿಗಳ ಹೊಣೆಗಾರಿಕೆ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿಗಳದಾಗಿರುತ್ತದೆ.

ಪಂಚಾಯತ್‌ನ ಪ್ರತಿಯೊಬ್ಬ ಸದಸ್ಯನು ಗ್ರಾಮ ಪಂಚಾಯತ್ ಕಾಯ್ದೆಯ ಪ್ರಕರಣ 110ಎ ಅಡಿಯಲ್ಲಿ ವಿವರಿಸಿರುವ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಹೊಂದಿರುತ್ತಾರೆ.

ಗ್ರಾಮ ಪಂಚಾಯಿತಿಗಳಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ ಮತ್ತು ಎರಡನೇ ದರ್ಜೆಯ ಲೆಕ್ಕ ಸಹಾಯಕರುಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.

ಅವನಿಗೆ ವಿಧಿಸಲಾದ ಎಲ್ಲಾ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಅಥವಾ ಪ್ರಧಾನ ಮಾಡಲಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು (ಕಾರ್ಯದರ್ಶಿ ಮತ್ತು ಇತರ ನೌಕರರು ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಆತನು ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ನೆರವಾಗತಕ್ಕದ್ದು).

**ಪಂಚಾಯತ್ ಸಂಸ್ಥೆಗಳ ಕಾಲಾವಧಿ**

ಪ್ರತಿ ಪಂಚಾಯತ್‌ನ ಅಧಿಕಾರಾವಧಿ **ಐದು** ವರ್ಷಗಳು. ಈ ಅವಧಿ ಚುನಾಯಿತ ಪ್ರತಿನಿಧಿಗಳ ಮೊದಲ ಸಭೆಯಿಂದ ಪ್ರಾರಂಭವಾಗುತ್ತದೆ.

ಪಂಚಾಯತ್‌ಗಳಿಗೆ ಚುನಾವಣೆಯನ್ನು ಅವುಗಳ ಅವಧಿ ಮುಗಿಯುವ ಮುನ್ನ ನಡೆಸಬೇಕು. ಅಥವಾ ಪಂಚಾಯತ್‌ಗಳು ವಿಸರ್ಜನೆ ಹೊಂದಿದ್ದಲ್ಲಿ, ವಿಸರ್ಜನೆ ಹೊಂದಿದ **ಆರು** ತಿಂಗಳುಗಳೊಳಗೆ ಚುನಾವಣೆ ನಡೆಸಬೇಕು.

ಒಂದು ವೇಳೆ ವಿಸರ್ಜನೆಗೊಂಡ ಪಂಚಾಯಿತಿಯ ಉಳಿದ ಅವಧಿ **ಆರು** ತಿಂಗಳಿಗಿಂತ ಕಡಿಮೆ ಇದ್ದಲ್ಲಿ ಆ ಅವಧಿಗೆ ಮಧ್ಯಂತರ ಚುನಾವಣೆ ನಡೆಸುವ ಅಗತ್ಯವಿಲ್ಲ.


ಅವಧಿ ಮುಗಿಯುವ ಮುನ್ನ ಪಂಚಾಯತ್‌ಗಳು ವಿಸರ್ಜನೆಗೊಂಡು ಪುನಃ ರಚಿತವಾದರೆ, ಪಂಚಾಯತ್‌ಗಳು ವಿಸರ್ಜನೆಗೊಳ್ಳದಿದ್ದಲ್ಲಿ, ಎಷ್ಟು ಅವಧಿಗೆ ಮುಂದುವರೆಯುತ್ತಿತ್ತೋ ಅಷ್ಟು ಉಳಿಕೆ ಅವಧಿಗೆ ಮಾತ್ರ ಮುಂದುವರಿಯುತ್ತದೆ.

**ಉಪ ಸಂಹಾರ**

ಸಂವಿಧಾನದ 73ನೇ ತಿದ್ದುಪಡಿಯಂತೆ ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಕೂಡ 3 ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕಡ್ಡಾಯವಾಗಿ ಜಾರಿಗೊಳಿಸಲಾಗಿದೆ. ಪಂಚಾಯತಿಗಳ ವ್ಯಾಪ್ತಿ, ವಿಸ್ತಾರ ಹಾಗು ನಿರ್ವಹಣೆಗೆ ಪೂರಕವಾಗಿ ರಚನೆಗೊಳ್ಳುವ ಆಡಳಿತ ಮಂಡಳಿಗಳು, ಸ್ಥಾಯಿ ಸಮಿತಿಗಳು ಮತ್ತು ಉಪ ಸಮಿತಿಗಳ ಜವಾಬ್ದಾರಿ ಮತ್ತು ಅಧಿಕಾರಗಳನ್ನು ಚುನಾಯಿತ ಸದಸ್ಯರು ಅರ್ಥ ಮಾಡಿಕೊಳ್ಳಲು ಈ ಅಧಿವೇಶನ ನೆರವಾಗಬೇಕು.

## ಅಧಿವೇಶನ – 5

# ಗ್ರಾಮ ಪಂಚಾಯಿತಿಯ ಕಡ್ಡಾಯ ಪ್ರಕಾರ್ಯಗಳು





## ಉದ್ದೇಶ

ಗ್ರಾಮ ಪಂಚಾಯಿತಿಯು ತನ್ನ ವ್ಯಾಪ್ತಿಯ ಜನರು, ಸಾರ್ವಜನಿಕ ಆಸ್ತಿ, ಸಮುದಾಯದ ಭೌತಿಕ ಸಂಪನ್ಮೂಲಗಳು, ನೈಸರ್ಗಿಕ ಸಂಪನ್ಮೂಲಗಳು ಇವುಗಳ ರಕ್ಷಣೆ, ಸೌಹಾರ್ದಯುತ, ನೆಮ್ಮದಿಯ, ಸಾಮಾಜಿಕ ಬದುಕಿಗೆ ಬೇಕಾದ ನಿರಂತರ ವ್ಯವಸ್ಥೆಯನ್ನು ರೂಪಿಸುವ ಹಕ್ಕು, ಅಧಿಕಾರ ಮತ್ತು ಜವಾಬ್ದಾರಿಯನ್ನು ಹೊಂದಿರುವುದನ್ನು ಸದಸ್ಯರುಗಳಿಗೆ ಅರ್ಥಮಾಡಿಸುವುದು.

ಸದಸ್ಯರುಗಳು ಚುನಾಯಿತ ಪ್ರತಿನಿಧಿಗಳಾಗಿ ತಾವು ತಮ್ಮ ವ್ಯಾಪಿಯಲ್ಲಿ ನಿರ್ವಹಿಸಬೇಕಾದ ಕರ್ತವ್ಯ ಹಾಗೂ ಜವಾಬ್ದಾರಿಗಳಾದ ಕಡ್ಡಾಯ ಪ್ರಕಾರ್ಯಗಳನ್ನು ಮನಗಾಣುವುದು.

## ಉಪ ವಿಷಯಗಳು

ಗ್ರಾಮ ಪಂಚಾಯಿತಿಯ ಕಡ್ಡಾಯ ಪ್ರಕಾರ್ಯಗಳು ಪ್ರಕರಣ 58

ಗ್ರಾಮ ಪಂಚಾಯಿತಿಯ ಪ್ರಕಾರ್ಯಗಳು ಅನುಸೂಚಿ–1

## ವಿಧಾನ

ವಿಷಯ ಮಂಡನೆ

ವಿಷಯ ಮಂಡನೆ – ವಿಡಿಯೋ ಪ್ರಸರಣ

## ಸಮಯ

75 ನಿಮಿಷಗಳು

## ಪೂರಕ ಸಾಮಗ್ರಿಗಳು

ಮುದ್ರಿತ ವಿಡಿಯೋ ಸಿ.ಡಿ.

ಕೆ.ಜಿ.ಶೀಟ್ಸ್ ಮತ್ತು ಮಾರ್ಕರ್ ಪೆನ್ನುಗಳು

## ನಿರೀಕ್ಷಿತ ಫಲಿತಾಂಶ

ಚುನಾಯಿತ ಪ್ರತಿನಿಧಿಗಳು ನೀತಿ ನಿರ್ದೇಶಕ ತತ್ವಗಳು ಮತ್ತು ಕಡ್ಡಾಯ ಪ್ರಕಾರ್ಯಗಳನ್ನು ಜವಾಬ್ದಾರಿಗಳೆಂದು ಭಾವಿಸಿ ಕ್ಷೇತ್ರ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಕಾರಾತ್ಮಕ ಮನೋಭಾವ ಹೊಂದುವರು.

ತಾವು ನಿರ್ವಹಿಸಬೇಕಾದ ಕರ್ತವ್ಯಗಳ ವಿಶಾಲತೆ ಮತ್ತು ಅಗಾಧತೆಯನ್ನು ಅರಿಯುವರು.

ಗ್ರಾಮ ಮತ್ತು ಗ್ರಾಮದ ಜನರ ಅಭಿವೃದ್ಧಿಗಾಗಿ ಸಾಮಾಜಿಕ ನ್ಯಾಯದ ನಿಲುವಿನ ಅಗತ್ಯತೆ, ಆದ್ಯತೆಯನ್ನು ಅರಿಯುವರು.

**ಅಧಿವೇಶನ ಪ್ರಕ್ರಿಯೆ**

ಪ್ರಸ್ತುತದ ಅಧಿವೇಶನದ ವಿಷಯ ಪ್ರಸ್ತಾವನೆಯನ್ನು ಮಾಡುವುದು

ಸುಗಮಗಾರರು ಹಿಂದಿನ ಅಧಿವೇಶನದಲ್ಲಿ ಗ್ರಾಮವನ್ನು ಗಾಂಧೀಜಿಯವರ ಕನಸಿನಂತೆ ಗ್ರಾಮಸ್ವರಾಜ್ಯವಾಗಿಸಲು ಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳು ಮಾಡಬಹುದಾದ ಅವಕಾಶಗಳು ಹಾಗು ಅದೇ ರೀತಿಯಲ್ಲಿ ಗ್ರಾಮ ಪಂಚಾಯಿತಿಯು ತನ್ನ ಮಿತಿಯಲ್ಲಿ ವಾಸಿಸುವ ಜನರಿಗೆ ಅಗತ್ಯವಾಗಿ ನೀಡಲೇಬೇಕಾದ ಸೌಕರ್ಯಗಳ ಬಗ್ಗೆಯು ಚರ್ಚಿಸಿದ್ದ ಹಿನ್ನೆಲೆಯಲ್ಲಿ ಅವುಗಳನ್ನು ಮತ್ತೊಮ್ಮೆ ಚರ್ಚಿಸೋಣವೆಂದು ತಿಳಿಸಿ, ಹಿಂದಿನ ಅಧಿವೇಶನದಲ್ಲಿ ಸಿದ್ದಪಡಿಸಿರುವ ಪಟ್ಟಿಯನ್ನು ಓದಿ ತಿಳಿಸುವುದು.

ಹಿಂದಿನ ಅಧಿವೇಶನ ನೀತಿ ನಿರ್ದೇಶಕ ತತ್ವದ ವಿಷಯದ ಸಂದರ್ಭದ ಗುಂಪುಚರ್ಚೆಯಲ್ಲಿ ಗುರುತಿಸಿರುವ ಮೂಲಭೂತ ಸೌಕರ್ಯಗಳ ಪಟ್ಟಿಯನ್ನು ಒಟ್ಟು ಗುಂಪಿನಲ್ಲಿ ಮರು ಪರಿಶೀಲನೆ ಮಾಡಿ ಪ್ರಮುಖ ಅಂಶಗಳನ್ನು ಗುರುತಿಸುವುದು.

ಪ್ರಶಿಕ್ಷಣಾರ್ಥಿಗಳು ತಿಳಿಸಿದಂತೆ, ಶುದ್ಧ ಕುಡಿಯುವ ನೀರು, ಚರಂಡಿ, ರಸ್ತೆ, ಬೀದಿದೀಪ, ವಸತಿ ಮುಂತಾದುವುಗಳನ್ನು ನಮೂದಿಸಿದಂತೆ ಓದಿ ತಿಳಿಸುವುದು.

ಪಂಚಾಯಿತಿಯು ನೀಡಬೇಕಾಗಿರುವ ಸೌಕರ್ಯಗಳ ಬಗ್ಗೆ ಮತ್ತಾವುದಾದರು ಅಂಶಗಳನ್ನು ಸೇರಿಸುವ ಅಗತ್ಯವಿದ್ದಲ್ಲಿ ತಿಳಿಸಿ ಎಂದು ಅವಕಾಶ ಕಲ್ಪಿಸುವುದು. ತಿಳಿದುಕೊಂಡಿರುವ ಅಂಶಗಳ ಜೊತೆಗೆ ಪಂಚಾಯಿತಿಯು ಸ್ಥಳೀಯ ಸರ್ಕಾರವಾಗಿ ನಿರ್ವಹಿಸಲೇ ಬೇಕಾದ ಕಡ್ಡಾಯ ಪ್ರಕಾರ್ಯಗಳು ಯಾವುವು ಎಂಬುದನ್ನು ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ತಿಳಿದುಕೊಳ್ಳುವ ಪ್ರಯತ್ನ ಮಾಡೋಣವೆಂದು ವಿವರಿಸಿ, ವಿಡಿಯೋ ವೀಕ್ಷಣೆ ಮಾಡುವುದು.

ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ವಿಷಯ ಮಂಡನೆ– ವಿಡೀಯೋ ಪ್ರಸರಣ


ವಿಡಿಯೋ ವೀಕ್ಷಣೆಯ ನಂತರ, ಪಂಚಾಯಿತಿಗಳು ಕಡ್ಡಾಯವಾಗಿ ನಿರ್ವಹಿಸಲೇಬೇಕಾದ ಪ್ರಕಾರ್ಯಗಳಲ್ಲಿ ಚುನಾಯಿತ ಪ್ರತಿನಿಧಿಗಳ ಪಾತ್ರದ ಬಗ್ಗೆ ಮತ್ತೊಮ್ಮೆ ಪುನರ್ ಮನನ ಮಾಡುವ ಉದ್ದೇಶದಿಂದ ಕೇಳಿ ತಿಳಿದುಕೊಳ್ಳುವುದು. ವಾಸ್ತವ ಸ್ಥಿತಿಯ ವಿಶ್ಲೇಷಣೆಯಲ್ಲಿ ಲಭ್ಯವಿರುವ ಮಾಹಿತಿಯನ್ನು ಬಳಸಿಕೊಂಡು ಗ್ರಾಮದ ಅಭಿವೃದ್ಧಿಗಾಗಿ ಪಂಚಾಯಿತಿಯು ಮಾಡಲೇಬೇಕಾದ ಕಡ್ಡಾಯ ಪ್ರಕಾರ್ಯಗಳನ್ನು ನಿಮ್ಮ ಪಂಚಾಯಿತಿಯು ಪೂರ್ಣಗೊಳಿಸಿದೆಯೇ ಎಂದು ಪ್ರಶ್ನಿಸುವುದು.

ಪ್ರಶಿಕ್ಷಣಾರ್ಥಿಗಳು ಉತ್ತರಿಸಿದ ನಂತರ, ಪಂಚಾಯಿತಿಯ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಎಲ್ಲರೂ ಶ್ರಮಿಸಬೇಕು ಮತ್ತು ಈ ಕುರಿತು ಯೋಜನೆಗಳನ್ನು ರೂಪಿಸುವತ್ತ ಚಿಂತಿಸಿ ಎಂದು ತಿಳಿಸಿ ಅಧಿವೇಶನವನ್ನು ಮುಕ್ತಾಯಗೊಳಿಸುವುದು.

## ಗ್ರಾಮ ಪಂಚಾಯಿತಿ ಪ್ರಕಾರ್ಯಗಳು

**ಪೂರಕ ಮಾಹಿತಿ**

ಪಂಚಾಯತಿ ವ್ಯಾಪ್ತಿಯ ಜನರ ಅಗತ್ಯತೆಗಳನ್ನು ಅರಿತು ಸ್ಪಂದಿಸುವುದು ಗ್ರಾಮ ಪಂಚಾಯಿತಿಯ ಕರ್ತವ್ಯವಾಗಿದೆ. ಗ್ರಾಮ ಪಂಚಾಯಿತಿಯು ಸ್ಥಳಿಯ ಸರ್ಕಾರವಾಗಿದ್ದು ತನಗೆ ಲಭ್ಯವಾಗುವ ವಿವಿಧ ಅನುದಾನ ಮತ್ತು ಸ್ವಂತ ಸಂಪನ್ಮೂಲಗಳನ್ನು ಬಳಸಿಕೊಂಡು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ ಸಂಖ್ಯೆ 58ರಲ್ಲಿ ಗ್ರಾಮ ಪಂಚಾಯಿತಿಯ ಪ್ರಕಾರ್ಯಗಳು ಹಾಗೂ ಗ್ರಾಮ ಪಂಚಾಯಿತಿಯು ಅನುಸೂಚಿ–1 ರಲ್ಲಿ ನಿರ್ದಿಷ್ಟ ಪಡಿಸಿದ ಪ್ರಕಾರ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕಾಗಿದೆ.



Iನೇ ಅನುಸೂಚಿಯಲ್ಲಿ ಹೇಳಿರುವ ವಿಷಯಗಳನ್ನು ಮತ್ತು ಗ್ರಾಮ ಪಂಚಾಯಿತಿಯ ಜವಾಬ್ದಾರಿ ನಕ್ಷೆಯಲ್ಲಿ ನಿರೂಪಿಸಿರುವುದನ್ನು ನಿರ್ವಹಿಸುವ ಅಧಿಕಾರಗಳನ್ನು ಗ್ರಾಮ ಪಂಚಾಯತ್ ಹೊಂದಿದೆ. ಪಂಚಾಯತಿಯು ತನ್ನ ಸುಪರ್ದಿನಲ್ಲಿರುವ ಅನುದಾನ/ನಿಧಿಯ ಲಭ್ಯತೆ



ಅನುಸಾರ ಎಲ್ಲರಿಗೂ ಸಾಮಾಜಿಕ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬೆಳವಣಿಗೆಗಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸಲು ಅಧಿಕಾರ ಹೊಂದಿದೆ.

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ ಸಂಖ್ಯೆ 58ರಲ್ಲಿ ಗ್ರಾಮ ಪಂಚಾಯಿತಿಯ ಪ್ರಕಾರ್ಯಗಳು:**

ಪ್ರತಿ ವರ್ಷ ಶೇ.10ರಷ್ಟು ಮನೆಗಳಿಗೆ ಕಡಿಮೆ ಇಲ್ಲದಂತೆ ಶೌಚಾಲಯಗಳನ್ನು ಒದಗಿಸುವಿಕೆ. ಪುರುಷರು ಮತ್ತು ಮಹಿಳೆಯರಿಗೆ ಸಮುದಾಯ ಶೌಚಗೃಹಗಳ ನಿರ್ಮಾಣ

ಸಾಕಷ್ಟು ಸಂಪನ್ಮೂಲಗಳನ್ನು ಸೃಷ್ಟಿಸಿ, ಸ್ವತಃ ಅಥವಾ ವಾರ್ಷಿಕ ಕರಾರಿನ ಮೂಲಕ ನೀರು ಪೂರೈಕೆ ಕಾರ್ಯಕ್ರಮಗಳ ನಿರ್ವಹಣೆ ಮಾಡುವುದು.

ತೆರಿಗೆ, ದರ ಮತ್ತು ಶುಲ್ಕಗಳನ್ನು ನಿಯಮಿತವಾಗಿ ಪರಿಷ್ಕರಿಸುವುದು ಹಾಗೂ ವಸೂಲಿ ಮಾಡುವುದು.

ಪ್ರಾಥಮಿಕ ಶಾಲೆಗಳಲ್ಲಿ ಎಲ್ಲಾ ಮಕ್ಕಳ ದಾಖಲಾತಿಯನ್ನು ಖಾತ್ರಿ ಪಡಿಸಿಕೊಳ್ಳುವುದು.

ಮಕ್ಕಳಿಗೆ ಸಾರ್ವತ್ರಿಕವಾಗಿ ರೋಗನಿರೋಧಕ ಚುಚ್ಚುಮದ್ದು ನೀಡುವ ಕಾರ್ಯಕ್ರಮಗಳನ್ನು ಸಾಧಿಸುವುದು.

ಜನನ ಮತ್ತು ಮರಣಗಳ ತ್ವರಿತ ನೋಂದಣಿ ಮತ್ತು ವರದಿ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು.

ನೈರ್ಮಲ್ಯ ವ್ಯವಸ್ಥೆ ಮತ್ತು ಚರಂಡಿ ವ್ಯವಸ್ಥೆಯನ್ನು ಒದಗಿಸುವುದು.

ಸಾರ್ವಜನಿಕ ರಸ್ತೆ ನಿರ್ಮಾಣ, ದುರಸ್ತಿ ಮತ್ತು ನಿರ್ವಹಣೆ

ಸಾರ್ವಜನಿಕ ರಸ್ತೆ ಮತ್ತು ಸ್ಥಳಗಳ ಮೇಲಿನ ಒತ್ತುವರಿಯನ್ನು ತೆಗೆದುಹಾಕುವುದು.

ಬೀದಿ ದೀಪಗಳನ್ನು ಒದಗಿಸಿ, ವಿದ್ಯುತ್ ಶುಲ್ಕಗಳನ್ನು ನಿಯಮಿತವಾಗಿ ಸಂದಾಯ ಮಾಡುವುದು.

ಅನಾರೋಗ್ಯಕರ ಪ್ರದೇಶಗಳನ್ನು ಆರೋಗ್ಯಕರ ಪ್ರದೇಶಗಳನ್ನಾಗಿ ಮಾಡುವುದು.

ಹುಚ್ಚುನಾಯಿ ಮತ್ತು ಮಾಲೀಕರಿಲ್ಲದ ನಾಯಿಗಳನ್ನು ಸಾಯಿಸುವುದು.

ಎಲ್ಲಾ ಸಮುದಾಯದ ಆಸ್ತಿಗಳನ್ನು ನಿರ್ವಹಿಸುವುದು.

ಜನಗಣತಿ, ಬೆಳೆ ಗಣತಿ, ಜಾನುವಾರು ಗಣತಿ, ನಿರುದ್ಯೋಗಿಗಳ ಹಾಗೂ ಬಡತನ ರೇಖೆಗಿಂತ ಕಡಿಮೆ ಇರುವ ಕುಟುಂಬಗಳ ದಾಖಲೆಗಳನ್ನು ನಿರ್ವಹಿಸುವುದು.


ತ್ಯಾಜ್ಯ ಮತ್ತು ಗೊಬ್ಬರವನ್ನು ರಾಶಿ ಹಾಕಲು ಪ್ರತ್ಯೇಕ ಸ್ಥಳಗಳನ್ನು ಗುರುತಿಸುವುದು.

ಜೈವಿಕ ವೈವಿಧ್ಯತೆಯನ್ನು ಸಂರಕ್ಷಿಸುವುದು.

**ಗ್ರಾಮ ಪಂಚಾಯಿತಿಯ ಅನುಸೂಚಿ 1ರಲ್ಲಿ ನಿರ್ದಿಷ್ಟ ಪಡಿಸಿದ ಪ್ರಕಾರ್ಯಗಳು:**

1. ಮುಕ್ತ ಮತ್ತು ಸ್ವತಂತ್ರ ವಾತಾವರಣದಲ್ಲಿ ತಮ್ಮ ಹಕ್ಕುಗಳ ಚಲಾವಣೆಗೆ ಅನುವು ಮಾಡಿಕೊಡುವ, ಎಲ್ಲಾ ನಾಗರಿಕರ ಸುರಕ್ಷತೆಗೆ ಅನುಕೂಲಕರ ವಾತಾವರಣ ಇರುವುದನ್ನು ಧೃಡಪಡಿಸುವ ಮತ್ತು ಜನರಿಗೆ ಯಾವುದೇ ಬಗೆಯ ದೌರ್ಜನ್ಯ ಮತ್ತು ಶೋMಣೆ ಆಗದಂತೆ ರಕ್ಷಣೆ ಒದಗಿಸುವ, ಆಯಾ ಜನವಸತಿ/ ವಾರ್ಡ್/ ಗ್ರಾಮಸಭೆಗಳು ಸಲಹೆ ಮಾಡಿದ ಕ್ರಮಗಳ ಪ್ರಕಾರ ಕಾರ್ಯಗಳನ್ನು ನಿರ್ವಹಿಸುವುದು.
2. ಜನವಸತಿಸಭಾ, ವಾರ್ಡ್ ಸಭಾ ಮತ್ತು ಗ್ರಾಮಸಭಾಗಳು ಗುರುತಿಸಿದ ಅಪಾಯಕಾರಕಗಳ ವಿರುದ್ದ ಕ್ರಮ ತೆಗೆದುಕೊಳ್ಳುವ ಮತ್ತು ಎಲ್ಲಾ ನಾಗರಿಕರ ಸುರಕ್ಷತೆ, ಭದ್ರತೆ ಮತ್ತು ಸ್ವಾತಂತ್ರ್ಯಕ್ಕೆ ಕ್ರಮ ಕೈಗೊಂಡು ಅನುMಾನಗೊಳಿಸುವುದು.

3. ಸಮಾಜದ ದುರ್ಬಲ ವರ್ಗಗಳ ಜನರ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ಕಾಪಾಡುವ ಮತ್ತು ಅವರ ಹಕ್ಕುಗಳ ಉಲ್ಲಂಘನೆಗೆ ಆಸ್ಪದ ಕೊಡುವಂಥಹ ಆಚರಣೆಗಳ ಮೇಲೆ ನಿಗಾ ಇಟ್ಟು, ತಡೆಗಟ್ಟುವ ಮತ್ತು ವ್ಯಕ್ತಿಗಳ ಘನತೆ ಮತ್ತು ಸ್ವಾತಂತ್ರವನ್ನು ರಕ್ಷಿಸುವ ದೃಷ್ಟಿಯಿಂದ ತನ್ನ ವ್ಯಾಪ್ತಿಗೊಳಪಡುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವುದು.
4. ಯಾವುದೇ ವ್ಯಕ್ತಿ/ಗುಂಪು/ಕಾರ್ಯಸಂಸ್ಥೆಯು ಪಂಚಾಯತಿಯ ಯಾವೊಬ್ಬ ನಾಗರಿಕರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಲೈಂಗಿಕವಾಗಿ ಶೋMಣೆ ಮಾಡುವುನ್ನು ತಡೆಯುವ ಪ್ರಯತ್ನಗಳನ್ನು ಮಾಡುವುದು.
5. ಎಲ್ಲಾ ಸಮುದಾಯದ ಗುಂಪುಗಳ ನಡುವೆ ಕೋಮು ಸೌಹಾರ್ದತೆ ಮತ್ತು ಒಗ್ಗಟ್ಟಿಗೆ ಉತ್ತೇಜನ ನೀಡುವುದು.
6. ಜನವಸತಿ, ವಾರ್ಡ್ ಮತ್ತು ಗ್ರಾಮಸಭೆಗಳು ಸೇರಿದಂತೆ ಗ್ರಾಮ ಪಂಚಾಯಿತಿಯ ಎಲ್ಲಾ ಕಾರ್ಯಗಳು, ಸಭೆಗಳು ಮತ್ತು ವ್ಯವಹಾರಗಳಲ್ಲಿ ಮಹಿಳೆಯರು ಮತ್ತು ದುರ್ಬಲ ವರ್ಗದವರು ಮುಕ್ತವಾಗಿ ಮತ್ತು ಸಕ್ರಿಯವಾಗಿ ಪಾಲ್ಗೊಳ್ಳುವಂಥ ವಾತಾವರಣದಲ್ಲಿ ನಡೆಸಲಾಗುತ್ತಿದೆ ಎಂಬುದನ್ನು ಧೃಡಪಡಿಸಿಕೊಳ್ಳುವ ಮತ್ತು ಪಂಚಾಯತಿ ವ್ಯಾಪ್ತಿಯ ಎಲ್ಲಾ ಕಚೇರಿಗಳಲ್ಲಿ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು. ಹಿಂದುಳಿದ ವರ್ಗದವರು ಪಾಲ್ಗೊಳ್ಳಲು ಅನುಕೂಲವಾಗುವಂಥ ವಾತಾವರಣವನ್ನು ಕಲ್ಪಿಸುವುದು.
7. ಪಂಚಾಯತಿಯ ಚುನಾಯಿತ ಸದಸ್ಯರು ಮತ್ತು ಸಿಬ್ಬಂದಿಯ ಸಾಮಾರ್ಥ್ಯಾಭಿವೃದ್ಧಿಯ ಅಗತ್ಯಗಳು ಮತ್ತು ಸೂಕ್ತ ಸಂಪನ್ಮೂಲ ವ್ಯಕ್ತಿಗಳ ಗುರುತಿಸುವ ಮತ್ತು ಅವಶ್ಯವಿದ್ದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಯ ನೆರವಿನೊಂದಿಗೆ ಅವರುಗಳ ಸಾಮಾರ್ಥ್ಯಾಭಿವೃದ್ಧಿಯನ್ನು ಧೃಡಪಡಿಸಿಕೊಳ್ಳುವುದು.
8. ಪಂಚಾಯತಿ ಕಚೇರಿಯ ನಿರ್ವಹಣೆ ಮತ್ತು ನಿಯಂತ್ರಣದಲ್ಲಿರುವ ಸಾರ್ವಜನಿಕ ಕಟ್ಟಡಗಳಲ್ಲಿ ವಿಕಲಚೇತನರಿಗೆ ಅನುಕೂಲವಾಗುವಂತೆ ಗಾಲಿಕುರ್ಚಿಗಳಿಗೆ ಇಳಿಜಾರು ರಸ್ತೆಯ ಸೌಲಭ್ಯವನ್ನು ಒದಗಿಸಿರುವುದನ್ನು ಧೃಡಪಡಿಸಿಕೊಳ್ಳುವುದು.
9. ಅಗತ್ಯವಿರುವ ಸ್ಥಳದಲ್ಲಿ, ಕಟ್ಟಡಗಳಲ್ಲಿ ಅಥವಾ ಬಹುಮಹಡಿ ಕಟ್ಟಡಗಳಲ್ಲಿ ಶಿಶು ಪಾಲನಾ ಕೇಂದ್ರಗಳು ಅಥವಾ ಶಿಶುವಿಹಾರಗಳನ್ನು ಒದಗಿಸುವುದು.
10. ಸಾಂಸ್ಕೃತಿಕ, ಸಾಹಿತ್ಯ ಮತ್ತು ಕ್ರೀಡಾ ಚಟುವಟಿಕೆಗಳ ಸಂಘಟನೆಗೆ ಉತ್ತೇಜನ ನೀಡುವ ದೈಹಿಕ ಶಿಕ್ಷಣ, ಕಲಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು. ಜನರ ಪ್ರತಿಭೆ ಅಭಿವ್ಯಕ್ತಿಗೆ ಅವಕಾಶ, ನಿಯಮಗಳ ಅನುಸಾರವಾಗಿ ಪಂಚಾಯತಿ ವ್ಯವಹಾರ ನಿರ್ವಹಣ ಸಾಮಾರ್ಥ್ಯ ವೃದ್ಧಿಸಿ ಜನರನ್ನು ಸಜ್ಜುಗೊಳಿಸುವುದು.
11. ಪಂಚಾಯತಿ ವ್ಯಾಪ್ತಿಯ ಅನಕ್ಷರತೆ ನಿರ್ಮೂಲನೆಗಾಗಿ ವಯಸ್ಕರ ಶಿಕ್ಷಣ, ಉತ್ತಮ ಹವ್ಯಾಸಗಳನ್ನು ರೂಢಿಸುವ ವ್ಯಸನ ಮುಕ್ತ (de-addiction) ಮತ್ತು ಕೌಟುಂಬಿಕ ಸಮಾಲೋಚನ ಕೇಂದ್ರಗಳಿಗೆ ಉತ್ತೇಜನ ನೀಡುವುದು.
12. ತಿಪ್ಪೆ ಗುಂಡಿಗಳು ಮತ್ತು ಕೃಷಿ ತ್ಯಾಜ್ಯಗಳ ವೈಜ್ಞಾನಿಕ ಸಂಸ್ಕರಣೆಗೆ ಉತ್ತೇಜನ ನೀಡುವುದು.
13. ನೀರು ಮತ್ತು ಪರಿಸರ ಸಂರಕ್ಷಣೆ ಹಾಗು ಜೈವಿಕ ತ್ಯಾಜ್ಯಗಳ (bio-degradable) ಮರುಬಳಕೆಯ ಬಗ್ಗೆ ಜಾಗೃತಿ ಮೂಡಿಸುವುದು.
14. ಕೃಷಿ, ಗ್ರಾಮೀಣ ಕೈಗಾರಿಕೆ, ಸಣ್ಣ ಉದ್ಯಮಗಳು ಮತ್ತು ಸಹಕಾರ ಸಂಘಗಳಿಗೆ ಉತ್ತೇಜನ ನೀಡುವ ಮೂಲಕ ಮಹಿಳೆಯರು, ಯುವಕ/ ಯುವತಿಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ದುರ್ಬಲ ವರ್ಗದ ಜನರಿಗೆ ವಿಶೇಷ ಗಮನ ನೀಡಿ ಎಲ್ಲರ ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡುವುದು.
15. ಸಾಮಾಜಿಕ ಸೌಹಾರ್ದತೆ ಮತ್ತು ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಆ ಪ್ರದೇಶದ ಎಲ್ಲಾ ಜನರ ಸಹಕಾರ/ ಸೌಹಾರ್ದ ಭಾವನೆ ಮತ್ತು ಸಹಕಾರಗಳಿಗೆ ಉತ್ತೇಜನ ನೀಡುವುದು.
16. ಮಹಿಳೆಯರು, ರೈತರು ಮತ್ತು ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಸ್ವ-ಸಹಾಯ ಗುಂಪುಗಳ ರಚನೆಗೆ ಸೌಲಭ್ಯ ಕಲ್ಪಿಸುವುದು.





17. ದುಬಾರಿ ಬಡ್ಡಿ ಸಾಲಗಳ ಅಧಿನಿಯಮ ಮತ್ತು ಲೇವಾದೇವಿದಾರರ ಅಧಿನಿಯಮದ ಉಲ್ಲಂಘನೆಗೆ ಆಸ್ಪದ ಕೊಡುವ ಚಟುವಟಿಕೆಗಳ ನಿಯಂತ್ರಣ ಮತ್ತು ಅಂಥ ಚಟುವಟಿಕೆಗಳ ಮೇಲೆ ನಿಗಾ ವಹಿಸಿ, ಜನರ ಶೋMಣೆಯ ತಡೆಗಾಗಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಆ ಬಗ್ಗೆ ವರದಿ ಮಾಡುವುದು.
18. ದತ್ತಾಂಶ/ ಜ್ಞಾನ ನಿರ್ವಹಣೆಗೆ ವ್ಯವಸ್ಥೆಗಳನ್ನು ರೂಪಿಸುವ ಸಲುವಾಗಿ ಜಾತಿವಾರು ಜನಗಣತಿ, ಬೆಳೆ ಗಣತಿ, ಜಾನುವಾರು ಗಣತಿ, ನಿರುದ್ಯೋಗ ವ್ಯಕ್ತಿಗಳ ಮತ್ತು ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳ ಜಾತಿವಾರು ಗಣತಿಗೆ ಸೇರಿದ ಎಲ್ಲಾ ದಾಖಲೆಗಳ ನಿರ್ವಹಣೆ ಮಾಡುವುದು.
19. ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಜನರ ಎಲ್ಲ ಅಧಿಕೃತ ಕೆಲಸ ಕಾರ್ಯಗಳ ಸಲುವಾಗಿ 'ಮುಂಚೂಣಿ ಕಾರ್ಯಾಲಯ" ವನ್ನಾಗಿಸುವ ಮತ್ತು ಅಂಥ ಅಗತ್ಯತೆಗಳು ಗ್ರಾಮ ಪಂಚಾಯತ್‌ನ ವ್ಯಾಪ್ತಿಯೊಳಗೆ ಇದ್ದರೆ ಅವುಗಳನ್ನು ಪರಾಮರ್ಶಿಸಿ, ಗಮನ ಕೊಡುವ ಅಥವಾ ಇತರ ಪಂಚಾಯತ್/ ಸರ್ಕಾರಿ ಏಜೆನ್ಸಿಗಳೊಂದಿಗೆ ಅನುಸರಣಾ ಕ್ರಮ ಕೈಗೊಳ್ಳುವುದು.
20. ಪ್ರಾಣಿಗಳ ಮೃತದೇಹವನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳುವುದು.
21. ಆ ಪ್ರದೇಶದ ಜೀವ ವೈವಿಧ್ಯದ ರಕ್ಷಣೆ ಮತ್ತು ಪೋಷಣೆ ಮಾಡುವ ಅಧಿಕಾರ ಮತ್ತು ಜವಾಬ್ದಾರಿ ಪಂಚಾಯತಿಯದ್ದಾಗಿದೆ.


ಈ ಮೊದಲಾದ ವಿವಿಧ ಅಧಿಕಾರಗಳನ್ನು ಬಳಸಿಕೊಂಡು ಗ್ರಾಮ ಪಂಚಾಯಿತಿಯು ಸಾರ್ವಜನಿಕರ, ದುರ್ಬಲ ವರ್ಗಗಳ, ಮಹಿಳೆಯರ, ಮಕ್ಕಳ, ವೃದ್ಧರ, ವಿಕಲಚೇತನರ, ಅಸಹಾಯಕರ ಮೊದಲಾದವರ ಅಭ್ಯುದಯಕ್ಕಾಗಿ ಕಾರ್ಯನಿರ್ವಹಿಸಬೇಕಾಗಿದೆ.

## ಉಪ ಸಂಹಾರ

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಬೇಕಾದ ವಿವಿಧ ವಲಯಗಳನ್ನು ಮತ್ತು ಚುನಾಯಿತ ಪ್ರತಿನಿಧಿಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ಅರಿತುಕೊಳ್ಳುವ ಹಿನ್ನೆಲೆಯಲ್ಲಿ ಕಾಯಿದೆಯಡಿ ನೀಡಿರುವ ಅವಕಾಶಗಳನ್ನು ಸಮರ್ಪಕವಾಗಿ ತಿಳಿಸುವುದು.

## ಅಧಿವೇಶನ – 6

# ನಾವೇನು ಮಾಡಬೇಕು? (ಅಭಿವೃದ್ಧಿಯ ದೃಷ್ಟಿಕೋನ)





## ಉದ್ದೇಶ

ಪ್ರಶಿಕ್ಷಣಾರ್ಥಿಗಳು ಅಭಿವೃದ್ಧಿಯ ವಿವಿಧ ದೃಷ್ಟಿಕೋನಗಳನ್ನು ಅರ್ಥೈಸಿಕೊಳ್ಳುತ್ತಾರೆ.

## ಉಪ ವಿಷಯಗಳು

ಅಭಿವೃದ್ಧಿ

ಮಾನವಾಭಿವೃದ್ಧಿ

ಸುಸ್ಥಿರ ಅಭಿವೃದ್ಧಿ

ಸಾಮಾಜಿಕ ಮತ್ತು ಸಂಪನ್ಮೂಲ ನಕ್ಷೆ

ನಮ್ಮೂರು

## ವಿಧಾನ

ವಿಚಾರ ಮಂಥನ

ವಿಡಿಯೋ ಕ್ಲಿಪ್ಪಿಂಗ್

ಪ್ರಾಯೋಗಿಕ ಚಟುವಟಿಕೆ

ಕ್ರೋಢೀಕರಣ

## ಸಮಯ

75 ನಿಮಿಷಗಳು

## ಪೂರಕ ಸಾಮಗ್ರಿಗಳು

ವಿಡಿಯೋ ಕ್ಲಿಪ್ಪಿಂಗ್‌ಗಳು

ಚಾರ್ಟ್‌ಗಳು, ಮಾರ್ಕರ್ ಪೆನ್‌ಗಳು, ಸ್ಕೆಚ್ ಪೆನ್‌ಗಳು, ಕೆ.ಜಿ.ಶೀಟ್ಸ್

ಸುಸ್ಥಿರ ಅಭಿವೃದ್ಧಿ ಕಾರ್ಯಕ್ರಮಗಳ ಚಾರ್ಟ್

## ನಿರೀಕ್ಷಿತ ಫಲಿತಾಂಶ

ಪ್ರಶಿಕ್ಷಣಾರ್ಥಿಗಳು ಅಭಿವೃದ್ಧಿಯ ದೃಷ್ಟಿಕೋನಗಳನ್ನು ಮನನ ಮಾಡಿಕೊಂಡು ವಿವರಿಸುತ್ತಾರೆ.

ಮಾನವ ಅಭಿವೃದ್ಧಿ ಮತ್ತು ಭೌತಿಕ ಅಭಿವೃದ್ಧಿಗಳ ವ್ಯತ್ಯಾಸಗಳನ್ನು ಗ್ರಹಿಸುತ್ತಾರೆ.

ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮಹತ್ವವನ್ನು ಮನಗಾಣುತ್ತಾರೆ.

ಸುಸ್ಥಿರ ಅಭಿವೃದ್ಧಿ ಕಾರ್ಯಕ್ರಮಗಳ ಆದ್ಯತೆಗಳನ್ನು ಅರಿತು ಹೇಳಲು ಸಮರ್ಥರಾಗುತ್ತಾರೆ.

ತಮ್ಮ ತಮ್ಮ ಗ್ರಾಮಗಳಿಗೆ ಸಂಬಂಧಿಸಿದಂತೆ, ಸಾಮಾಜಿಕ ಸ್ಥಿತಿಗತಿ ಮತ್ತು ಸಂಪನ್ಮೂಲಗಳ ಲಭ್ಯತೆಗಳನ್ನು ತಿಳಿದುಕೊಳ್ಳುತ್ತಾರೆ.

## ಅಧಿವೇಶನ ಪ್ರಕ್ರಿಯೆ

ಸುಗಮಗಾರರು ಪ್ರಶಿಕ್ಷಣಾರ್ಥಿಗಳನ್ನು ಹಿಂದಿನ ಅಧಿವೇಶನದಲ್ಲಿ ತಿಳಿದುಕೊಂಡಂತೆ ಅಭಿವೃದ್ಧಿಯ ದೃಷ್ಟಿಕೋನದಲ್ಲಿ ನಾವೇನು ಮಾಡಬಹುದು ಎಂಬುದರ ಕುರಿತು ಈ ಅಧಿವೇಶನದಲ್ಲಿ ಚರ್ಚಿಸೋಣ ಎಂದು ತಿಳಿಸುವುದು.

ಸುಗಮಗಾರರು ಅಭಿವೃದ್ಧಿಯನ್ನು ಕುಟುಂಬ ಮತ್ತು ಗ್ರಾಮದ ಪರಿಕಲ್ಪನೆಯಲ್ಲಿ ಹೇಗೆ ನೋಡುತ್ತೇವೆ ಎಂದು ಪ್ರಶಿಕ್ಷಣಾರ್ಥಿಗಳೊಂದಿಗೆ ಮುಕ್ತವಾಗಿ ಚರ್ಚಿಸುವುದು.

ಪ್ರಶಿಕ್ಷಣಾರ್ಥಿಗಳು ನೀಡುವ ಅಭಿಪ್ರಾಯಗಳನ್ನು ಕುಟುಂಬ ಮತ್ತು ಗ್ರಾಮಕ್ಕೆ ಸಂಬಂಧಿಸಿದಂತೆ, ಪ್ರತ್ಯೇಕ ಚಾರ್ಟ್‌ಗಳಲ್ಲಿ ದಾಖಲಿಸಿಕೊಳ್ಳುವುದು.

ಮುಂದುವರೆದು, ಗ್ರಾಮದ ನಿಜವಾದ ಅಭಿವೃದ್ಧಿ ಎಂದರೇನು? ಮತ್ತು ಏಕೆ? ಎಂಬ ಪ್ರಶ್ನೆಗಳ ಕುರಿತು ಚರ್ಚಿಸಿ, ವಿಚಾರ ಮಂಥನದ ಮೂಲಕ ಸುಗಮಗಾರಿಕೆ ಮಾಡುವುದು.

ನಂತರ, ಸುಗಮಗಾರರು ಅಭಿವೃದ್ಧಿಯ ದೃಷ್ಟಿಕೋನದ ಕುರಿತು ತಜ್ಞರ ಅಭಿಪ್ರಾಯ ಏನು ಎಂದು ತಿಳಿದುಕೊಳ್ಳಲು ವಿಡಿಯೋವನ್ನು ವೀಕ್ಷಿಸೋಣ ಹಾಗು ಅದರಲ್ಲಿ ಚರ್ಚಿಸುವ ಪ್ರಮುಖ ಅಂಶಗಳನ್ನು ಪಟ್ಟಿಮಾಡಿಕೊಳ್ಳಲು ಪ್ರಶಿಕ್ಷಣಾರ್ಥಿಗಳಿಗೆ ತಿಳಿಸುವುದು.

ತಜ್ಞರ ವಿಷಯ ಮಂಡನೆ ಬಳಿಕ, ಪ್ರಶಿಕ್ಷಣಾರ್ಥಿಗಳ ಅನುಮಾನಗಳನ್ನು ನಿವಾರಿಸುವುದು.

ನಂತರ ಗ್ರಾಮದ ಸಾಮಾಜಿಕ ಸೌಕರ್ಯ ಮತ್ತು ಸಂಪನ್ಮೂಲಗಳ ಲಭ್ಯತೆಯನ್ನು ತಿಳಿದುಕೊಳ್ಳಲು ಚಟುವಟಿಕೆಯನ್ನು ಮಾಡೋಣ ಎಂದು ತಿಳಿಸುವುದು.

ಒಟ್ಟು ಪ್ರಶಿಕ್ಷಣಾರ್ಥಿಗಳನ್ನು ಪಂಚಾಯಿತಿವಾರು ಎರಡು ತಂಡಗಳಾಗಿ ವಿಂಗಡಿಸಿ, ಪ್ರತಿ ತಂಡದಲ್ಲಿ ಎರಡು ಕಿರು ತಂಡಗಳಾಗಿ ರಚಿಸುವುದು. ನಂತರ ಒಂದು ತಂಡಕ್ಕೆ ಸಾಮಾಜಿಕ ನಕ್ಷೆ ಮತ್ತೊಂದು ತಂಡಕ್ಕೆ ಸಂಪನ್ಮೂಲ ನಕ್ಷೆಯನ್ನು ರಚಿಸಲು ತಿಳಿಸುವುದು.


ನಂತರ ಸಂಸ್ಥೆಯಿಂದ ನೀಡಿರುವ ನಮೂನೆಯಂತೆ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮವಾರು ಭಾಗವಹಿಸಿರುವ ಪ್ರಶಿಕ್ಷಣಾರ್ಥಿಗಳಿಂದ ಮಾಹಿತಿಗಳನ್ನು ಭರ್ತಿ ಮಾಡಲು ತಿಳಿಸುವುದು.


ನಮೂನೆಯನ್ನು ಭರ್ತಿ ಮಾಡುವಾಗ ಕೆಳಕಂಡ ವಿಷಯಗಳ ಕುರಿತು ಲಭ್ಯವಿರುವ ಸಂಪನ್ಮೂಲಗಳ ಬಗೆಗೆ ಗಮನಹರಿಸಲು ತಿಳಿಸುವುದು.

- ಆರೋಗ್ಯ, ಶಿಕ್ಷಣ, ಮಹಿಳೆಯರು ಮತ್ತು ಮಕ್ಕಳಾಭಿವೃದ್ಧಿ.
- ದುರ್ಬಲ ವರ್ಗಗಳು : ಸಾಮಾಜಿಕವಾಗಿ ಶೋಷಿತರು, ವಿಶೇಷ ಚೇತನರು, ಹಿರಿಯ ನಾಗರಿಕರು, ಮಕ್ಕಳು ಇತ್ಯಾದಿ
- ಜೀವನೋಪಾಯ ಚಟುವಟಿಕೆಗಳು – ಕೃಷಿ, ಕೃಷಿ ತತ್ಸಂಬಂಧಿತ, ಕೃಷಿಯೇತರ
- ನೈಸರ್ಗಿಕ ಸಂಪನ್ಮೂಲಗಳು
- ಮೂಲಭೂತ ಸೌಕರ್ಯಗಳು – ರಸ್ತೆ, ಚರಂಡಿ, ನೈರ್ಮಲ್ಯ ಕುಡಿಯುವ ನೀರು, ಬೀದಿ ದೀಪಗಳು ಇತ್ಯಾದಿ.

ನಕ್ಷೆ ಮತ್ತು ನಮೂನೆ ಮೂಲಕ ಕ್ರೋಢೀಕರಿಸಿದ ಮಾಹಿತಿಗಳನ್ನು ದೊಡ್ಡ ಗುಂಪಿನಲ್ಲಿ ಸಂಕ್ಷಿಪ್ತವಾಗಿ ಮಂಡಿಸಲು ತಿಳಿಸುವುದು.

ನಂತರದಲ್ಲಿ ಗ್ರಾಮವಾರು ಸಾಮಾಜಿಕ ಮತ್ತು ಸಂಪನ್ಮೂಲದ ಲಭ್ಯತೆ ಕುರಿತು ಇರುವ ಕೊರತೆ ಮತ್ತು ಅಭಿವೃದ್ಧಿಗೆ ಇರುವ ಅವಕಾಶಗಳನ್ನು ಮನನ ಮಾಡಿಕೊಳ್ಳುವುದು.








## ಅಭಿವೃದ್ಧಿಯ ದೃಷ್ಟಿಕೋನ

'ಅಭಿವೃದ್ಧಿ' ಎಂಬ ಪದವು ಬಹು ವಿಸ್ತಾರವೂ, ವಿವಿಧ ಆಯಾಮಗಳನ್ನು ಹೊಂದಿರುವುದೂ ಆಗಿದೆ. ಅಭಿವೃದ್ಧಿ ಎಂದಾಕ್ಷಣ ಮೊದಲಿಗೆ ಚರ್ಚೆಗೆ ಬರುವುದು ಆರ್ಥಿಕ ಅಭಿವೃದ್ಧಿ. ಇದಕ್ಕೆ ಮೂಲಾಧಾರ ಅಂಶಗಳಾದ ಸಾಮಾಜಿಕ ವಿಷಯಗಳು ಹಾಗೂ ನೈಸರ್ಗಿಕ ವಿಷಯಗಳಿಗೂ ಮಹತ್ವ ಕೊಡುವುದು ಇತ್ತೀಚೆಗೆ ಕಂಡುಬರುತ್ತಿದೆ. ವಿಶ್ವದಲ್ಲಿರುವ ದೇಶಗಳನ್ನು ಅಭಿವೃದ್ಧಿ ಹೊಂದಿರುವ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳೆಂದು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಆರ್ಥಿಕ ಬೆಳವಣಿಗೆಯ ಮಟ್ಟ, ತಲಾದಾಯ, ಶಿಕ್ಷಣದ ಮಟ್ಟ, ಜನಸಂಖ್ಯಾ ಪ್ರಮಾಣ, ಜನನದರ, ಸ್ತ್ರೀಯ ಸ್ಥಾನಮಾನ, ಸಾರಿಗೆ ಸಂಪರ್ಕ ಸೌಲಭ್ಯ, ಆರೋಗ್ಯ ಸೌಲಭ್ಯಗಳ ಲಭ್ಯತೆ, ಶಕ್ತಿ ಬಳಕೆ ಪ್ರಮಾಣ ಹಾಗೂ ಇತರೆ ಅಂಶಗಳ ಆಧಾರದ ಮೇಲೆ ದೇಶಗಳನ್ನು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳೆಂದು ವಿಂಗಡಿಸಲಾಗಿದೆ.

ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮ 1990 ರಲ್ಲಿ ಮಾನವ ಅಭಿವೃದ್ಧಿ ವರದಿ (ಮಾ.ಅ.ವ.) ಯನ್ನು ಪ್ರಕಟಿಸಿದಾಗಿನಿಂದ, ಅಭಿವೃದ್ಧಿ ಸಿದ್ಧಾಂತದ ಆಚರಣೆ, ಮಾನವ ಅಭಿವೃದ್ಧಿಯು ಜೀವನದ ಗುಣಮಟ್ಟ ಸುಧಾರಣೆಯ ಒಂದು ಪ್ರಮುಖ ಮಾರ್ಗವಾಗಿ ಹೊರಹೊಮ್ಮುವುದಕ್ಕಿಂತ ಮೊದಲು, ಕೇವಲ ಆದಾಯ ಅಥವಾ ಉತ್ಪನ್ನವನ್ನು ವೃದ್ಧಿಸುವುದರ ಕಡೆಗಿತ್ತು. ಆ ಮೂಲಕ ಆರ್ಥಿಕ ಬೆಳವಣಿಗೆಯ ಫಲಶೃತಿಗಳು ಮತ್ತು ಸಾಮಾಜಿಕ ನ್ಯಾಯ ಎಲ್ಲರಿಗೂ ತಲುಪುತ್ತವೆಂದು ಪರಿಭಾವಿಸಲಾಗಿತ್ತು. 1970ರ ದಶಕದ ವರೆಗೆ "ಮೇಲಿನಿಂದ ಹರಿದುಬರುವ ಸಿದ್ಧಾಂತ" (Trickle down) ವನ್ನಾಧರಿಸಿ ರಚಿತವಾದ "ಆರ್ಥಿಕ ಬೆಳವಣಿಗೆಯ" ಮಾದರಿಯು ಕೇವಲ ರಾಷ್ಟ್ರದ ಉತ್ಪನ್ನ, ಉಳಿತಾಯ, ಬಂಡವಾಳ ಹೆಚ್ಚಳಕ್ಕೆ ಮಾತ್ರ ಆದ್ಯತೆ ನೀಡಲಾಗಿತ್ತು. ಆರ್ಥಿಕ ಬೆಳವಣಿಗೆಯ ದರಗಳು ಅಧಿಕವಾಗುತ್ತಿದ್ದರೂ ಬಡತನ, ಸಾಮಾಜಿಕ ಹೊರತಳ್ಳುವಿಕೆ, ಲಿಂಗ ತಾರತಮ್ಯ ಹಾಗೂ ಅಪರಾಧ ಮುಂತಾದ ಸಂಕಷ್ಟಗಳು ವ್ಯಾಪಕವಾಗಿ ಹಾಗೂ ನಿರಂತರವಾಗಿ ವಿವಿಧ ಸಮಾಜಗಳಲ್ಲಿ ಮುಂದುವರೆದಿರುವುದು ಕಂಡುಬರುತ್ತದೆ.

**ಸುಸ್ಥಿರ ಅಭಿವೃದ್ಧಿ ಅರ್ಥ, ವ್ಯಾಖ್ಯೆ:**

ಮನವನ ಸದ್ಯದ ಅಗತ್ಯಗಳನ್ನು ಪೂರೈಸುತ್ತ ಮುಂದಿನ ಪೀಳಿಗೆಯ ಅಥವಾ ಭವಿತವ್ಯದ ಅವಶ್ಯಕತೆಗೂ ಕೊರತೆಯಾಗದಂತೆ ಇರುವ ಸಂಪನ್ಮೂಲದ ಉಪಯೋಗದ ಮೂಲಕ ಸಾಧಿಸಲಾಗುವ ಬೆಳವಣಿಗೆ ವಿಧಾನವೇ ಸುಸ್ಥಿರ ಅಭಿವೃದ್ಧಿ.

1987 ರಲ್ಲಿ ಯುನೈಟೆಡ್ ನೇಷನ್ಸ್ ಬಿಡುಗಡೆಗೊಳಿಸಿದ 'ಬ್ರಂಟ್‌ಲ್ಯಾಂಡ್ ಕಮಿಷನ್ ರಿಪೋರ್ಟ್' ನಲ್ಲಿರುವ ಸುಸ್ಥಿರ ಅಭಿವೃದ್ಧಿಗೆ ಸಂಬಂಧಪಟ್ಟ ವ್ಯಾಖ್ಯೆಯು ಸದ್ಯದಲ್ಲಿ ಪ್ರಚಲಿತವಿರುವ ವ್ಯಾಖ್ಯೆಯಾಗಿದೆ. ಇದರ ಪ್ರಕಾರ "ಸುಸ್ಥಿರ ಅಬಿವೃದ್ಧಿ ಎಂಬುದು ವರ್ತಮಾನದ ಅವಶ್ಯಕತೆಗಳನ್ನು ಪೂರೈಸುತ್ತಾ ಇದೇ ಸಮಯದಲ್ಲಿ ಯಾವುದೇ ಹೊಂದಾಣಿಕೆಯಿಲ್ಲದೇ ಮುಂದಿನ ಪೀಳಿಗೆಗೂ ಅವರದೇ ಆದ ಅವಶ್ಯಕತೆಗಳನ್ನು ಪೂರೈಸುವ ಗುಣಗಳನ್ನು ಹೊಂದಿರುವಂತೆ ಎಚ್ಚರವಹಿಸಿ ಮಾಡಲಾಗುವ ಅಭಿವೃದ್ಧಿಯೇ ಆಗಿದೆ."

**ಸುಸ್ಥಿರ ಅಭಿವೃದ್ಧಿಯ ಅಂಶಗಳು:**

ಸುಸ್ಥಿರ ಅಭಿವೃದ್ಧಿಯಲ್ಲಿ ಪರಸ್ಪರ ಅವಲಂಭಿತವಾದ ಮೂರು ಮುಖ್ಯ ಅಂಶಗಳನ್ನು ಗುರುತಿಸಲಾಗಿದೆ.

1. ಆರ್ಥಿಕ ಅಭಿವೃದ್ಧಿ 2. ಸಾಮಾಜಿಕ ಅಭಿವೃದ್ಧಿ 3. ಪರಿಸರ ಸಂರಕ್ಷಣೆ.

ಇವೇ ಅಲ್ಲದೆ, ಇನ್ನೂ ಎರಡು ಅಂಶವನ್ನು ಸುಸ್ಥಿರ ಅಭಿವೃದ್ಧಿಯಲ್ಲಿ ಪರಿಗಣಿಸಬೇಕಾಗುತ್ತದೆಂಬುದು ಹಲವರ ವಾದವಾಗಿದ್ದು, ಸದ್ಯದ ಪರಿಸ್ಥಿತಿಯಲ್ಲಿ ಇದನ್ನು ಪರಿಗಣಿಸಬೇಕಾದ್ದೂ ಅಗತ್ಯವಾಗಿದೆ. ನಾಲ್ಕನೆಯದು ಸಂಸ್ಕೃತಿ ಮತ್ತು ಐದನೆಯದು ರಾಜಕೀಯ.

**ಸುಸ್ಥಿರತೆಯ ಅಳತೆಗೋಲಾಗಿ ಲಭ್ಯತೆ, ಪಡೆಯುವ ಸಾಮರ್ಥ್ಯ, ಜೀರ್ಣಿಸಿಕೊಳ್ಳುವಿಕೆ :**

ಇತರೆ ಅಭಿವೃದ್ಧಿ ವಿಷಯಗಳನ್ನು ಅಳೆಯುವಂತೆ ಸುಸ್ಥಿರ ಅಭಿವೃದ್ಧಿಯನ್ನು ಅಳೆಯುವುದೂ ಸಹ ಇದರ ಪರಿಕಲ್ಪನೆಯೊಂದಿಗೇ ಬೆಳೆದು ಬಂದಿದೆ. ಯಾವುದೇ ವಿಷಯದ ಸುಸ್ಥಿರತೆಯನ್ನು ಅಳೆಯಲು ಹಲವು ರೀತಿಯ ಮಾನದಂಡಗಳನ್ನು ಅಭಿವೃದ್ಧಿಪಡಿಸಲಾಗಿದೆ ಹಾಗೂ ಅಭಿವೃದ್ಧಿಪಡಿಸಲಾಗುತ್ತಿದೆ. ಎಲ್ಲ ಅಭಿವೃದ್ಧಿ ಕೆಲಸಗಳ ಮೂಲ ಉದ್ದೇಶ ಜನರ ಜೀವನಮಟ್ಟವನ್ನು ಹೆಚ್ಚಿಸುವುದೇ ಆಗಿರುವುದರಿಂದ ಸುಸ್ಥಿರತೆಯನ್ನು ಅಳೆಯಲು ಮೂರು ಪ್ರಮುಖ ಮಾನದಂಡಗಳನ್ನು ಗುರುತಿಸಲಾಗಿದೆ. 1. ಲಭ್ಯತೆ 2. ಪಡೆದುಕೊಳ್ಳುವ ಸಾಮರ್ಥ್ಯ ಹಾಗೂ 3. ಜೀರ್ಣಿಸಿಕೊಳ್ಳುವಿಕೆ


ಯಾವುದೇ ವಸ್ತುವಿನ ವಿಷಯದಲ್ಲಿ ಈ ಮಾನದಂಡಗಳನ್ನು ಅಳವಡಿಸಬಹುದಾಗಿದೆ. **ಲಭ್ಯತೆ** ಎಂದರೆ ಯಾವುದೇ ವಸ್ತು ಜನರು ಜೀವಿಸುವ ಜಾಗದಲ್ಲಿ ಸಿಗುವುದು ಅಥವಾ ಇರುವುದು. **ಪಡೆದುಕೊಳ್ಳುವ ಸಾಮರ್ಥ್ಯ** ಎಂದರೆ ಆ ವಸ್ತು ಅಲ್ಲಿ ಲಭ್ಯವಿದ್ದು, ಅದನ್ನು ತನ್ನ ಅವಶ್ಯಕತೆಗೆ ತಕ್ಕಂತೆ ಪಡೆದುಕೊಳ್ಳುವುದೇ ಆಗಿದೆ. **ಜೀರ್ಣಿಸಿಕೊಳ್ಳುವಿಕೆ** ಎಂದರೆ ಪಡೆದುಕೊಂಡ ವಸ್ತುವನ್ನು ಉಪಯೋಗಿಸುವುದು ಅಥವಾ ಅರಗಿಸಿಕೊಳ್ಳುವುದು ಅಥವಾ ಜೀರ್ಣಿಸಿಕೊಳ್ಳುವುದೇ ಆಗಿದೆ. ಸುಸ್ಥಿರತೆಯನ್ನು ಸಾಧಿಸುವಲ್ಲಿ ಸಂಘಟಿತ ಪ್ರಯತ್ನದ ಅವಶ್ಯಕತೆಯು ಹೆಚ್ಚಾಗಿರುವುದರಿಂದ ಸಮುದಾಯ, ಸ್ಥಳೀಯ ಸಂಸ್ಥೆಗಳು, ಮೇಲಿನ ಹಂತದ ಸರ್ಕಾರಗಳು, ಖಾಸಗಿ ಸಂಸ್ಥೆಗಳು ಮತ್ತು ಅಭಿವೃದ್ಧಿ ವಲಯದಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಂದು ಸಂಸ್ಥೆಯು ಪ್ರಮುಖವಾಗುತ್ತದೆ.

17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವುದಕ್ಕಾಗಿ 169 ಟಾರ್ಗೆಟ್‌ಗಳನ್ನು ಸಿದ್ಧಪಡಿಸಲಾಗಿದೆ. ಈ ಟಾರ್ಗೆಟ್‌ಗಳ ಸಾಧನೆಯನ್ನು ಅಳೆಯಲು 230 ಜಾಗತಿಕ ಸೂಚ್ಯಾಂಕಗಳನ್ನು (306 ರಾಷ್ಟ್ರೀಯ ಸೂಚ್ಯಾಂಕಗಳು) ಗುರುತಿಸಲಾಗಿದೆ. ಆ ಮೂಲಕ ಸಮಾಜದ ಸರ್ವತೋನ್ಮುಖ ಅಭಿವೃದ್ಧಿಯನ್ನು ಸಾಧಿಸಲು ಅನುವಾಗುವುದೆಂದು ಆಶಿಸಲಾಗಿದೆ. 17 ಗುರಿಗಳು ಈ ಕೆಳಗಿನಂತಿವೆ:


1) ಬಡತನ ನಿರ್ಮೂಲನೆ
2) ಹಸಿವು ಮುಕ್ತತೆ ಮತ್ತು ಸುಸ್ಥಿರ ಕೃಷಿ
3) ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
4) ಗುಣಮಟ್ಟದ ಶಿಕ್ಷಣ ಮತ್ತು ಜೀವಪರ್ಯಂತ ಕಲಿಕೆ
5) ಲಿಂಗ ಸಮಾನತೆ
6) ಶುದ್ಧ ನೀರು ಮತ್ತು ನೈರ್ಮಲ್ಯ
7) ಎಲ್ಲರಿಗೂ ದೊರಕುವಂತೆ ಆಧುನಿಕ ಇಂಧನ
8) ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ
9) ಕೈಗಾರಿಕೆ, ಅವಿಷ್ಕಾರ ಮತ್ತು ಮೂಲಸೌಕರ್ಯ
10) ಅಸಮಾನತೆ ಕಡಿಮೆಗೊಳಿಸುವುದು
11) ಸುಸ್ಥಿರ ನಗರಗಳು ಮತ್ತು ಸಮುದಾಯಗಳು
12) ಜವಾಬ್ದಾರಿಯುತ ಉತ್ಪಾದನೆ ಮತ್ತು ಬಳಕೆ
13) ಹವಮಾನ ಬದಲಾವಣೆಗೆ ಕ್ರಮ
14) ನೀರಿನ ಜೀವರಾಶಿ
15) ಭೂ ಮೇಲಿನ ಜೀವರಾಶಿ
16) ಶಾಂತಿ, ನ್ಯಾಯ ಮತ್ತು ಸದೃಡ ಸಂಸ್ಥೆಗಳ ನಿರ್ಮಾಣ
17) ಗುರಿ ಸಾಧನೆಗಾಗಿ ಸಹಭಾಗಿತ್ವ

## ನಮ್ಮೂರು

ಗ್ರಾಮೀಣ ಮತ್ತು ನಗರ ಪ್ರದೇಶವೆನ್ನದೆ ಪ್ರತಿಯೊಬ್ಬ ವ್ಯಕ್ತಿಗೂ ತಾನು ಹುಟ್ಟಿ ಬೆಳೆದ ಮತ್ತು ಬಾಳಿ ಬದುಕಿದ ಊರೆಂದರೆ ಅಚ್ಚುಮೆಚ್ಚು. ನಮ್ಮ ಅಸ್ತಿತ್ವದ ಭಾಗವಾಗಿರು ನಮ್ಮೂರು ಕೇವಲ ನಮ್ಮ ವಾಸಸ್ಥಳವಾಗಿರದೆ ನಮ್ಮ ಬದುಕಾಗಿದೆ. ಹೊಸಬರಿಗೆ ನಮ್ಮ ಪರಿಚಯ ಮಾಡಿಕೊಳ್ಳುವ ಸಂದರ್ಭದಲ್ಲಿ ಬಹು ಹೆಮ್ಮೆಯಿಂದ ಹಾಗೂ ಉತ್ಸಾಹದಿಂದ ನಮ್ಮೂರ ಹೆಸರನ್ನು ಹೇಳುತ್ತೇವೆ. ಹಳ್ಳಿಗಳು ಇಂದಿಗೂ ತನ್ನ ಸ್ವಂತಿಕೆಯನ್ನು ಕಾಪಾಡಿಕೊಳ್ಳುವಲ್ಲಿ ಬಹುಮಟ್ಟಿಗೆ ಯಶಸ್ವಿಯೂ ಆಗಿವೆ. ಗ್ರಾಮೀಣ ಪ್ರದೇಶ ಅಥವ ಹಳ್ಳಿಗಳಲ್ಲಿ ವಾಸಿಸುವ ಪ್ರತಿಯೊಬ್ಬರಿಗು ಎಲ್ಲರ ಪರಿಚಯವಿರುವುದೇ ಹಳ್ಳಿಯ ವೈಶಿಷ್ಟವಾಗಿದೆ. ಹಳ್ಳಿಯಲ್ಲಿ ವಾಸಿಸುವ ಎಲ್ಲರ ಹೆಸರು ಮತ್ತು ಕುಟುಂಬದ ಹಿನ್ನೆಲೆ ಪ್ರತಿಯೊಬ್ಬರಿಗೂ ಅರಿವಿರುತ್ತದೆ.



ಜನರ ಸೇವೆಯ ಉದ್ದೇಶದಿಂದ ಸಾರ್ವಜನಿಕ ಜೀವನಕ್ಕೆ ಚುನಾಯಿತರಾಗಿ ಬಂದಿರು ನಾವುಗಳು ಗ್ರಾಮ ಪಂಚಾಯಿತಿಯು ಅನುಷ್ಠಾನ ಮಾಡಬೇಕಾದ ಕೆಲಸಗಳಿಗೆ ಜವಾಬ್ದಾರರಾಗಿದ್ದೇವೆ. ನಮ್ಮ ಮತಕ್ಷೇತ್ರದ ಮತದಾರರು ಹಾಗೂ ನಮ್ಮೂರಿನ



ನಿವಾಸಿಗಳ ಅಗತ್ಯತೆ, ಅವಶ್ಯಕತೆಗಳು, ಸಮಸ್ಯೆಗಳನ್ನು ಆಲಿಸುವ, ಹಲವು ಸಂದರ್ಭಗಳಲ್ಲಿ ನಾವೇ ಸಾರ್ವಜನಿಕರ ಅಗತ್ಯತೆ, ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡು ಹಿಡಿಯಬೇಕಾದ ಹೊಣೆಗಾರಿಕೆ ನಮ್ಮ ಮೇಲಿದೆ.

ರಾಜಕೀಯ ವಲಯಕ್ಕೆ ಪ್ರವೇಶಿಸಿರುವ ನಮಗೆ ನಮ್ಮದೇಯಾದ ಆದರ್ಶಗಳು ಮತ್ತು ಕನಸಿದೆ. ಇಂದು ಗ್ರಾಮ ಪಂಚಾಯಿತಿಯ ಸದಸ್ಯರಾಗಿರುವ ನಾವುಗಳು ಮೀಸಲಾತಿ ಲಭ್ಯವಾದಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗುವ ಕನಸನ್ನು ಹೊಂದಿದ್ದೇವೆ. ಗ್ರಾಮ ಪಂಚಾಯಿತಿಯ ಅನುಭವ ಪಡೆದ ತರುವಾಯ ಮುಂದಿನ ಅವಧಿಗೆ ಜಿಲ್ಲಾ ಪಂಚಾಯಿತಿಯ ಸದಸ್ಯರು, ಅಧ್ಯಕ್ಷರು ಆಗುವ ಅಭಿಲಾಷೆ ಹೊಂದಿದ್ದೇವೆ. ಜನರಿಗಾಗಿ ಶಾಸನಗಳನ್ನು ರೂಪಿಸುವ ಮತ್ತು ಬದಲಿಸುವ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಯೋಜನೆಗಳನ್ನು ರಚಿಸುವ ಮತ್ತು ಅನುಷ್ಠಾನ ಮಾಡುವ ಎಂಎಲ್‌ಎ ಮತ್ತು ಎಂಪಿ ಆಗುವ ಕನಸು ನಮ್ಮಲ್ಲಿ ಹಲವರಲ್ಲಿರಬಹುದು. ಆದರೆ ನಮ್ಮ ಕನಸನ್ನು ಸಾಕಾರಗೊಳಿಸಲು ನಾವು ಪಯಣಿಸಬೇಕಾಗಿರುವ ದೂರದ ಅರಿವಿರಬೇಕು ಮತ್ತು ದಾರಿಯ ಸ್ವರೂಪ ಹಾಗೂ ತಲುಪಲು ಎಷ್ಟು ಮೈಲಿಗಲ್ಲುಗಳನ್ನು ದಾಟಬೇಕೆಂಬುದು ನಮಗೆ ತಿಳಿದಿದ್ದರೆ ಸಿದ್ದತೆಯ ಜೊತೆಗೆ ಪಯಣಿಸಬಹುದು.

ಹೀಗಾಗಿ ನಮ್ಮ ಕನಸನ್ನು ನನಸು ಮಾಡಿಕೊಳ್ಳಲು ಗ್ರಾಮಪಂಚಾಯ್ತಿ ವ್ಯವಸ್ಥೆಯಲ್ಲಿ ಈ ಹಂತ ಬಹಳ ಪ್ರಮುಖವಾದುದು. ಪ್ರಸ್ತುತ ನಮಗೆ ದೊರೆತಿರುವ ಅವಕಾಶವನ್ನು ಹೆಚ್ಚು ಸಮರ್ಥವಾಗಿ ಬಳಸಿಕೊಳ್ಳಬೇಕಾಗಿದೆ. ನಮ್ಮ ಹಳ್ಳಿಯನ್ನು ಸುಸ್ಥಿರ, ಸ್ವಾವಲಂಬಿ, ಸ್ವಾಭಿಮಾನಿ ಗ್ರಾಮವಾಗಿಸಬೇಕಾಗಿದೆ. ನನ್ನ ಹಳ್ಳಿಯನ್ನು ವ್ಯಾಜ್ಯಮುಕ್ತ, ವ್ಯಸನಮುಕ್ತ ಮತ್ತು ಋಣ ಮುಕ್ತ ಹಾಗೂ ಸಂಪೂರ್ಣ ಅಭಿವೃದ್ಧಿ ಹೊಂದಿದ ಗ್ರಾಮವನ್ನಾಗಿಸಲು ಶ್ರಮಿಸಬೇಕು. ಇದೇ ರೀತಿಯಲ್ಲಿ ನಮ್ಮ ಹಳ್ಳಿಯನ್ನು ಅಭಿವೃದ್ಧಿ ಪಡಿಸುವ ಕನಸನ್ನು ಹೊಂದಿರುವ ನಾವುಗಳು, ನಾವು ಚುನಾಯಿತರಾಗಿ ಆಯ್ಕೆಯಾಗಿರುವ ವಾರ್ಡಿನ ಮತ್ತು ಹಳ್ಳಿಯ ಇಂದಿನ ಪರಿಸ್ಥಿತಿಯನ್ನು ತಿಳಿದುಕೊಂಡಾಗ ಮಾತ್ರ ಅಭಿವೃದ್ಧಿಯ ಕನಸನ್ನು ಸಾಕಾರಗೊಳಿಸಬಹುದು.

ನಮ್ಮ ಗ್ರಾಮದ ಕುರಿತು ನಮಗೆಷ್ಟು ಅರಿವಿದೆ ಅಥವಾ ನೆನಪಿದೆಯೆಂದು ಮುಂದೆ ನೀಡಿರುವ ನಮೂನೆಯ ಮೂಲಕ ತಿಳಿದುಕೊಳ್ಳೋಣ.

## ನನ್ನ ಊರು – ನಮ್ಮೂರು

**1. ಗ್ರಾಮದ ಜನಸಂಖ್ಯೆ:**

| ಕ್ರ. ಸಂ | ವಿಷಯ | ಅಂಕಿ ಅಂಶ |
|---|---|---|
| 01 | ಒಟ್ಟು ಮಹಿಳೆಯರು | |
| 02 | ಒಟ್ಟು ಪುರುಷರು | |
| 03 | 0–6 ವರ್ಷದೊಳಗಿನ ಬಾಲಕಿಯರ ಸಂಖ್ಯೆ | |
| 04 | 0–6 ವರ್ಷದೊಳಗಿನ ಬಾಲಕರ ಸಂಖ್ಯೆ | |
| 05 | ಹಿರಿಯ ನಾಗರಿಕರ ಸಂಖ್ಯೆ | |
| 06 | ವಿಶೇಷ ಚೇತನರ ಸಂಖ್ಯೆ | |
| 07 | ವಿಧವೆಯರ ಸಂಖ್ಯೆ | |

**2. ಮನೆಯ ಬಗ್ಗೆ ಮಾಹಿತಿ:**

| ಕ್ರ. ಸಂ | ವಿಷಯ | ಅಂಕಿ ಅಂಶ |
|---|---|---|
| 01 | ಒಟ್ಟು ಮನೆಗಳು (ಶೇಕಡವಾರು) | |
| | ಪಕ್ಕಾ ಮನೆಗಳು (ಶೇಕಡವಾರು) | |
| | ಕಚ್ಚಾ ಮನೆಗಳು (ಶೇಕಡವಾರು) | |
| 02 | ಒಟ್ಟು ವಿದ್ಯುತ್ ಸಂಪರ್ಕವಿರುವ ಮನೆಗಳು (ಶೇಕಡವಾರು) | |
| 03 | ಶೌಚಾಲಯಗಳಿರುವ ಒಟ್ಟು ಮನೆಗಳು(ಶೇಕಡವಾರು) | |
| 04 | ಅನಿಲ (ಗ್ಯಾಸ್)ಸಂಪರ್ಕವಿರುವ ಒಟ್ಟು ಮನೆಗಳು (ಶೇಕಡವಾರು) | |
| 05 | ವೈಯಕ್ತಿಕ ನಳ ಸಂಪರ್ಕವಿರುವ ಒಟ್ಟು ಮನೆಗಳು (ಶೇಕಡವಾರು) | |


**3. ಶಿಕ್ಷಣ :**

| ಕ್ರ. ಸಂ | ವಿಷಯ | ಅಂಕಿ ಅಂಶ |
|---|---|---|
| 01 | ಗ್ರಾಮದ ಜನಸಂಖ್ಯೆಯ ಸಾಕ್ಷರತೆ (ಶೇಕಡವಾರು) | |
| 02 | ಗ್ರಾಮದಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ | |
| 03 | ಮಧ್ಯಾಹ್ನದ ಬಿಸಿಯೂಟದ ಗುಣಮಟ್ಟ ಉತ್ತಮವಾಗಿದೆಯೇ? | |

**4. ಗ್ರಾಮೀಣ ಮೂಲಭೂತ ಸೌಕರ್ಯಗಳು:**

| ಕ್ರ. ಸಂ | ವಿಷಯ | ಅಂಕಿ ಅಂಶ |
|---|---|---|
| 01 | ಪಂಚಾಯತ್ ಕಛೇರಿ | ಇದೆ / ಇಲ್ಲ |
| | ಅಂಗನವಾಡಿ ಕೇಂದ್ರ | ಇದೆ / ಇಲ್ಲ |
| | ಅ. ಎಷ್ಟು ಅಂಗನವಾಡಿಗಳಿವೆ | |
| 02 | ಆ. ಮಿನಿ ಅಂಗನವಾಡಿ | |
| 03 | ಪ್ರಾಥಮಿಕ ಆರೋಗ್ಯ ಕೇಂದ್ರ | ಇದೆ / ಇಲ್ಲ |
| 04 | ಪಶು ವೈದ್ಯಕೀಯ ಆಸ್ಪತ್ರೆ | ಇದೆ / ಇಲ್ಲ |

| ಕ್ರ. ಸಂ | ವಿಷಯ | ಅಂಕಿ ಅಂಶ |
|---|---|---|
| 05 | ಅಂಚೆ ಕಛೇರಿ | ಇದೆ / ಇಲ್ಲ |
| 06 | ನ್ಯಾಯಬೆಲೆ ಅಂಗಡಿ | ಇದೆ / ಇಲ್ಲ |
| 07 | ಪೋಲಿಸ್ ಠಾಣೆ / ಚೌಕಿ | ಇದೆ / ಇಲ್ಲ |
| 08 | ಕಿರಿಯ ಪ್ರಾಥಮಿಕ ಶಾಲೆ | ಇದೆ / ಇಲ್ಲ |
| 09 | ಹಿರಿಯ ಪ್ರಾಥಮಿಕ ಶಾಲೆ | ಇದೆ / ಇಲ್ಲ |
| 10 | ಪ್ರೌಢಶಾಲೆ | ಇದೆ |





| ಕ್ರ. ಸಂ | ವಿಷಯ | ಅಂಕಿ ಅಂಶ |
| --- | --- | --- |
| 11 | ಪದವಿಪೂರ್ವ ಕಾಲೇಜು | ಇದೆ / ಇಲ್ಲ |
| 12 | ಖಾಸಗೀ ಶಾಲೆಗಳು | ಇದೆ / ಇಲ್ಲ |
| 13 | ವಸತಿ ನಿಲಯಗಳು | ಇದೆ / ಇಲ್ಲ |
| 14 | ನೀರು ಸರಬರಾಜು | ಇದೆ / ಇಲ್ಲ |
| | ಅ. ನದಿ, ಕೆರೆ ನೀರಿನ ಮೂಲ | |
| | ಆ. ಕೊಳವೆ ಬಾವಿ | |
| 15 | ನಿಮ್ಮ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವಿದೆಯೇ? | ಇದೆ / ಇಲ್ಲ |
| 16 | ಕೆರೆಗಳು | ಇದೆ / ಇಲ್ಲ |
| 17 | ಒಳ ಚರಂಡಿ ವ್ಯವಸ್ಥೆ | ಇದೆ / ಇಲ್ಲ |
| 18 | ಕಸ ವಿಲೇವಾರಿ ವ್ಯವಸ್ಥೆ / ಸ್ಥಳ | ಇದೆ / ಇಲ್ಲ |
| 19 | ಸಮುದಾಯ ಭವನ | ಇದೆ / ಇಲ್ಲ |

| ಕ್ರ. ಸಂ | ವಿಷಯ | ಅಂಕಿ ಅಂಶ |
| --- | --- | --- |
| 20 | ಬ್ಯಾಂಕ್ | ಇದೆ / ಇಲ್ಲ |
| 21 | ಎಟಿಎಂ | ಇದೆ / ಇಲ್ಲ |
| 22 | ಸ್ಥಳೀಯ ಮಾರುಕಟ್ಟೆ | ಇದೆ / ಇಲ್ಲ |
| 23 | ಗೋಡನ್ | ಇದೆ / ಇಲ್ಲ |
| 24 | ಮೊಬೈಲ್ ಟವರ್ | ಇದೆ / ಇಲ್ಲ |
| 25 | ಬಸ್ ತಂಗುದಾಣ | ಇದೆ / ಇಲ್ಲ |
| 26 | ಗ್ರಂಥಾಲಯ | ಇದೆ / ಇಲ್ಲ |
| 27 | ಸೌರ ದೀಪಗಳು/ ಪವನ ಶಕ್ತಿ | ಇದೆ / ಇಲ್ಲ |
| 28 | ನಮ್ಮ ಗ್ರಾಮ ಬಯಲು ಬಹಿರ್ದೆಸೆ ಮುಕ್ತ ಗ್ರಾಮ | ಇದೆ / ಇಲ್ಲ |
| 29 | ಪ್ರವಾಸಿ ತಾಣಗಳು | ಇದೆ / ಇಲ್ಲ |
| 30 | ಐತಿಹಾಸಿಕ ವಿಶಿಷ್ಟ ಸ್ಥಳಗಳು | ಇದೆ / ಇಲ್ಲ |

**5. ಆರೋಗ್ಯ ಮತ್ತು ಪೌಷ್ಠಿಕಾಂಶ:**

1. ಅಪೌಷ್ಟಿಕಾಂಶದಿಂದ ಬಳಲುತ್ತಿರುವ 0–6 ವರ್ಷದಲ್ಲಿರುವ ಮಕ್ಕಳ ಸಂಖ್ಯೆ:

2. ಅಂಗನವಾಡಿ ಕೇಂದ್ರದಲ್ಲಿ ಆರೋಗ್ಯ ತಪಾಸಣೆ ಮಾಡುತ್ತಿದ್ದಾರೆಯೇ? ಹೌದು/ಇಲ್ಲ

3. ಮಕ್ಕಳಿಗೆ ಬರುವ ಸಾಮಾನ್ಯ ಕಾಯಿಲೆಗಳು:
   ಅ. ಭೇದಿ ಆ. ಕೆಮ್ಮು–ಶೀತ ಇ. ಜ್ವರ ಈ. ಇತರೆ

4. ನಿಮ್ಮ ಗ್ರಾಮದಲ್ಲಿರುವ ಕುಡಿಯುವ ನೀರಿನ ಮೂಲಗಳು:
   ಅ. ನಲ್ಲಿ ಸಂಪರ್ಕ ಆ. ಕೈಪಂಪು ಇ. ಬಾವಿ ಈ. ಇತರೆ

**6. ನೈಸರ್ಗಿಕ ಸಂಪನ್ಮೂಲಗಳು**

**1. ಅರಣ್ಯ**

ಅ. ನೈಸರ್ಗಿಕ ಅರಣ್ಯ ಆ. ವನ್ಯಜೀವಿಗಳು ಇ. ಸಾಮಾಜಿಕ ಅರಣ್ಯ
ಈ. ಔಷಧಿ ಗಿಡಗಳು ಕಾಡು ಉ. ದೇವರ ವನ ಊ. ತೋಪು
ಋ. ಗೋಮಾಳ ಎ. ಬೆಟ್ಟ /ಗುಡ್ಡ

**2. ಜಲ ಮೂಲಗಳು**

ಅ. ನದಿ　　ಆ. ಕೆರೆ/ಕಟ್ಟೆ　　ಇ. ತೊರೆ/ಜರಿ

ಈ. ಕೊಳಗಳು/ ಕಲ್ಯಾಣಿ

**3. ಸ್ಥಳೀಯ ವೈಶಿಷ್ಟ್ಯಗಳು**

ಅ. ಜನಪದ ಕಲೆಗಳು　　ಆ. ವಲಸೆ ಜನಾಂಗ　　ಇ. ಬುಡಕಟ್ಟು ಜನಾಂಗ

**7. ಸಾಮಾಜಿಕ ಸಮಸ್ಯೆಗಳು**

ಅ. ಬಾಲ್ಯವಿವಾಹ　　ಆ. ಬಾಲ ಕಾರ್ಮಿಕ ಪದ್ದತಿ　　ಇ. ಜೀತ ಪದ್ಧತಿ

ಈ. ಭಿಕ್ಷಾಟಣೆ　　ಉ. ವರದಕ್ಷಿಣೆ ಕಿರುಕುಳ/ ಸಾವು　　ಊ. ಮದ್ಯ ಮತ್ತು ಮಾದಕ ವ್ಯಸನ

## ನಮ್ಮ ಗ್ರಾಮಕ್ಕೆ ತುರ್ತಾಗಿ ಅಗತ್ಯವಿರುವ ಸೇವೆಗಳು

| ಕ್ರ.ಸಂ. | ಸೇವೆಗಳು |
|---|---|
| 01 | |
| 02 | |
| 03 | |
| 04 | |
| 05 | |
| 06 | |
| 07 | |


**ಪ್ರಶಿಕ್ಷಣಾರ್ಥಿಯ ಹೆಸರು:**

**ಗ್ರಾಮ ಪಂಚಾಯಿತಿ:**

**ತಾಲ್ಲೂಕು:**

**ಉಪ ಸಂಹಾರ**

ಚುನಾಯಿತ ಸದಸ್ಯರು ಅಭಿವೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿ ಇವುಗಳ ಮಹತ್ವವನ್ನು ಮನಗಾಣುವಂತಾಗಬೇಕು. ಒಂದು ಗ್ರಾಮ ಅಥವಾ ಒಂದು ಪಂಚಾಯಿತಿ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಸ್ಪಷ್ಟವಾದ ಅಭಿವೃದ್ಧಿ ದೃಷ್ಟಿಕೋನವನ್ನು ಹೊಂದಬೇಕಾಗಿರುವುದು ಅತ್ಯವಶ್ಯಕ. ಇದರಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಮುಖ್ಯ ಆದರೆ, ಇದಕ್ಕೆ ಪೂರಕವಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಅಷ್ಟೇ ಮಹತ್ವದ್ದು. ನಮ್ಮ ಮುಂದಿನ 5 ವರ್ಷದ ಯೋಜನೆ ಮತ್ತು ಗುರಿಗಳಿಗೆ ನಮ್ಮ ಬಳಿಯಿರುವ ಮಾಹಿತಿಯೇ ಬುನಾದಿಯಾಗಿದೆ. ಐದು ವರ್ಷದ ಸುಂದರ ಕನಸಿಗೆ ವಾಸ್ತವ ಸ್ಥಿತಿಯ ವಿಶ್ಲೇಷಣೆಯ ಬುನಾದಿ ಅಗತ್ಯವಿದ್ದು, ಪಟ್ಟಿಯಿಂದ ಹೊರಗುಳಿದಿರಬಹುದಾದ ಮತ್ತು ಅಗತ್ಯವೆಂದು ಕಾಣಿಸುವ ಅಂಶಗಳನ್ನು ಸೇರಿಸಿಕೊಂಡು, ಹೆಚ್ಚಿನ ಮಾಹಿತಿಯನ್ನು ಪಂಚಾಯಿತಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಂದ ಪಡೆದುಕೊಳ್ಳುವ ಪ್ರಯತ್ನವನ್ನು ತರಬೇತಿಯ ನಂತರದ ದಿನಗಳಲ್ಲಿ ಮಾಡೋಣ.



ಅಧಿವೇಶನ – 7

# ದೂರದೃಷ್ಟಿ ಯೋಜನೆ ಮತ್ತು ನಮ್ಮ ಗ್ರಾಮ ನಮ್ಮ ಯೋಜನೆಯ ಪರಿಕಲ್ಪನೆ



## ಉದ್ದೇಶ

ಅಭಿವೃದ್ಧಿಯಲ್ಲಿ ಯೋಜನೆಯ ಮಹತ್ವ, ವಿಧಗಳು, ಯೋಜನೆ ತಯಾರಿ ಪ್ರಕ್ರಿಯೆಯ ಅಗತ್ಯತೆಯನ್ನು ಮನವರಿಕೆ ಮಾಡಿಕೊಡುವುದು.

ಗ್ರಾಮ ಪಂಚಾಯಿತಿಯ 'ದೂರದೃಷ್ಟಿ ಯೋಜನೆ' ಅವಶ್ಯಕತೆ ಮತ್ತು ಪರಿಕಲ್ಪನೆಯನ್ನು ಅರ್ಥೈಸುವುದು.

ಗ್ರಾಮ ಪಂಚಾಯಿತಿಯ ಒಂದು ವರ್ಷದ ಅಭಿವೃದ್ಧಿ ಯೋಜನೆ (ನಮ್ಮ ಗ್ರಾಮ ನಮ್ಮ ಯೋಜನೆ) ತಯಾರಿಸುವ ಹಂತಗಳನ್ನು ಪರಿಚಯಿಸುವುದು.

## ಉಪ ವಿಷಯಗಳು

ಯೋಜನೆಯ ಅಗತ್ಯತೆ

ಯೋಜನಾ ವಿಧಗಳು

ಗ್ರಾ.ಪಂ. ಹಂತದ 'ದೂರದೃಷ್ಟಿ ಯೋಜನೆ' ಪರಿಕಲ್ಪನೆ'

ನಮ್ಮ ಗ್ರಾಮ ನಮ್ಮ ಯೋಜನೆ' (ಅಭಿವೃದ್ಧಿ ಯೋಜನೆ)

ಯೋಜನಾ ತಯಾರಿಕಾ ವೇಳಾಪಟ್ಟಿ ವಿವರಣೆ

ಯೋಜನಾ ತಯಾರಿಕಾ ಪ್ರಕ್ರಿಯೆಯ ಸಾಂಸ್ಥೀಕರಣ

## ವಿಧಾನ

ಸಂವಾದ

ವಿಡಿಯೋ ಪ್ರದರ್ಶನ

## ಸಮಯ

75 ನಿಮಿಷಗಳು

## ಪೂರಕ ಸಾಮಗ್ರಿಗಳು

ವಿಡಿಯೋ ಚಿತ್ರಗಳು

ಪಿಪಿಟಿ

ಯೋಜನಾ ತಯಾರಿ ನಕ್ಷೆ


## ನಿರೀಕ್ಷಿತ ಫಲಿತಾಂಶ

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಯೋಜನೆಯ ಪರಿಕಲ್ಪನೆಯನ್ನು ವಿವರಿಸುತ್ತಾರೆ.

ಯೋಜನೆ ಸಿದ್ಧಪಡಿಸುವಾಗ ಗ್ರಾಮೀಣ ಪರಾಮರ್ಶೆ, ಮಿಷನ್ ಅಂತ್ಯೋದಯ ಮತ್ತು ಗ್ರಾಮೀಣ ಬಡತನ ನಿವಾರಣಾ ಯೋಜನೆ ಅಂಶಗಳನ್ನು ತಿಳಿದುಕೊಳ್ಳುತ್ತಾರೆ.

ಅಭಿವೃದ್ಧಿಯ ಅಸಮಾನತೆಯ ಅಂತರಗಳನ್ನು ಕಡಿಮೆಗೊಳಿಸುವ ದಿಕ್ಕಿನಲ್ಲಿ ಸದಸ್ಯರ ಮನೋಭಾವವನ್ನು ಸಕಾರಾತ್ಮವಾಗಿ ಪ್ರಭಾವಿಸುವುದು.

ಸಾಮಾನ್ಯವಾಗಿ ಮಾಡುವ ನ್ಯೂನತೆಗಳನ್ನು ಮನದಟ್ಟು ಮಾಡುವುದರ ಮೂಲಕ ಸುಧಾರಿತ ಮತ್ತು ಪರಿಣಾಮಕಾರಿ ಯೋಜನೆ ರೂಪಿಸುವಂತೆ ಉತ್ತೇಜಿಸುವುದು.





ಅಧಿವೇಶನ ಪ್ರಕ್ರಿಯೆ

ಯೋಜನೆ ಏಕೆ ಮಾಡಬೇಕು ಎನ್ನುವ ಪ್ರಶ್ನೆಯ ಸಂವಾದದೊಂದಿಗೆ ಸುಗಮಗಾರರು ಅಧಿವೇಶನವನ್ನು ಆರಂಭಿಸುವುದು.

ಪ್ರಶಿಕ್ಷಣಾರ್ಥಿಗಳಿಂದ ಅದಕ್ಕೆ ಪೂರಕವಾದ ಉತ್ತರಗಳನ್ನು ಅಥವಾ ಅಭಿಪ್ರಾಯಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಬೋರ್ಡ್ ಮೇಲೆ ದಾಖಲಿಸುವುದು.

ದಾಖಲಿಸಿದ ಅಭಿಪ್ರಾಯಗಳಲ್ಲಿ ಸೂಕ್ತ ಅಥವಾ ಸಮೀಪದ ಉತ್ತರ ದೊರೆತರೆ, ಅದನ್ನು ಉಲ್ಲೇಖಿಸಿ ಯೋಜನೆಯ ಪರಿಕಲ್ಪನೆ ಮತ್ತು ಅದರ ಅಗತ್ಯತೆಯನ್ನು ವಿವರಿಸುವುದು.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಅನ್ವಯ ಎರಡು ರೀತಿಯ ಯೋಜನೆಗಳನ್ನು ಸಿದ್ಧಪಡಿಸಬೇಕಿರುತ್ತದೆ. ಅವುಗಳೆಂದರೆ, 1. 'ದೂರದೃಷ್ಟಿ ಯೋಜನೆ' 2. ಅಭಿವೃದ್ಧಿ ಯೋಜನೆ (ನಮ್ಮ ಗ್ರಾಮ ನಮ್ಮ ಯೋಜನೆ)

ವಿಷಯ ತಜ್ಞರಿಂದ ಸಿದ್ಧಪಡಿಸಿರುವ ಚಿತ್ರಿತ ವಿಡಿಯೋ ಪ್ರದರ್ಶಿಸುವುದು

ವಿಷಯಕ್ಕೆ ಸಂಬಂಧಿಸಿದಂತೆ ಪ್ರಶಿಕ್ಷಣಾರ್ಥಿಗಳಿಗಿರುವ ಸಂದೇಹ ಅಥವಾ ಗೊಂದಲಗಳ ಬಗ್ಗೆ ಚರ್ಚಿಸಲು ಅನುವು ಮಾಡಿಕೊಡುವುದು. ಈ ಸಂದರ್ಭದಲ್ಲಿ ಬರುವಂತಹ ಪ್ರಶ್ನೆಗಳಿಗೆ ಸುಗಮಗಾರರು ಪರಿಹರಿಸುವ ಪ್ರಯತ್ನ ಮಾಡುವುದು.

ಸುಗಮಗಾರರು ಉತ್ತರಿಸಲು ಸಾಧ್ಯವಾಗದ ಪ್ರಶ್ನೆಗಳನ್ನು, ದಿನದ ಅಂತ್ಯದಲ್ಲಿ ರಾಜ್ಯ ಮಟ್ಟದ ಪ್ರಶ್ನೋತ್ತರ ಅವಧಿಯಲ್ಲಿ ಉತ್ತರಿಸಲು ಸಹಾಯವಾಗುವಂತೆ, ಸ್ಪಷ್ಟ ಮತ್ತು ಚುಟುಕಾಗಿ ಲಿಖಿತ ರೂಪದಲ್ಲಿ ಸಂಸ್ಥೆಗೆ ಕಳುಹಿಸಿಕೊಡುವುದರ ಮೂಲಕ ಪರಿಹರಿಸಲು ಕ್ರಮವಹಿಸುವುದು.

ಅಭಿವೃದ್ಧಿ ಯೋಜನೆ (ನಮ್ಮ ಗ್ರಾಮ ನಮ್ಮ ಯೋಜನೆ) ಸಿದ್ಧಪಡಿಸುವ ಪ್ರಾಮುಖ್ಯತೆ ಮತ್ತು ಸಂಕ್ಷಿಪ್ತ ಪ್ರಕ್ರಿಯೆಯನ್ನು ವಿವರಿಸುವುದು.

ರಾಜ್ಯದಲ್ಲಿ ಯೋಜನಾ ತಯಾರಿಕಾ ವೇಳಾಪಟ್ಟಿಯನ್ನು ಮನಗಾಣಿಸುವುದು

- ಗ್ರಾಮ ಪಂಚಾಯಿತಿ ರಚನೆಯಾದ ಮೂರು ತಿಂಗಳೊಳಗಿನ 'ದೂರದೃಷ್ಟಿ ಯೋಜನೆ'.
- ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಮಿಷನ್ ಅಂತ್ಯೋದಯ – 144 ಅಂಶಗಳ ಮಾಹಿತಿ ಲಭ್ಯತೆ.
- ಅಕ್ಟೋಬರ್‌ನಿಂದ ಡಿಸೆಂಬರ್ ತಿಂಗಳಿನವರೆಗೆ 'ಪಂಚಾಯತ್ ಅಭಿವೃದ್ಧಿ ಯೋಜನೆ' ತಯಾರಿಕೆ.'
- ಗ್ರಾಮೀಣ ಬಡತನ ನಿವಾರಣಾ ಯೋಜನೆ' ತಯಾರಿಕೆಯನ್ನು ಪಂಚಾಯತ್ ಅಭಿವೃದ್ಧಿ ಯೋಜನೆಯೊಂದಿಗೆ ಸಂಜೀವಿನಿ ಯೋಜನೆಯ ಸಿಬ್ಬಂದಿಗಳ ಸಹಕಾರದಲ್ಲಿ ಸಿದ್ಧಪಡಿಸುವುದು.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕಾರ ತಳಹಂತದ ಯೋಜನಾ ತಯಾರಿಕ ಪ್ರಕ್ರಿಯೆಯ ಪರಿಣಾಮ, ರಾಜ್ಯ ಯೋಜನೆಯನ್ನು ರೂಪಿಸುವ ನಿಟ್ಟಿನಲ್ಲಿ ರಾಜ್ಯದ ವಿಕೇಂದ್ರೀಕೃತ ಯೋಜನಾ ಸಾಂಸ್ಥೀಕರಿಸಿರುವ ನಕ್ಷೆಯನ್ನು ತೋರಿಸುವ ಮೂಲಕ ವಿವರಿಸುವುದು.

ಯೋಜನೆ ಸಿದ್ಧಪಡಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಹಂತದಲ್ಲಿ ನಡೆಯುತ್ತಿರುವ ಸಾಮಾನ್ಯ ತಪ್ಪುಗಳು ಅಥವಾ ನ್ಯೂನ್ಯತೆಗಳನ್ನು ವಿಡಿಯೋ ಮೂಲಕ ವಿವರಿಸುವುದರ ಮೂಲಕ, ಮುಂದಿನ ದಿನಗಳಲ್ಲಿ ಪರಿಣಾಮಕಾರಿ ಯೋಜನೆಯನ್ನು ರೂಪಿಸಲು ಪ್ರಶಿಕ್ಷಣಾರ್ಥಿಗಳನ್ನು ಸಜ್ಜುಗೊಳಿಸುವುದು.

**ಸುಗಮಗಾರರಿಗೆ ಸೂಚನೆಗಳು**

ಯೋಜನೆ ಏಕೆ ಬೇಕು ಎನ್ನುವ ಅಂಶವನ್ನು ಸುಗಮಗಾರರು ಮನಗಾಣಬೇಕು.
ಪ್ರಶಿಕ್ಷಣಾರ್ಥಿಗಳಿಂದ ಬರುವ ಅಭಿಪ್ರಾಯವನ್ನು ಸಂಕ್ಷಿಪ್ತಗೊಳಿಸಿ, ದಾಖಲಿಸುವಂತಾಗಬೇಕು.
ಯೋಜನೆಯ ವಿಧಗಳನ್ನು ಅಧಿನಿಯಮದನ್ವಯ ವಿವರಿಸಲು ಸಿದ್ಧರಾಗುವುದು.
ಅಧಿನಿಯಮದ ಪ್ರತಿಯನ್ನು ಜೊತೆಯಲ್ಲಿಟ್ಟು ಕೊಂಡಿರುವುದು.
ದೃಶ್ಯ ಮಾಧ್ಯಮ ಬಿತ್ತರಿಸಲು ಅಗತ್ಯ ಸಲಕರಣೆ ಮತ್ತು ಮಾಧ್ಯಮಗಳನ್ನು ಖಚಿತಪಡಿಸುವುದು.
ಉತ್ತರಿಸಲು ಸಾಧ್ಯವಾಗದ ಪ್ರಶ್ನೆಗಳನ್ನು ಪಟ್ಟಿ ಮಾಡಿ, ಸಂಸ್ಥೆಗೆ ಇ-ಮೇಲ್ ಮೂಲಕ ಕಳುಹಿಸುವುದು
ಯೋಜನೆಗೆ ಸಂಬಂಧಿಸಿದ ಮಾಹಿತಿ ನೀಡಲು ಮಾಹಿತಿ ಕೈಪಿಡಿ ಅಧ್ಯಯನ ಮಾಡುವುದು.

**ತರಬೇತಿ ವಿಷಯ ಕುರಿತ ಟಿಪ್ಪಣಿ**




## ದೂರದೃಷ್ಟಿತ್ವ

ನಿಗದಿಪಡಿಸಿದ ಕಾಲಾವಧಿಯಲ್ಲಿ (ಅಲ್ಪ ಮತ್ತು ದೀರ್ಘ) ಪ್ರಸ್ತುತ ಸ್ಥಿತಿಯಿಂದ ನಿರೀಕ್ಷಿತ ಸ್ಥಾನಕ್ಕೆ ಸುಧಾರಿಸುವ ದಿಸೆಯಲ್ಲಿ ಮುನ್ನಡೆಯುವ ಪ್ರಯತ್ನವನ್ನು ದೂರದೃಷ್ಟಿತ್ವವೆಂದು ಕರೆಯಬಹುದು.

ಈ ದೂರದೃಷ್ಟಿ ಯೋಜನೆಯನ್ನು ರೂಪಿಸುವ ಸಂದರ್ಭದಲ್ಲಿ ರಾಜ್ಯ ವ್ಯಾಪಿ ಗ್ರಾಮ ಪಂಚಾಯಿತಿಗಳು ಒಂದೇ ರೀತಿಯ ಯೋಜನೆಯನ್ನು ಸಿದ್ಧಪಡಿಸಲಾಗುವುದಿಲ್ಲ. ಹಾಗಾಗಿ, ಸದರಿ ಗ್ರಾಮ ಪಂಚಾಯಿತಿಯ ವಸ್ತುಸ್ಥಿತಿ, ಅಲ್ಲಿಯ ಪ್ರಾದೇಶಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಪರಿಸರ ಸಂಬಂಧಿ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅಲ್ಪಕಾಲಿಕ ಮತ್ತು ದೀರ್ಘಕಾಲಿನ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಬಹುದಾಗಿರುತ್ತದೆ.

ಸುಸ್ಥಿರತೆಯನ್ನು ಕಾಪಾಡಲು ಎರಡು ಮಾರ್ಗಗಳಿವೆ. ಮೊದಲನೆಯದು, ನ್ಯಾಯಯುತವಾಗಿ ಲಭ್ಯವಿರುವ ಸಂಪನ್ಮೂಲಗಳ ಸದ್ಬಳಕೆ. ಎರಡನೆಯದು ಲಭ್ಯವಿರುವ ಸಂಪನ್ಮೂಲಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವುದು.

ಇದರ ಮುಂದುವರೆದ ಭಾಗವಾಗಿ, 193 ಸಂಯುಕ್ತ ರಾಷ್ಟ್ರಗಳ ಸಹಮತದೊಂದಿಗೆ 2015ರ ಸೆಪ್ಟೆಂಬರ್‌ನಲ್ಲಿ ಆಯೋಜಿಸಲಾದ ಶೃಂಗಸಭೆಯ ಚರ್ಚೆಯಂತೆ 17 ಗುರಿಗಳನ್ನೊಳಗೊಂಡ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯನ್ನು 2030ರೊಳಗೆ ಸಾಧಿಸಲು ಉತ್ಸುಕರಾಗಿದ್ದಾರೆ. ಸಹಸ್ರಮಾನ ಗುರಿಗಳ ಅನುಷ್ಠಾನದಲ್ಲಿ ಕಂಡಬಂದ ಲೋಪಗಳಲ್ಲಿ ಕೆಲವಷ್ಟು ಮಾರ್ಪಾಡಿಸಿ, ಮುಂದುವರೆಯಲಾಗಿದೆ. "ಯಾರನ್ನು ಹಿಂದೆ ಬಿಡುವುದು ಬೇಡ" (**Leave No one Behind**) ಎಂಬ ಘೋಷ ವಾಕ್ಯದೊಂದಿಗೆ ಮುನ್ನುಗ್ಗುತ್ತಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಸಾಮಾಜಿಕ, ಆರ್ಥಿಕ, ಪರಿಸರಾತ್ಮಕ ಮತ್ತು ಆಧ್ಯಾತ್ಮಿಕ ಅಂಶಗಳಿಗೆ ಸಂಬಂಧಿಸಿದ ಗುರಿಗಳಾಗಿ ಪ್ರತ್ಯೇಕಿಸಬಹುದಾಗಿದೆ.

17 ಗುರಿಗಳನ್ನು ಸಾಧಿಸುವುದಕ್ಕಾಗಿ 169 ಟಾರ್ಗೆಟ್‌ಗಳನ್ನು ಸಿದ್ಧಪಡಿಸಲಾಗಿದೆ. ಈ ಟಾರ್ಗೆಟ್‌ಗಳ ಸಾಧನೆಯನ್ನು ಅಳೆಯಲು 230 ಜಾಗತಿಕ ಸೂಚ್ಯಾಂಕಗಳನ್ನು (306 ರಾಷ್ಟ್ರೀಯ ಸೂಚ್ಯಾಂಕಗಳು) ಗುರುತಿಸಲಾಗಿದೆ. ಆ ಮೂಲಕ ಸಮಾಜದ ಸರ್ವೋತೋನ್ಮುಖ ಅಭಿವೃದ್ಧಿಯನ್ನು ಸಾಧಿಸಲು ಅನುವಾಗುದೆಂದು ಆಶಿಸಲಾಗಿದೆ. ನಿರ್ಧಾರಿತ 17 ಗುರಿಗಳು ಈ ಕೆಳಗಿನಂತಿವೆ.

1. ಬಡತನ ನಿರ್ಮೂಲನೆ
2. ಹಸಿವು ಮುಕ್ತತೆ ಮತ್ತು ಸುಸ್ಥಿರ ಕೃಷಿ
3. ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
4. ಗುಣಮಟ್ಟದ ಶಿಕ್ಷಣ ಮತ್ತು ಜೀವಪರ್ಯಂತ ಕಲಿಕೆ
5. ಲಿಂಗ ಸಮಾನತೆ
6. ಶುದ್ಧ ನೀರು ಮತ್ತು ನೈರ್ಮಲ್ಯ





7. ಎಲ್ಲರಿಗೂ ದೊರಕುವಂತೆ ಆಧುನಿಕ ಇಂಧನ
8. ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ
9. ಕೈಗಾರಿಕೆ, ಅವಿಷ್ಕಾರ ಮತ್ತು ಮೂಲಸೌಕರ್ಯ
10. ಅಸಮಾನತೆ ಕಡಿಮೆಗೊಳಿಸುವುದು
11. ಸುಸ್ಥಿರ ನಗರಗಳು ಮತ್ತು ಸಮುದಾಯಗಳು
12. ಜವಾಬ್ದಾರಿಯುತ ಉತ್ಪಾದನೆ ಮತ್ತು ಬಳಕೆ
13. ಹವಾಮಾನ ಬದಲಾವಣೆಗೆ ಕ್ರಮ
14. ನೀರಿನ ಜೀವರಾಶಿ
15. ಭೂ ಮೇಲಿನ ಜೀವರಾಶಿ
16. ಶಾಂತಿ, ನ್ಯಾಯ ಮತ್ತು ಸದೃಡ ಸಂಸ್ಥೆಗಳ ನಿರ್ಮಾಣ
17. ಗುರಿ ಸಾಧನೆಗಾಗಿ ಸಹಭಾಗಿತ್ವ

## ಅಭಿವೃದ್ಧಿ ಯೋಜನೆ : ನಮ್ಮ ಗ್ರಾಮ ನಮ್ಮ ಯೋಜನೆ (ಜಿಪಿಡಿಪಿ)

"ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮವು (1993) ತಳಹಂತದಿಂದ ಯೋಜನಾ ತಯಾರಿಕಾ ಪ್ರಕ್ರಿಯೆಯನ್ನು ಮಾಡುವುದರ ಬಗ್ಗೆ ಹೆಚ್ಚು ಒತ್ತು ನೀಡಿದೆ. ಈ ಪ್ರಕ್ರಿಯೆಗೆ ಹೆಚ್ಚಿನ ಒತ್ತು ನೀಡಲು ಸಹಕಾರಿಯಾದ ಅಂಶವೆಂದರೆ, ಕೇಂದ್ರ ಸರ್ಕಾರದ 14ನೇ ಹಣಕಾಸು ಆಯೋಗದ ಶಿಫಾರಸ್ಸು. ಇದೇ ಆಶಯವು 15ನೇ ಹಣಕಾಸು ಆಯೋಗದ ಅನುದಾನಕ್ಕೂ ಮುಂದುವರೆದಿದ್ದು, ತಳಹಂತದ ಯೋಜನಾ ತಯಾರಿಕೆಗೆ ಪುಷ್ಟಿ ನೀಡಿದೆ. ಆದ್ದರಿಂದ 'ಯೋಜನೆ' ಎಂದರೇನು, ಅದರ ಮಹತ್ವ, ವಿಧಗಳು ಹಾಗೂ ಅದರ ತಯಾರಿ ಪ್ರಕ್ರಿಯೆಯ ಬಗ್ಗೆ ಮೊದಲು ತಿಳಿದುಕೊಳ್ಳುವುದು ಅಗತ್ಯ.

### ಯೋಜನೆ

ಸ್ಪಷ್ಟವಾದ ಒಂದು ಅಥವಾ ಹೆಚ್ಚು ಗುರಿಗಳನ್ನಿಟ್ಟುಕೊಂಡು ಅವುಗಳ ಸಾಧನೆಗೆ ಅಗತ್ಯವಿರುವ ಸೂಕ್ತ ಮಾರ್ಗಗಳನ್ನು ಅನುಸರಿಸಿ, ಲಭ್ಯವಿರುವ ಸಾಧನ ಮತ್ತು ಸಂಪನ್ಮೂಲಗಳನ್ನಾಧರಿಸಿ ಆ ಮೂಲಕ ಕಾರ್ಯೋನ್ಮುಖರಾಗಿ ನಿರೀಕ್ಷಿತ ಫಲಿತಾಂಶವನ್ನು ಪಡೆಯಲು ಸಿದ್ಧಪಡಿಸುವ ನೀಲಿನಕ್ಷೆಯ ಚಟುವಟಿಕೆಯನ್ನು ಯೋಜನೆ ಎಂದು ಕರೆಯಬಹುದು. ಯೋಜನೆಯು ಏನು? ಯಾರಿಗೆ? ಎಲ್ಲಿ? ಯಾವಾಗ? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದಾಗಿದೆ.

ಪಂಚಾಯತ್ ರಾಜ್‌ಗೆ ಸೂಕ್ತವಾಗಿ ಐದು ವರ್ಷಗಳ ಅವಧಿಗೆ **'ದೂರದೃಷ್ಟಿ ಯೋಜನೆ'** ಮತ್ತು ಒಂದು ವರ್ಷದ ಅವಧಿಗೆ **'ಅಭಿವೃದ್ಧಿ ಯೋಜನೆ'** ರೂಪಿಸಬೇಕಿದೆ.

### ದೂರದೃಷ್ಟಿ ಯೋಜನೆ (309 ಬಿ)

ಪ್ರತಿಯೊಂದು ಹೊಸದಾಗಿ ಚುನಾಯಿತವಾದ ಗ್ರಾಮ ಪಂಚಾಯಿತಿಯು, ಅದರ ರಚನೆಯ ದಿನಾಂಕದಿಂದ ಮೂರು ತಿಂಗಳೊಳಗಾಗಿ ಗ್ರಾಮ ಸ್ವರಾಜ್ ಘಟಕಗಳ ಮುಖೇನ, ಗ್ರಾಮೀಣ ಪರಾಮರ್ಶನ ಕೈಗೊಳ್ಳುವುದರೊಂದಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸ್ಥಾಪಿಸಿದ ಅಭಿವೃದ್ಧಿ ಮೈಲಿ ಗುರುತುಗಳ ಆಧಾರದ ಮೇಲೆ ಪಂಚಾಯತಿಯ ಪೂರ್ಣ ಅವಧಿಗಾಗಿ ಅಂದರೆ 5 ವರ್ಷಗಳಿಗೆ **'ದೂರದೃಷ್ಟಿ ಯೋಜನೆ'**ಯನ್ನು ಸಿದ್ಧಪಡಿಸಬೇಕಾಗಿರುತ್ತದೆ.



### ಅಭಿವೃದ್ಧಿ ಯೋಜನೆ (309)

'ದೂರದೃಷ್ಟಿ ಯೋಜನೆ'ಯ ಜೊತೆಗೆ ಅದನ್ನು ಆಧರಿಸಿ ಪ್ರತಿಯೊಂದು ಗ್ರಾಮ ಪಂಚಾಯಿತಿಯು, ಪ್ರತಿ ವರ್ಷವೂ ಅಭಿವೃದ್ಧಿ ಯೋಜನೆಯೊಂದನ್ನು ಸಿದ್ಧಪಡಿಸಬೇಕು. ಗೊತ್ತುಪಡಿಸಬಹುದಾದ ದಿನಾಂಕದೊಳಗೆ ತಾಲ್ಲೂಕು ಪಂಚಾಯಿತಿಗೆ ಕಳುಹಿಸಬೇಕು.


ರಾಜ್ಯ ಸರ್ಕಾರದ ಆದೇಶದ ಪ್ರಕಾರ ಈ ಯೋಜನಾ ತಯಾರಿ ಪ್ರಕ್ರಿಯೆಯನ್ನು **'ನಮ್ಮ ಗ್ರಾಮ ನಮ್ಮ ಯೋಜನೆ'** ಎಂದು ಹೆಸರಿಸಲಾಗಿದೆ. ಇದನ್ನು ಪ್ರತಿ ವರ್ಷ ಸೆಪ್ಟೆಂಬರ್ / ಅಕ್ಟೋಬರ್ ಮಾಹೆಯಿಂದ ಡಿಸೆಂಬರ್ ಮಾಹೆಯವರೆಗೆ ಆಯೋಜಿಸಲಾಗುತ್ತಿದೆ.

ಯಾವುದೇ ಹಂತದ ಅನುದಾನವಾದರೂ ಸರಿಯೇ, ಅದನ್ನು ಅನುಷ್ಠಾನ ಮಾಡಲು ಕೈಗೊಳ್ಳುವ ಕಾಮಗಾರಿ ಅಥವಾ ಚಟುವಟಿಕೆಗಳು ಮಾತ್ರ ಗ್ರಾಮ ಅಥವಾ ಗ್ರಾಮ ಪಂಚಾಯತ್ ವ್ಯಾಪ್ತಿಯಾಗಿರುತ್ತದೆ. ಅದುದರಿಂದ ಗ್ರಾಮಗಳ ಅಗತ್ಯವನ್ನರಿತು ಅವರುಗಳ ಅವಶ್ಯಕತೆಗಳಿಗೆ ಅನುಸಾರವಾಗಿ ಪೂರಕ ಕಾಮಗಾರಿಗಳನ್ನು ಮತ್ತು ಚಟುವಟಿಕೆಗಳನ್ನು ಕೈಗೊಂಡರೆ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸುವೆಡೆಗೆ ಸಾಗಲು ನಾಂದಿಯಾಗುವುದು. ಮುಂದುವರೆದು, ಮೇಲಿನ ಹಂತಗಳಿಂದ ಆಯಾ ಗ್ರಾಮಗಳಲ್ಲಿ ತೆಗೆದುಕೊಂಡಿರುವ ಚಟುವಟಿಕೆಗಳ ಬಗ್ಗೆ ಅಗತ್ಯ ಮಾಹಿತಿಯು ಗ್ರಾಮ ಪಂಚಾಯತ್ ಹಂತದಲ್ಲಿ ಲಭ್ಯವಿರುತ್ತದೆ, ಇದರಿಂದ ಅಂತಹ ಆಸ್ತಿಗಳನ್ನು ಮುಂದಿನ ದಿನಗಳಲ್ಲಿ ನಿರ್ವಹಣಾ ಕಾರ್ಯಗಳನ್ನು ಯೋಚಿಸುವಲ್ಲಿ 'ನಮ್ಮ ಗ್ರಾಮ ನಮ್ಮ ಯೋಜನೆ'ಯು ಅನುವು ಮಾಡಿಕೊಡುತ್ತದೆ. ಆ ಮೂಲಕ ಸಾರ್ವಜನಿಕ ಆಸ್ತಿಗಳ ಬಳಕೆ ಮತ್ತು ಬಾಳಿಕೆಯನ್ನು ಹೆಚ್ಚಿಸಬಹುದಾಗಿಧೆ.

## ಉಪ ಸಂಹಾರ

**"ನಮ್ಮ ಗ್ರಾಮ ನಮ್ಮ ಯೋಜನೆ"** ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಗ್ರಾಮಗಳ ಅವಶ್ಯಕತೆಗಳನ್ನು ಪಟ್ಟಿ ಮಾಡುವುದರ ಮೂಲಕ ಪರಿಣಾಮಕಾರಿಯಾಗಿ ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬಹುದಾಗಿದೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಿಂದ ಆಯಾಯ ಗ್ರಾಮ ಪಂಚಾಯತ್‌ಗಳಲ್ಲಿ ತೆಗೆದುಕೊಳ್ಳಬಹುದಾದ ಚಟುವಟಿಕೆಗಳನ್ನು ಸಹಾ ಮೇಲಿನ ಹಂತದ ಚುನಾಯಿತ ಸದಸ್ಯರ ಮತ್ತು ಅಧಿಕಾರಿಗಳ ಗಮನಕ್ಕೆ ತರುವುದು ಅತ್ಯವಶ್ಯಕವಾಗಿದೆ. ಇದನ್ನು ಸಾರ್ವಜನಿಕ ವೇದಿಕೆಯಲ್ಲಿ ಚರ್ಚಿಸುವುದರಿಂದ ಕೆಳಹಂತದ ಅವಶ್ಯಕತೆಗಳನ್ನು ಅರ್ಥೈಸಿಕೊಳ್ಳಲು ಹಾಗೂ ಫಲಕಾರಿಯಾಗುವ ಉತ್ತಮ ಯೋಜನೆಗಳನ್ನು ಸಿದ್ಧಪಡಿಸಬಹುದಾಗಿದೆ.

ಯಾವುದೇ ಹಂತದ ಅನುದಾನವಾದರೂ ಸರಿಯೇ, ಅದನ್ನು ಅನುಷ್ಠಾನ ಮಾಡಲು ಕೈಗೊಳ್ಳುವ ಕಾಮಗಾರಿ ಅಥವಾ ಚಟುವಟಿಕೆಗಳು ಮಾತ್ರ ಗ್ರಾಮ ಅಥವಾ ಗ್ರಾಮ ಪಂಚಾಯತ್ ವ್ಯಾಪ್ತಿಯಾಗಿರುತ್ತದೆ. ಅದುದರಿಂದ ಗ್ರಾಮಗಳ ಅಗತ್ಯವನ್ನರಿತು ಅವರುಗಳ ಅವಶ್ಯಕತೆಗಳಿಗೆ ಅನುಸಾರವಾಗಿ ಪೂರಕ ಕಾಮಗಾರಿಗಳನ್ನು ಮತ್ತು ಚಟುವಟಿಕೆಗಳನ್ನು ಕೈಗೊಂಡರೆ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸುವೆಡೆಗೆ ಸಾಗಲು ನಾಂದಿಯಾಗುವುದು. ಅದರೊಂದಿಗೆ ಉತ್ತಮ ರಾಷ್ಟ್ರ ನಿರ್ಮಾಣದ ಕನಸನ್ನು ನಮ್ಮ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಬಹುದು. ಮುಂದುವರೆದು, ಮೇಲಿನ ಹಂತಗಳಿಂದ ಆಯಾ ಗ್ರಾಮಗಳಲ್ಲಿ ತೆಗೆದುಕೊಂಡಿರುವ ಚಟುವಟಿಕೆಗಳ ಬಗ್ಗೆ ಅಗತ್ಯ ಮಾಹಿತಿಯು ಗ್ರಾಮ ಪಂಚಾಯತ್ ಹಂತದಲ್ಲಿ ಲಭ್ಯವಿರುತ್ತದೆ, ಇದರಿಂದ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಹೆಚ್ಚಿಸಲು ಹಾಗೂ ಅಂತಹ ಆಸ್ತಿಗಳನ್ನು ಮುಂದಿನ ದಿನಗಳಲ್ಲಿ ನಿರ್ವಹಣಾ ಕಾರ್ಯಗಳನ್ನು ಯೋಚಿಸುವಲ್ಲಿ 'ನಮ್ಮ ಗ್ರಾಮ ನಮ್ಮ ಯೋಜನೆ'ಯು ಅನುವು ಮಾಡಿಕೊಡುತ್ತದೆ. ಆ ಮೂಲಕ ಸಾರ್ವಜನಿಕ ಆಸ್ತಿಗಳ ಬಳಕೆ ಮತ್ತು ಬಾಳಿಕೆಯನ್ನು ಹೆಚ್ಚಿಸಬಹುದಾಗಿದೆ.



ಅಧಿವೇಶನ –8

# ಗ್ರಾಮ ಸ್ವರಾಜ್ ಘಟಕಗಳು



**ಉದ್ದೇಶ**

ಗ್ರಾಮ ಸ್ವರಾಜ್ ಘಟಕಗಳಾದ ಜನವಸತಿ/ವಾರ್ಡ್/ಗ್ರಾಮ ಸಭೆಗಳು ಹಾಗು ವಿಶೇಷ ಗ್ರಾಮ ಸಭೆಗಳ ಸಂಘಟನೆಯ ಮಹತ್ವ ಮತ್ತು ವಿಧಿ ವಿಧಾನಗಳ ಬಗೆಗೆ ಗ್ರಾಮ ಪಂಚಾಯಿತಿಯ ಸದಸ್ಯರುಗಳಿಗೆ ಮನವರಿಕೆ ಮಾಡುವುದು.

ಈ ಸಭೆಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯ ಮಹತ್ವ ಮತ್ತು ಅವರುಗಳ ಸಕ್ರಿಯ ಭಾಗವಹಿಸುವಿಕೆ ಕುರಿತು ತಿಳಿಯಪಡಿಸುವುದು.

## ಉಪ ವಿಷಯಗಳು

ಜನವಸತಿ ಸಭಾ (ಪ್ರಕರಣ 3ಎ,3ಬಿ)

ವಾರ್ಡ್ ಸಭಾ (ಪ್ರಕರಣ 3ಸಿ,3ಡಿ)

ಗ್ರಾಮ ಸಭಾ (ಪ್ರಕರಣ 3ಇ, 3ಎಫ್, 3ಜಿ, 3ಹೆಚ್)

ವಿಶೇಷ ಗ್ರಾಮ ಸಭೆ (ಪ್ರಕರಣ 3ಹೆಚ್)

**ಸಮಯ**

60 ನಿಮಿಷಗಳು

**ವಿಧಾನ**

ಕಿರುಚಿತ್ರದ ಕ್ಲಿಪಿಂಗ್ ವೀಕ್ಷಣೆ ಮತ್ತು ಸಂವಾದ

ವಿಡಿಯೋ ಮೂಲಕ ವಿಷಯ ಮಂಡನೆ ಮತ್ತು ಸಂವಾದ

ಸ್ಥಳೀಯ ಚಟುವಟಿಕೆ

ಚರ್ಚೆ ಮತ್ತು ಕ್ರೋಢೀಕರಣ

**ಪೂರಕ ಸಾಮಗ್ರಿಗಳು**

ವಿಡಿಯೋ ಚಿತ್ರ

ವಿಷಯ ಮಂಡನೆಯ ಮುದ್ರಿತ ಪಿ.ಪಿ.ಟಿ/ಸಿ.ಡಿ

ಪೂರಕ ಸುತ್ತೋಲೆಗಳು

ಚಾರ್ಟ್ ಪೇಪರ್ ಮತ್ತು ಮಾರ್ಕರ್ ಪೆನ್ನುಗಳು


**ನಿರೀಕ್ಷಿತ ಫಲಿತಾಂಶ**

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಗ್ರಾಮ ಪಂಚಾಯಿತಿಯ ಆಡಳಿತ ಮತ್ತು ಅಭಿವೃದ್ಧಿಯನ್ನು ಸಾಧಿಸುವ ಪ್ರಕ್ರಿಯೆಯಲ್ಲಿ ನಿರ್ಧಾರ ಕೈಗೊಳ್ಳುವ ಮತ್ತು ಅನುಷ್ಠಾನ ಹಂತದಲ್ಲಿ ಭಾಗವಹಿಸುವ ಅವಕಾಶವನ್ನು ಈ ಸಭೆಗಳ ಮೂಲಕ ಕಾಯ್ದೆ ಬದ್ಧವಾಗಿ ಕಲ್ಪಿಸಲಾಗಿದೆ ಎನ್ನುವ ಅಂಶವನ್ನು ಗ್ರಾಮ ಪಂಚಾಯಿತಿ ಸದಸ್ಯರು ಮನವರಿಕೆ ಮಾಡಿಕೊಳ್ಳುವುದು.

ಗ್ರಾಮ ಪಂಚಾಯಿತಿ ಚುನಾಯಿತ ಸದಸ್ಯರಾಗಿ ತಮ್ಮ ವಾರ್ಡ್ ಹಾಗೂ ಒಟ್ಟಾರೆಯಾಗಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿಯ ಸಮಸ್ಯೆಗಳು, ಕೊರತೆಗಳು, ಜನರ ನಿರೀಕ್ಷೆಗಳು ಹಾಗೂ ಬೇಡಿಕೆಗಳನ್ನು ಅರ್ಥೈಸಿಕೊಳ್ಳಲು ಈ ಸಭೆಗಳು ಅವಶ್ಯಕ ಎಂಬುದನ್ನು ಅವರು ಅರಿಯುವುದು.

ವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ನಿಯಮಿತವಾಗಿ ಹಾಗೂ ಪರಿಣಾಮಕಾರಿಯಾಗಿ ಆಯೋಜಿಸುವಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರ ಹೊಣೆಗಾರಿಕೆಗಳ ಕುರಿತು ಸ್ಪಷ್ಟತೆ ಪಡೆಯುವುದು.

ಗ್ರಾಮ ಪಂಚಾಯಿತಿ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಾತರಿ ಪಡಿಸುವಲ್ಲಿ ಈ ಸಭೆಗಳಿಗೆ ಇರುವ ಮಹತ್ವವನ್ನು ಮನಗಾಣುವುದು.





## ಅಧಿವೇಶನ ಪ್ರಕ್ರಿಯೆ

ತಾಯಿ ಬೇರು ಹಾಡಿ'ನ ಕಿರುಚಿತ್ರದ ಕ್ಲಿಪಿಂಗ್ ವೀಕ್ಷಣೆಯ ನಂತರದಲ್ಲಿ ಸದಸ್ಯರುಗಳಿಂದ ತ್ವರಿತ ಪ್ರತಿಕ್ರಿಯೆ ಪಡೆಯುವ ಮೂಲಕ ಗ್ರಾಮ ಸಭೆಗಳ ಪರಿಕಲ್ಪನೆಯನ್ನು ನೀಡುವುದು.

ವಿಷಯ ಮಂಡನೆಯಲ್ಲಿ ಗ್ರಾಮ ಸ್ವರಾಜ್ ಘಟಕಗಳಾದ ಜನವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮ ಸಭೆ ಹಾಗೂ ವಿಶೇಷ ಗ್ರಾಮ ಸಭೆಗಳ ಉದ್ದೇಶ, ಆಯೋಜನೆ, ಕೋರಂ, ಮಹತ್ವದ ಜೊತೆಗೆ ಕಾಯ್ದೆ ಬದ್ಧವಾಗಿ ನೀಡಲಾಗಿರುವ ಅಧಿಕಾರಗಳು ಮತ್ತು ಜವಾಬ್ದಾರಿಗಳನ್ನು ವಿಷಯ ಮಂಡನೆಯಲ್ಲಿ ಸ್ಪಷ್ಟಪಡಿಸುವುದು.

ಗ್ರಾಮ ಪಂಚಾಯಿತಿ ವ್ಯಾಪಿಯ ಗ್ರಾಮಗಳ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವ ನಿಟ್ಟಿನಲ್ಲಿ ಈ ಸಭೆಗಳಿಗೆ ಇರುವ ಮಹತ್ವವನ್ನು ಮನವರಿಕೆ ಮಾಡುವುದು.

ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸಬೇಕಾದ ಅವಶ್ಯಕತೆಯ ಕುರಿತು ವಿಷಯ ಮಂಡನೆ ಮತ್ತು ಸಂವಾದ –ಡಿ.ವಿ.ಡಿ ಮೂಲಕ ಪ್ರಸರಣ ಕ್ರಿಯೆಯನ್ನು ಆಯೋಜಿಸುವುದು.

ಶಿಬಿರಾರ್ಥಿಗಳನ್ನು ಗುರುತಿಸಿಕೊಂಡು ಹಿಂದಿನ ವಿಷಯ ಮಂಡನೆ ಆಧಾರದಲ್ಲಿ 25 ನಿಮಿಷಗಳ ಅವಧಿಯಲ್ಲಿ ಯಾವುದಾದರು ಒಂದು ವಿಷಯದ ಕುರಿತು ತೀರ್ಮಾನ ತೆಗೆದುಕೊಳ್ಳುವ ರೀತಿಯಲ್ಲಿ ಅಣುಕು ಗ್ರಾಮ ಸಭೆಯನ್ನು ನಡೆಸುವ ಬಗ್ಗೆ ಗುಂಪಿನಲ್ಲಿ 5 ನಿಮಿಷ ಪೂರ್ವಭಾವಿ ಚರ್ಚೆ ಮಾಡಲು ತಿಳಿಸುವುದು.

ನಂತರ ಅಣುಕು ಸಭೆಯ ಪ್ರದರ್ಶನದ ಸಂದರ್ಭದಲ್ಲಿ ಗಮನಿಸಿದ ಅಂಶಗಳನ್ನು ಸುಗಮಗಾರರು ಪಟ್ಟಿ ಮಾಡಿಕೊಳ್ಳಬೇಕು. ಈ ಅಂಶಗಳ ಕುರಿತು ಎಲ್ಲಾ ಶಿಬಿರಾರ್ಥಿಗಳ ಗಮನ ಸೆಳೆದು, ಸ್ಪಷ್ಟೀಕರಣ ನೀಡುವುದು.

ಜೊತೆ ಜೊತೆಗೆ ಜನವಸತಿ, ವಾರ್ಡ್ ಮತ್ತು ವಿಶೇಷ ಸಭೆಗಳಲ್ಲಿ ಗಮನಿಸಬೇಕಾದ ಅಂಶಗಳ ಕುರಿತು ಮಾಹಿತಿ ನೀಡುವುದು ಪ್ರತಿ ಸಭೆಗೆ ಪೂರಕವಾಗಿ ಪ್ರತ್ಯೇಕ ಕ್ಲಿಪಿಂಗ್/ಛಾಯಾ ಚಿತ್ರಗಳನ್ನು ಬಳಸುವುದು. ಆ ಮೂಲಕ ವಿಷಯ ಮಂಡನೆಯನ್ನು ಪರಿಣಾಮಕಾರಿಯಾಗಿ ಪ್ರಸ್ತುತ ಪಡಿಸುವುದು. ಅಣುಕು ಗ್ರಾಮ ಸಭೆಯ ಪ್ರದರ್ಶನ ಮತ್ತು ಪೂರ್ವ ಭಾವಿ ಚರ್ಚೆಯು ಸೇರಿದಂತೆ ವಿಷಯದ ಕ್ರೋಢೀಕರಣವನ್ನು ಒಟ್ಟು 60 ನಿಮಿಷಗಳ ಸಮಯದಲ್ಲಿಯೇ ಮಾಡುವುದು.

ಸುಗಮಕಾರರು ವಿಷಯ ಮಂಡನೆ ಮತ್ತು ಕಿರುಚಿತ್ರದ ಅಂಶಗಳನ್ನು ಶಿಬಿರಾರ್ಥಿಗಳು ಆಲಿಸಿ, ಅರ್ಥೈಸಿಕೊಳ್ಳಲು ನೆರವಾಗುವುದು.

ಅಣಕು ಗ್ರಾಮ ಸಭೆಯನ್ನು ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಅನುಸರಿಸಬೇಕಾದ ನಿಯಮಾವಳಿಗಳನ್ನು ಗಮನಿಸಿ ಪಟ್ಟಿಮಾಡುವುದು ಮತ್ತು ಸ್ಪಷ್ಟಪಡಿಸುವುದು.

ಜನವಸತಿ, ವಾರ್ಡ್ ಮತ್ತು ಗ್ರಾಮ ಸಭೆಯ ವ್ಯಾಪ್ತಿ ಮತ್ತು ಕೋರಂಗಳಿಗೆ ಸಂಬಂಧಿಸಿದಂತೆ ಶಿಬಿರಾರ್ಥಿಗಳಿಂದ ಬರುವ ಪ್ರಶ್ನೆಗಳಿಗೆ ಸ್ಪಷ್ಟ ಮಾಹಿತಿಯನ್ನು ನೀಡುವುದು.

ಗ್ರಾಮ ಸಭೆಯ ಸಂವಿಧಾನಿಕ ಮಹತ್ವವನ್ನು ಚುನಾಯಿತ ಪ್ರತಿನಿಧಿಗಳಿಗೆ ಮನವರಿಕೆ ಮಾಡುವುದರ ಜೊತೆಗೆ ವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ನಿರ್ವಹಿಸುವಲ್ಲಿ ಅಧ್ಯಕ್ಷರು ಮತ್ತು ಸದಸ್ಯರ ಹೊಣೆಗಾರಿಕೆಗಳನ್ನು ಸ್ಪಷ್ಟಪಡಿಸುವುದು.




# ಗ್ರಾಮ ಸ್ವರಾಜ್ ಘಟಕಗಳು

ಜನವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳು ಗ್ರಾಮ ಸ್ವರಾಜ್ ಘಟಕಗಳಾಗಿವೆ. ಜನರ ಭಾಗವಹಿಸುವಿಕೆಯನ್ನು ಖಾತರಿ ಪಡಿಸುವಲ್ಲಿ ಈ ಸಭೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಗ್ರಾಮ ಸಭೆ ಹಳ್ಳಿಯ ವಿಧಾನ ಸಭೆ. ಈ ಸಭೆಗಳು ವಿಕೇಂದ್ರೀಕರಣದ ತಾಯಿ ಬೇರಿನಂತೆ ಕಾರ್ಯ ನಿರ್ವಹಿಸುತ್ತವೆ, ಜನರಿಂದ, ಜನರಿಗಾಗಿ, ಜನರಿಂದಲೇ ಎಂಬ ಪ್ರಜಾಪ್ರಭುತ್ವದ ಆಶಯವನ್ನು ಅನುಷ್ಠಾನಗೊಳಿಸುವ ಹಂತದಲ್ಲಿ ಈ ಸಭೆಗಳು ಮಹತ್ತರ ಪಾತ್ರವನ್ನು ವಹಿಸಿ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸಲು ಸಹಕಾರಿಯಾಗಿವೆ. ಅಂತ್ಯೋದಯದಿಂದ ಸರ್ವೋದಯ ಎಂಬ ಗಾಂಧಿ ಕನಸಿನ, ಗ್ರಾಮ ಸ್ವರಾಜ್ಯದ ಕನಸಿಗೆ ನೀರೆರೆದು ಪೋಷಿಸುತ್ತವೆ. ಗ್ರಾಮ ಸ್ವರಾಜ್ ಘಟಕಗಳಾದ ಜನವಸತಿ/ವಾರ್ಡ್/ಗ್ರಾಮ ಸಭೆಗಳು/ವಿಶೇಷ ಸಭೆಗಳ ಕುರಿತಾದ ಮಾಹಿತಿ ಇದಾಗಿದೆ.

**ಜನವಸತಿ ಸಭೆ**

ಜನವಸತಿ ಸಭೆಗಳನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಗುರುತಿಸಲ್ಪಟ್ಟ **100 ರಿಂದ 350** ಜನಸಂಖ್ಯೆ ಇರುವ ಪ್ರದೇಶದಲ್ಲಿ ನಡೆಸಲಾಗುವುದು.

**ವಾರ್ಡ್ ಸಭೆ**

ಪ್ರತಿ ಆರು ತಿಂಗಳಿಗೊಮ್ಮೆ ಗ್ರಾಮ ಪಂಚಾಯಿತಿ ಸದಸ್ಯರುಗಳ ಚುನಾಯಿತ ಕ್ಷೇತ್ರದಲ್ಲಿ ನಡೆಸುವ ಸಭೆಗಳೇ ವಾರ್ಡ್ ಸಭೆಗಳು. ಜನವಸತಿ/ವಾರ್ಡ್ ಸಭೆಗಳ ಕೋರಂ ಒಟ್ಟು ಮತದಾರರ 1/5 ಭಾಗ ಅಥವಾ 20. ಇದರಲ್ಲಿ ಯಾವುದು ಕಡಿಮೆಯೋ ಅದು. ವಾರ್ಡ್ ಸಭೆ ಕರೆಯಲು ಸದಸ್ಯರು ವಿಫಲರಾದರೆ ಅವರು ಗ್ರಾಮ ಪಂಚಾಯತ್ ನಿಧಿಗೆ **ರೂ. 100/–**ನ್ನು ಸಂದಾಯ ಮಾಡುವುದು. ಹಾಗೂ ವಿಫಲತೆಗೆ ವಿವರಣೆಯನ್ನು ನೀಡಬೇಕಾಗುತ್ತದೆ.

**ಜನವಸತಿ ಮತ್ತು ವಾರ್ಡ್ ಸಭೆಯ ಪ್ರಕಾರ್ಯಗಳು ಮತ್ತು ಅಧಿಕಾರಗಳು**

ಜನರ ಸುರಕ್ಷಿತ ಜೀವನಕ್ಕೆ ಬೇಕಾದ ವ್ಯವಸ್ಥೆ ರೂಪಿಸಿ ಆರೋಗ್ಯ ಮತ್ತು ಶಿಕ್ಷಣ, ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಒತ್ತು ನೀಡುವುದು.

ದೂರದೃಷ್ಟಿ ಯೋಜನೆಗೆ ಅಂಕಿಅಂಶಗಳನ್ನು ಒದಗಿಸುವುದು,

ತಾರತಮ್ಯಗಳ ನಿವಾರಣೆಗೆ ಮತ್ತು ಸಾಮಾಜಿಕ ನ್ಯಾಯ ದೊರಕಿಸುವಿಕೆಗೆ ಒತ್ತು ನೀಡುವುದು.

ಗ್ರಾಮೀಣ ಗುಡಿಕೈಗಾರಿಕೆಗಳು, ಕ್ರೀಡೆ, ಕಲೆ ಮತ್ತು ಸಾಹಿತ್ಯಕ್ಕೆ ಉತ್ತೇಜನ ನೀಡುವುದು.


ವಿವಿಧ ಕಾರ್ಯಕ್ರಮಗಳಿಗೆ ಅರ್ಹ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸುವುದು


ಪ್ರಕೃತಿ ವಿಕೋಪದ ಬಗ್ಗೆ ವರದಿ ಮಾಡುವುದು.

ಸಮುದಾಯಕ್ಕೆ ಅರಿವು ಮೂಡಿಸುವುದು ಮತ್ತು ವಂತಿಕೆಗಳನ್ನ ಸಂಗ್ರಹಿಸುವುದು.

ತೆರಿಗೆ ಮತ್ತು ಸಾಲಗಳನ್ನು ಸಂದಾಯ ಮಾಡಿರುವುದನ್ನು ಖಚಿತಪಡಿಸುವುದು.

ಸಾರ್ವಜನಿಕರ ಹಿತಾಶಕ್ತಿಗೆ ತಡೆಯೊಡ್ಡುವ ಚಟುವಟಿಕೆಗಳನ್ನು ತಡೆಯುವುದು





### ಗ್ರಾಮ ಸಭೆ

ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಅತ್ಯಂತ ತಳಸ್ತರದಲ್ಲಿರುವ ಗ್ರಾಮದ ಮತದಾರರ ಸಭೆಯೇ ಗ್ರಾಮ ಸಭೆ. ಗ್ರಾಮ ಮಟ್ಟದ ಅಭಿವೃದ್ಧಿಗೆ ಸಲಹೆ ಮತ್ತು ಸೂಚನೆಗಳನ್ನು ಈ ಸಭೆ ನೀಡಬಹುದಾಗಿದೆ. ಗ್ರಾಮ ಸಭೆಯು ಗ್ರಾಮ ಪಂಚಾಯಿತಿಯಲ್ಲಿ ಅನುಷ್ಠಾನ ಕ್ಕೆಗೊಳ್ಳುವ ಎಲ್ಲಾ ರೀತಿಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳ ಮತ್ತು ಕೇಂದ್ರ, ರಾಜ್ಯ ಮತ್ತು ಜಿಲ್ಲಾ ವಲಯದ ಎಲ್ಲಾ ಸರ್ಕಾರಿ ಯೋಜನೆಗಳ ಯೋಜನೆ ತಯಾರಿ, ಅನುಷ್ಟಾನ ಮತ್ತು ಮೇಲ್ವಿಚಾರಣೆ ಹಾಗು ಮೌಲ್ಯಮಾಪನ ಮಾಡುವುದರಲ್ಲಿ ಗ್ರಾಮದ ಎಲ್ಲಾ ನಾಗರಿಕರು ನೇರವಾಗಿ ಭಾಗಿಯಾಗಿರುವುದನ್ನು ಧೃಡಪಡಿಸುವ ನಿಟ್ಟಿನಲ್ಲಿ ಗ್ರಾಮ ಮಟ್ಟದಲ್ಲಿ ಗ್ರಾಮ ಸಭೆಯು ಸ್ಥಳೀಯ ಸ್ವಯಂ ಆಡಳಿತದ ಮೂಲ ಘಟಕವಾಗಿರುತ್ತದೆ.

ಪ್ರತಿ ಆರು ತಿಂಗಳಿಗೊಮ್ಮೆ ಕಂದಾಯ ಗ್ರಾಮಗಳಲ್ಲಿ ಗ್ರಾಮ ಸಭೆಯನ್ನು ಆಯೋಜಿಸುವುದು ಕಡ್ಡಾಯ, 18 ವರ್ಷ ತುಂಬಿದ ಪ್ರತಿ ಮತದಾರರು, ಆ ಗ್ರಾಮದ ಗ್ರಾಮ ಸಭೆಯ ಸದಸ್ಯರು ಆಗಿರುತ್ತಾರೆ. ಗ್ರಾಮ ಸಭೆಯ ಕೋರಂ 1/10 ನೇ ಭಾಗ ಅಥವಾ 100 ಮತದಾರರು. ಇವುಗಳಲ್ಲಿ ಯಾವುದು ಕಡಿಮೆಯೋ ಅದು. ಕಾಯ್ದೆಯಲ್ಲಿ ವಿಷಯಗಳಿಗೆ ಅನುಗುಣವಾಗಿ ವಿಶೇಷ ಗ್ರಾಮ ಸಭೆಗಳನ್ನು ಆಯೋಜಿಸಲು ಅವಕಾಶ ಮಾಡಿಕೊಟ್ಟಿದೆ. ವಿಶೇಷ ಸಭೆಗಳನ್ನು ಯಾವಾಗ ಕರೆಯಬಹುದು ಎಂದು ತಿಳಿಸಿದೆ.

1. ಗ್ರಾಮ ಪಂಚಾಯಿತಿಯ ಯೋಜನೆ ಮತ್ತು ಹಣಕಾಸು ಲೆಕ್ಕಪತ್ರಗಳ ವಿಷಯಗಳನ್ನು ಪರಿಶೀಲಿಸಲು ವರ್ಷಕ್ಕೆರಡು ಬಾರಿ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳು ವಿಶೇಷ ಆಯವ್ಯಯ ಸಭೆಯನ್ನು ಆಯೋಜಿಸುವುದು.
2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಆಯವ್ಯಯ ಹಂಚಿಕೆ ಮಾಡಲು ವಿಶೇಷ ಗ್ರಾಮ ಸಭೆ ಕರೆಯಬಹುದು.
3. ಮಹಿಳೆಯರು ಮತ್ತು ಮಕ್ಕಳಿಗಾಗಿ ವಿಶೇಷ ಗ್ರಾಮ ಸಭೆಯನ್ನು ಕರೆಯಬಹುದು. ಅಲ್ಲದೇ ಸರಕಾರ ನಿಗದಿ ಪಡಿಸುವ ಇತರೆ ಸಂದರ್ಭಗಳಲ್ಲಿ ಕೂಡಾ ವಿಶೇಷ ಗ್ರಾಮ ಸಭೆಗಳ್ನು ಕರೆಯಲು ಅವಕಾಶವಿದೆ.
4. ಗ್ರಾಮ ಸಭೆಯನ್ನು ನಿರ್ಧರಿಸಿದ ದಿನಾಂಕವೇ ಕರೆಯವುದು. ಆದರೆ, ಇಂತಹ 2 ಸಭೆಗಳ ನಡುವಿನ ಅಂತರವು 6 ತಿಂಗಳಿಗೆ ಮೀರದಂತೆ ಇರಬೇಕು.
5. ಗ್ರಾಮ ಪಂಚಾಯಿತಿ ಅಧ್ಯಕ್ಷರು ಸಭೆ ಕರೆಯಲು ವಿಫಲರಾದರೆ ಗ್ರಾಮ ಪಂಚಾಯತ್ ನಿಧಿಗೆ **ರೂ.1000/–** ಗಳನ್ನು ಭರಿಸಬೇಕು. ಮುಂದಿನ ಗ್ರಾಮ ಸಭೆಯಲ್ಲಿ ವಿಫಲತೆಯ ವಿವರಣೆಯನ್ನು ನೀಡಬೇಕು.

### ಉಪ ಸಂಹಾರ

ವಿವಿಧ ಹಂತಗಳಲ್ಲಿ ಆಯೋಜಿಸುವ ಗ್ರಾಮ ಸ್ವರಾಜ್ ಘಟಕಗಳು ಗ್ರಾಮ ಪಂಚಾಯಿತಿ ಆಡಳಿತದಲ್ಲಿ ಸಮುದಾಯದವರ ಭಾಗವಹಿಸುವಿಕೆಗೆ ಅವಕಾಶವನ್ನು ಕಲ್ಪಿಸುವುದರೊಂದಿಗೆ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಖಾತರಿಪಡಿಸುವ ವೇದಿಕೆಗಳಾಗಿದೆ. ಗ್ರಾಮದ ಅಭಿವೃದ್ಧಿಯಲ್ಲಿ ಜನರ ಆಶೋತ್ತರಗಳನ್ನು ಗುರುತಿಸುವ, ಆದ್ಯತೀಕರಿಸುವ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವನ್ನು ಮಾಡುವ ಜವಾಬ್ದಾರಿಯನ್ನು ಹೊಂದಿದೆ ಎಂಬುದನ್ನು ಹಾಗೂ ಚುನಾಯಿತ ಸದಸ್ಯರುಗಳು ಕಡ್ಡಾಯವಾಗಿ ಆಯೋಜಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ ಎಂಬುದನ್ನು ಮನವರಿಕೆ ಮಾಡುವುದು ಈ ಅಧಿವೇಶನದಲ್ಲಿ ಆಗಬೇಕಾಗಿದೆ.

ಅಧಿವೇಶನ –9

# ನಾಯಕತ್ವ





## ಉದ್ದೇಶ

- ಪ್ರಶಿಕ್ಷಣಾರ್ಥಿಗಳು ನಾಯಕತ್ವದ ಮಹತ್ವ ಹಾಗೂ ಗುಣಲಕ್ಷಣಗಳನ್ನು ಅರ್ಥೈಸಿಕೊಳ್ಳುವರು.
- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರಚನಾತ್ಮಕ ನಾಯಕತ್ವ ನೀಡುವ ಅಗತ್ಯತೆಯನ್ನು ಮನವರಿಕೆ ಮಾಡುವುದು.

## ಉಪ ವಿಷಯಗಳು

- ಯಾರು ನಾಯಕರು?
- ನಾಯಕತ್ವದ ವಿಧಗಳು
- ನಾಯಕರ ಗುಣಲಕ್ಷಣಗಳು
- ರಾಜಕೀಯ ನಾಯಕತ್ವ

## ವಿಧಾನ

- ವಿಚಾರ ಮಂಥನ
- ಗುಂಪು ಚಟುವಟಿಕೆ (ಶೈಕ್ಷಣಿಕ ಆಟಗಳು)
- ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ವಿಷಯಮಂಡನೆ ಮತ್ತು ಚರ್ಚೆ

## ಸಮಯ

75 ನಿಮಿಷಗಳು

## ಪೂರಕ ಸಾಮಗ್ರಿಗಳು

- ಕಿರು ವಿಡಿಯೋ ಚಿತ್ರ
- ಕೆ.ಜಿ.ಶೀಟ್ಸ್, ಮಾರ್ಕರ್

## ನಿರೀಕ್ಷಿತ ಫಲಿತಾಂಶ

- ಪ್ರಶಿಕ್ಷಣಾರ್ಥಿಗಳು **ಪ್ರಜಾಪ್ರಭುತ್ವದಲ್ಲಿ ಮತ್ತು ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ** ನಾಯಕತ್ವದ ಮಹತ್ವ, ವಿಧಗಳು, ಗುಣಲಕ್ಷಣಗಳನ್ನು ಮನವರಿಕೆ ಮಾಡುವುದು. ಕ್ಷೇತ್ರ ಮಟ್ಟದಲ್ಲಿ ಅದನ್ನು ಅಳವಡಿಸಿಕೊಂಡು ಉತ್ತಮ ಆಡಳಿತ ನೀಡುವುದು.

## ಅಧಿವೇಶನ ಪ್ರಕ್ರಿಯೆ

ಅಧಿವೇಶನ ಪ್ರಾರಂಭಿಸುವಾಗ ಸುಗಮಗಾರರು ಪ್ರಾಸ್ತವಿಕವಾಗಿ ನಾಯಕತ್ವದ ಬಗ್ಗೆ ವಿಷಯ ಪ್ರಸ್ತಾಪಿಸುವುದು.ಪ್ರಸ್ತುತ ಅಧಿವೇಶನವು ನಾಯಕತ್ವ ಅಥವಾ ನಾಯಕರು ಎಂಬ ಪದವನ್ನು ಆಗಿಂದ್ದಾಗ್ಗೆ ದೈನಂದಿನ ಜೀವನದಲ್ಲಿ ಬಳಕೆಯಲ್ಲಿರುವುದನ್ನು ನಾವೆಲ್ಲಾ ಗಮನಿಸಿದ್ದೇವೆ. ನಾಯಕತ್ವ ಅಥವ ನಾಯಕರು ಎಂದರೆ ಯಾರು?ಯಾರನ್ನು ನಾವು ನಾಯಕರೆಂದು ಕರೆಯಬಹುದು ಅಥವಾ ಸಂಭೋದಿಸಬಹುದು?ಎಂಬ ಹಲವು ಪ್ರಶ್ನೆಗಳು ಉದ್ಭವಿಸುವುದು ಸಹಜ. ನಾವೆಲ್ಲರು ಮಕ್ಕಳಾಗಿದ್ದ ಸಂದರ್ಭದಿಂದಲೂ ನಾಯಕರು ಎಂಬ ಪದವನ್ನು ಬಳಸಿದ್ದೇವೆ ಮತ್ತು ಆಲಿಸಿದ್ದೇವೆ. ಈ ಹಿನ್ನೆಲೆಯಲ್ಲಿ ವಿಷಯದ ಅರ್ಥೈಸುವಿಕೆಯ ದೃಷ್ಟಿಯಿಂದ ಒಂದು ಆಟವಾಡುವುದರ ಮೂಲಕ ಚರ್ಚೆಯನ್ನು ಪ್ರಾರಂಭಿಸೋಣ ಎಂದು ತಿಳಿಸುವುದು. ಮುಂದುವರೆದು, ಪ್ರಶಿಕ್ಷಣಾರ್ಥಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸುವುದು.

**ಶೈಕ್ಷಣಿಕ ಚಟುವಟಿಕೆ–1: ಆಟ–1: ಮಹಾರಾಣಿಯ ಬೇಡಿಕೆ**

ಆಟವನ್ನು ಪ್ರಾರಂಭಿಸುವ ಮುನ್ನ ಗುಂಪಿನ ಸದಸ್ಯರುಗಳಿಗೆ ತಮ್ಮ ಗುಂಪಿನಲ್ಲಿ ಒಬ್ಬ ನಾಯಕರನ್ನು ಆಯ್ಕೆ ಮಾಡಲು ತಿಳಿಸುವುದು.ಗುಂಪಿನ ನಾಯಕರು ಆಯ್ಕೆಯಾದ ನಂತರ ಆಟದ ನಿಯಮಗಳನ್ನು ವಿವರಿಸುವುದು.

**ನಿಯಮಗಳು:**

1. ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಹಿರಿಯ ಮಹಿಳೆಯನ್ನು ಮಹಾರಾಣಿಯಾಗಿ ಗುರುತಿಸುವುದು.
2. ಸುಗಮಗಾರರು ಮಹಾರಾಣಿಯ ಪ್ರಧಾನಮಂತ್ರಿಯ ಪಾತ್ರ ನಿರ್ವಹಿಸುವುದು
3. ಮಹಾರಾಣಿಯವರು ತಮ್ಮ ಬೇಡಿಕೆಯನ್ನು ಪ್ರಧಾನಮಂತ್ರಿಯ ಮೂಲಕ ತಂಡಗಳು ಪೂರೈಸಬೇಕೆಂದು ಎಲ್ಲರಿಗೂ ಕೇಳುವಂತೆ ಹೇಳುತ್ತಾರೆ.
4. ತಂಡದ ಎಲ್ಲಾ ಸದಸ್ಯರು ಮಹಾರಾಣಿಯವರ ಬೇಡಿಕೆಗಳನ್ನು ಪೂರೈಸಲು ಪ್ರಯತ್ನಿಸಬೇಕು.
5. ತಂಡದ ನಾಯಕರು ನಿಂತಲ್ಲಿಯೇ ಇದ್ದು ತಮ್ಮ ತಂಡದ ಸದಸ್ಯರು ತಂದುಕೊಡುವ ವಸ್ತುವನ್ನು ಪ್ರಧಾನಮಂತ್ರಿಯವರಿಗೆ ತಲುಪಿಸುತ್ತಾರೆ.
6. ತಂಡದ ನಾಯಕರು ಮಾತ್ರ ಪ್ರಧಾನಮಂತ್ರಿಗಳ ಮೂಲಕ ಮಹಾರಾಣಿಯವರ ಬೇಡಿಕೆಯ ವಸ್ತುಗಳನ್ನು ತಲುಪಿಸುವರು.
7. ಮಹಾರಾಣಿಯವರ ಬೇಡಿಕೆಯನ್ನು ಯಾವ ತಂಡ ಮೊದಲು ಪೂರೈಸುತ್ತದೆಯೇ ಆ ತಂಡಕ್ಕೆ ಅಂಕಗಳನ್ನು ನೀಡಿ ಹೆಚ್ಚು ಅಂಕ ಪಡೆದ ತಂಡವನ್ನು ವಿಜೇತವೆಂದು ಘೋಷಿಸಲಾಗುತ್ತದೆ.
8. ಒಂದುವೇಳೆ ತಂಡದ ಸದಸ್ಯರು ತಮ್ಮ ನಾಯಕರನ್ನು ಬಿಟ್ಟು ನೇರವಾಗಿ ಪ್ರಧಾನಮಂತ್ರಿಯವರಿಗೆ ಮಹಾರಾಣಿಯವರ ಬೇಡಿಕೆಗಳನ್ನು ತಲುಪಿಸಿದರೆ ಆ ತಂಡಕ್ಕೆ ಅಂಕ ಲಭಿಸುವುದಿಲ್ಲ.
9. ನಿಯಮಗಳನ್ನು ವಿವರಿಸಿದ ನಂತರ, ಸದಸ್ಯರುಗಳು ಒಂದುಪಕ್ಷ ತಂಡದ ಸದಸ್ಯರು ತಮ್ಮ ನಾಯಕರನ್ನು ಬದಲಿಸಲು ಬಯಸಿದರೆ, ಅವಕಾಶವನ್ನು ನೀಡಿ, ಅಂತಿಮವಾಗಿ ತಂಡದವರು ತಮ್ಮ ನಾಯಕರನ್ನು ಘೋಷಿಸಲು ಅವಕಾಶ ನೀಡುವುದು.


ಉದಾ; ಮಹಾರಾಣಿಯವರು ತಮ್ಮ ಪ್ರಧಾನ ಮಂತ್ರಿಯವರಿಗೆ ತಮಗೆ ಮೂರು ಬಣ್ಣದ ಹೂ ಬೇಕೆಂದು ತಿಳಿಸುತ್ತಾರೆ. ಪ್ರಧಾನಮಂತ್ರಿಯವರು ಇದರು ಗುಂಪಿನವರಿಗೆ "ಮಹಾರಾಣಿಯವರಿಗೆ ಮೂರು ಬಣ್ಣದ ಹೂವುಗಳನ್ನು ಬಳಸುವ ಆಸೆಯಾಗಿದೆ ಎಂದು ಘೋಷಿಸುತ್ತಾರೆ."ಸನ್ನದ್ದರಾಗಿರುವ ಗುಂಪಿನ ಸದಸ್ಯರು ಮೂರು ಬಣ್ಣದ ಹೂವನ್ನು ಹುಡುಕಿ ತಂದು ತಮ್ಮ ತಂಡದ ನಾಯಕರ ಮೂಲಕ ಪ್ರಧಾನಮಂತ್ರಿಯವರ ಮೂಲಕ ಮಹಾರಾಣಿಯವರಿಗೆ ತಲುಪಿಸಬೇಕು.ಈ ರೀತಿ ಮಹಾರಾಣಿಯವರು ಬಯಸುವ ಪೆನ್ನು, ಪುಸ್ತಕ, ಮೊಬೈಲ್ ಮತ್ಯಾವುದೇ ಬೇಡಿಕೆಯನ್ನು ತಂಡದ ಸದಸ್ಯರು ಪೂರೈಸಲು ಪ್ರಯತ್ನಿಸುತ್ತಾರೆ.


ಆಟದ ಎಲ್ಲಾ ನಿಯಮಗಳನ್ನು ಪಾಲಿಸಿ ಮಹಾರಾಣಿಯ ಬಯಕೆಗಳನ್ನು ಪೂರೈಸಿ ಹೆಚ್ಚು ಅಂಕ ಪಡೆದ ತಂಡವನ್ನು ವಿಜೇತ ತಂಡವೆಂದು ಘೋಷಿಸುವುದು.ಆಟದಲ್ಲಿ ವಿಜಯಿಯಾದ ತಂಡದವರನ್ನು ಅಭಿನಂದಿಸುವುದು ಮತ್ತು ಆಟದಲ್ಲಿ ಸೋತ ತಂಡದವರಿಗೂ ಅವರ ಪ್ರಯತ್ನಕ್ಕಾಗಿ ಅಭಿನಂದಿಸಿ ಎಲ್ಲರೂ ತರಗತಿಗಳಿಗೆ ಹಿಂದಿರುಗುವುದು.

**ಅಥವಾ**

**ಶೈಕ್ಷಣಿಕ ಚಟುವಟಿಕೆ–2: ಕೋಲನ್ನು ದಾಟಿಸುವ ಆಟ**

ಗ್ರಾಮ ಪಂಚಾಯಿತಿವಾರು ತಂಡಗಳನ್ನು ರಚಿಸಿದ ನಂತರ ಪ್ರತಿ ತಂಡದ ಸದಸ್ಯರಿಗೆ ತಮ್ಮ ತಂಡದ ನಾಯಕರನ್ನು ಗುರುತಿಸುವಂತೆ ತಿಳಿಸುವುದು ಮತ್ತು ನಾಯಕರು ಆಯ್ಕೆಯಾದ ನಂತರದಲ್ಲಿ ನಿಯಮಗಳನ್ನು ವಿವರಿಸುವುದು.





1. ತಂಡದ ಸದಸ್ಯರು ಒಬ್ಬರ ಹಿಂದೆ ಒಬ್ಬರು ತಮ್ಮ ಒಂದು ಕೈಗಳ ಅಂತರದಲ್ಲಿ ನಿಲ್ಲುವುದು

2.ತಂಡದ ನಾಯಕರು ತಂಡವನ್ನು ಮುನ್ನಡೆಸುವುದು

3. ತಂಡದ ಸದಸ್ಯರು ನಾಯಕರನ್ನು ಒಳಗೊಂಡಂತೆ ಸುಗಮಗಾರರು ಎಳೆದಿರುವ ಗೆರೆಯ ಹಿಂದೆ ನಿಲ್ಲಬೇಕು .

4. ನಾಯಕರು ಗೆರೆಯಿಂದ 10 ರಿಂದ 15 ಮೀಟರ್ ದೂರದಲ್ಲಿ ಇಡಲಾಗಿರುವ ಕೋಲನ್ನು ನಡೆದುಕೊಂಡು ಹೋಗಿ ತೆಗೆದುಕೊಳ್ಳುವುದು ಮತ್ತು ತೆಗೆದುಕೊಂಡಿರುವ ಕೋಲನ್ನು ನಡೆದುಕೊಂಡೆ ಹೋಗಿ ತಮ್ಮ ಸಾಲಿನ ಹಿಂದಿರುವ ವ್ಯಕ್ತಿಗೆ ತಲುಪಿಸಬೇಕು.

5. ತಂಡದ ಪ್ರತಿಯೊಬ್ಬ ಸದಸ್ಯರು ತಮ್ಮ ಕೈಗೆ ಕೋಲು ತಲುಪಿದ ನಂತರ ನಡೆದುಕೊಂಡೇ ಓಡಾಡಬೇಕು. ಒಂದುವೇಳೆ ಓಡಿದಲ್ಲಿ ತಂಡದ ಸದಸ್ಯರು ತಮ್ಮ ಹಿಂದಿನ ಸ್ಥಳಕ್ಕೆ ಮರಳಿ ಮತ್ತೊಮ್ಮೆ ನಡೆದುಕೊಂಡು ಹೋಗುವಂತೆ ತಿಳಿಸುವುದು. ಈ ರೀತಿ ಯಾವ ಸದಸ್ಯರು ತಪ್ಪುಗಳನ್ನು ಮಾಡುತ್ತಾರೋ ಅವರು ಈ ಕ್ರಿಯೆಯನ್ನು ಮರುಕಳಿಸಬೇಕಾಗುತ್ತದೆ.

6. ನಾಯಕರು ತೆಗದುಕೊಂಡ ಕೋಲು ತಂಡದ ಎಲ್ಲಾ ಸದಸ್ಯರು ನಿಯಮವನ್ನು ಪಾಲಿಸಿ, ಸಂಪೂರ್ಣ ಒಂದು ವೃತ್ತವನ್ನು ಮುಗಿಸಿ ಪುನಃ ನಾಯಕರ ಕೈಗೆ ಬಂದಾಗ, ತಂಡ ಆಟವನ್ನು ಮುಗಿಸಿದೆಯೆಂದು ಮತ್ತು ಮೊದಲು ಕೋಲನ್ನು ನಾಯಕರಿಗೆ ತಲುಪಿಸಿದ ತಂಡ ವಿಜೇತರಾಗಿದೆಯೆಂದು ಘೋಷಿಸುವುದು.

**ಆಟದ ಕುರಿತು ಪ್ರಶಿಕ್ಷಣಾರ್ಥಿಗಳ ಪ್ರತಿಕ್ರಿಯೆಯನ್ನು ಸಂಗ್ರಹಿಸುವುದು.**

1. ಸುಗಮಗಾರರು, ಮೊದಲನೆಯದಾಗಿ ತಂಡದ ಸದಸ್ಯರುಗಳನ್ನು ನೀವು ಯಾವ ಕಾರಣಕ್ಕಾಗಿ ---ವ್ಯಕ್ತಿಯನ್ನು ತಂಡದ ನಾಯಕರೆಂದು ಆಯ್ಕೆ ಮಾಡಿದಿರಿ ಎಂದು ಪ್ರಶ್ನಿಸುವುದು. ತಂಡದ ಸದಸ್ಯರು ಉತ್ತರಿಸಿದ ನಂತರ ತಂಡದ ನಾಯಕರನ್ನು ನೀವು ನಾಯಕರೆಂದು ತಾವು ಏತಕ್ಕಾಗಿ ಒಪ್ಪಿಕೊಂಡಿರಿ ಎಂದು ಪ್ರಶ್ನಿಸಿ ಅವರ ಉತ್ತರವನ್ನು ದಾಖಲಿಸುವುದು.
2. ತಂಡದ ನಾಯಕರಾದ ವ್ಯಕ್ತಿಯನ್ನು ತಾವು ವಿಜಯಿಗಳಾಗಲು ಹೇಗೆ ಸಾಧ್ಯವಾಯಿತು ಎಂಬುದನ್ನು ವಿವರಿಸಿ ಎಂದು ತಿಳಿಸುವುದು. ನಾಯಕರು ವಿಶ್ಲೇಷಿಸುವ ಅಂಶಗಳನ್ನು ಪಟ್ಟಿ ಮಾಡುವುದು. ತದನಂತರದಲ್ಲಿ ತಂಡದ ಎಲ್ಲಾ ಸದಸ್ಯರು ತಮ್ಮ ತಂಡ ಗೆಲುವನ್ನು ಸಾಧಿಸಲು ಕಾರಣವಾದ ಅಂಶಗಳನ್ನು ವಿವರಿಸುವಂತೆ ತಿಳಿಸುವುದು.
3. ತದನಂತರದಲ್ಲಿ ಆಟದಲ್ಲಿ ಸೋಲನ್ನು ಅನುಭವಿಸಿದ ತಂಡದ ನಾಯಕರು ಮತ್ತು ತಂಡದ ಸದಸ್ಯರು ತಮ್ಮ ಅನಿಸಿಕೆಗಳನ್ನು ಸಂಗ್ರಹಿಸಿ ಬೋರ್ಡಿನಲ್ಲಿ ಬರೆದುಕೊಳ್ಳುವುದು.
4. ಆಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಎಲ್ಲರೂ ಮತ್ತು ಆಟದ ಕುರಿತು ವಿಶ್ಲೇಷಿಸಿದ ನಂತರ ಈ ಶೈಕ್ಷಣಿಕ ಆಟದಿಂದ ತಂಡವು ಕಲಿತ **ನಾಯಕತ್ವ ಮತ್ತು ತಂಡ ನಿರ್ವಹಣೆ** ಬಗೆಗಿನ ಅಂಶಗಳನ್ನು ವಿಶ್ಲೇಷಣೆ ಮಾಡುವುದು. ಹಲವು ವಿಷಯಗಳನ್ನು ಅರಿಯಲು ಸಾಧ್ಯವಾಯಿತು ಅಲ್ಲವೇ? ಎಂದು ಎಲ್ಲರಿಗೂ ವಂದನೆಗಳನ್ನು ತಿಳಿಸಿ, ಎಲ್ಲರೂ ಅವರವರ ಸ್ಥಳದಲ್ಲಿ ಕುಳಿತುಕೊಳ್ಳಲು ತಿಳಿಸುವುದು.

ನಂತರದಲ್ಲಿ ನಾಯಕತ್ವದ ಕುರಿತು ವಿಡಿಯೋ ವೀಕ್ಷಣೆ.

ತದನಂತರದಲ್ಲಿ ಸಂಸ್ಥೆಯವರು ಸಿದ್ದಪಡಿಸಿರುವ ಗ್ರಾಮ ಪಂಚಾಯಿತಿಯಲ್ಲಿ ವಿಶೇಷ ಸಾಧನೆ ಮಾಡಿದ ನಾಯಕರುಗಳ (ಚುನಾಯಿತರು) ಕುರಿತ ವೀಡಿಯೋ ವೀಕ್ಷಣೆ.

ಸುಗಮಗಾರರು, ವೀಡಿಯೋಗಳ ವೀಕ್ಷಣೆಯ ನಂತರ ನಿಮ್ಮ ಅನಿಸಿಕೆಯಲ್ಲಿ ಒಬ್ಬ ಉತ್ತಮ ನಾಯಕರು ಎಂದರೆ ಯಾರು

ಮತ್ತು ಏಕೆ ಎಂಬುದಾಗಿ ಒಂದಂಶವನ್ನು ತಿಳಿಸಿ ಎಂದು ಕೇಳುವುದು. ಪ್ರಶಿಕ್ಷಣಾರ್ಥಿಗಳು ಉದಾ: ಮಹಾತ್ಮ ಗಾಂಧಿ– ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟವರು, ಸುಭಾಷ್ ಚಂದ್ರಬೋಸ್– ಬ್ರಿಟಿಷರ ವಿರುದ್ಧ ಹೋರಾಡಿದವರು, ವಿವೇಕಾನಂದ– ದೇಶದ ಪ್ರತಿಷ್ಠೆಯನ್ನು ವಿಶ್ವಾದ್ಯಂತ ಪಸರಿಸಿದವರು, ಇಂದಿರಾ ಗಾಂಧಿ– ದೇಶದ ಮೊದಲ ಪ್ರಧಾನಮಂತ್ರಿ, ಹೀಗೆ ಉತ್ತರಿಸುವರು. ಪ್ರಶಿಕ್ಷಣಾರ್ಥಿಗಳು ನೀಡಿದ ಹೆಸರುಗಳನ್ನು ನಮೂದಿಸುವುದು ಮತ್ತು ಅಧಿವೇಶನವನ್ನು ಮುಂದುವರೆಸುತ್ತಾ, ರಾಜಕೀಯ ಜೀವನದಲ್ಲಿರುವ ತಾವುಗಳು ನಿಮಗೆ ತಿಳಿದಂತೆ ನಿಮ್ಮ ನೆಚ್ಚಿನ ರಾಜಕೀಯ ನಾಯಕರ ಹೆಸರು ಮತ್ತು ಏತಕ್ಕಾಗಿ ಅವರು ನಿಮಗೆ ಮಾದರಿಯಾಗಿದ್ದಾರೆ ಎಂಬುದನ್ನು ತಿಳಿಸುವಂತೆ ಸೂಚಿಸುವುದು ಮತ್ತು ಉತ್ತಮ ರಾಜಕೀಯ ನಾಯಕರಲ್ಲಿರಲೇಬೇಕಾದ ಗುಣಲಕ್ಷಣಗಳನ್ನು ವಿವರಿಸುವಂತೆ ತಿಳಿಸುವುದು. ತದನಂತರದಲ್ಲಿ ತಾವುಗಳು ಉತ್ತಮ ನಾಯಕರು ಮತ್ತು ಉತ್ತಮ ರಾಜಕೀಯ ನಾಯಕರಾಗಲು ಪ್ರಯತ್ನಿಸುವಂತೆ ಪ್ರೇರೇಪಿಸಿ ಅಧಿವೇಶನವನ್ನು ಮುಕ್ತಾಯಗೊಳಿಸುವುದು.

**ಸುಗಮಗಾರರಿಗೆ ಸೂಚನೆಗಳು**

ಅಧಿವೇಶನದ ಆರಂಭದಲ್ಲಿ ಪ್ರಶಿಕ್ಷಣಾರ್ಥಿಗಳನ್ನು ನಾಯಕ ಎಂದರೆ ಯಾರು ಎಂದು ಪ್ರಶ್ನಿಸಿ ಉತ್ತರಗಳನ್ನು ಪಟ್ಟಿ ಮಾಡುವುದು (5 ನಿಮಿಷಗಳು)

ನಾಯಕತ್ವದ ಗುಣಗಳನ್ನು ಒಳಗೊಂಡ ಆಟ (20 ನಿಮಿಷಗಳು)

1. ಮಹಾರಾಣಿಯ ಬೇಡಿಕೆ ಆಟ ಅಥವಾ
2. ಕೋಲನ್ನು ದಾಟಿಸುವ ಆಟ

ಆಟದ ಕಲಿಕೆಗಳನ್ನು ಪಟ್ಟಿ ಮಾಡಿ ವಿಶ್ಲೇಷಿಸುವುದು (10 ನಿಮಿಷ)

ಸಂಸ್ಥೆಯ ನಾಯಕತ್ವ ಕುರಿತು ವೀಡಿಯೋ ಪ್ರಸರಣ (5 ನಿಮಿಷ)

ಲೀಡ್ ಇಂಡಿಯಾ ವಿಡಿಯೋ (2 ವಿಡಿಯೋ 3 ನಿಮಿಷ ಗಮನಿಸಿದ ಅಂಶಗಳ ಚರ್ಚೆ)

ತಜ್ಞ ಸಂಪನ್ಮೂಲ ವ್ಯಕ್ತಿಯವರಿಂದ ವಿಷಯ ಮಂಡನೆ (10 ನಿಮಿಷ)

ಅಧಿವೇಶನದ ಸಾರಾಂಶದೊಂದಿಗೆ ಉಪಸಂಹಾರ (5 ನಿಮಿಷ)





**ತರಬೇತಿ ವಿಷಯ ಕುರಿತ ಟಿಪ್ಪಣಿ**

## ನಾಯಕತ್ವ

ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಿರುವ ನಾವೆಲ್ಲರು ಹಲವು ಸಂದರ್ಭಗಳಲ್ಲಿ ಅಥವ ಆಗಿಂದಾಗ್ಗೆ ಸಾರ್ವಜನಿಕರಿಂದ  ನಾಯಕರು, ಮುಖಂಡರು, ಮುಂದಾಳುಗಳು, ಎಂದು ಕರೆಸಿಕೊಳ್ಳುತ್ತೇವೆ. ನಾವುಗಳು ನಮಗೆ ಅರಿವಿದ್ದೋ ಅಥವ ಅರಿವಿಲ್ಲದೆಯೇ ಹಲವರನ್ನು ನಮ್ಮ ನಾಯಕರು ಅಥವ ಆದರ್ಶ ವ್ಯಕ್ತಿಗಳು ಎಂದು ಒಪ್ಪಿಕೊಳ್ಳುತ್ತೇವೆ. ನಾವು ಒಪ್ಪಿಕೊಂಡಿರುವ ನಾಯಕರಲ್ಲಿನ ಕೆಲವೊಂದು ಗುಣಲಕ್ಷಣಗಳನ್ನು, ಆದರ್ಶಗಳನ್ನು ಪಾಲಿಸಲು ಮತ್ತು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಪ್ರತಿಯೊಂದು ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿರುವವರನ್ನು ನಾಯಕರೆಂದು ಪರಿಭಾವಿಸುತ್ತೇವೆ ಮತ್ತು ಗೌರವಿಸುತ್ತೇವೆ. ಹೀಗಿದ್ದರು ನಾಯಕರು ಎಂದರೆ ಯಾರು? ನಾಯಕತ್ವ ಎಂದರೆ ಏನು?ಎಂಬ ಸ್ಪಷ್ಟ ಪರಿಕಲ್ಪನೆ ಪಡೆಯುವ ಅಗತ್ಯವಿದೆ.

**ನಾಯಕರು ಎಂದರೆ ಯಾರು?**

ನಾಯಕರು ಅಥವಾ ನಾಯಕತ್ವಕ್ಕೆ ಯಾವುದೇ ಒಂದು ವ್ಯಾಖ್ಯಾನವನ್ನು ಅಥವಾ ಅರ್ಥೈಸುವಿಕೆಯನ್ನು ನೀಡುವುದು ಕಷ್ಟ.ಪ್ರತಿಯೊಂದು ಸನ್ನಿವೇಶ, ಪ್ರತಿಯೊಂದು ಅವಕಾಶಗಳು, ಪ್ರತಿಯೊಂದು ಸವಾಲುಗಳು ನಾಯಕತ್ವದ ಕುರಿತು ವಿಭಿನ್ನವಾದ ಅರ್ಥೈಸುವಿಕೆಯನ್ನು ನೀಡುತ್ತದೆ.





**ನಾಯಕತ್ವದ ಬೆಳವಣಿಗೆ ಹಂತಗಳು**

ನಾಯಕತ್ವ ಗುಣಗಳ ಬೆಳವಣಿಗೆಗೆ ಕೆಳಕಂಡ ನಾಲ್ಕು ಹಂತಗಳನ್ನು ಗಮನಿಸುವುದು ಅಗತ್ಯ.

ಸ್ವವಿಶ್ಲೇಷಣೆ (Self analysis) ಗುರಿ ನಿರ್ಧಾರ (Goal Setting)

ಕಾರ್ಯಯೋಜನೆ (Work Plan) ಕಾರ್ಯ ಅನುಷ್ಠಾನ (Implementation)

**ನಾಯಕತ್ವದ ವಿಧಗಳು**

ನಾಯಕತ್ವದ ಸ್ವರೂಪವನ್ನು ಸನ್ನಿವೇಶ, ಸಮಸ್ಯೆಯ ಸ್ವರೂಪ, ಅಗತ್ಯತೆಗಳು ನಿರ್ಧರಿಸುತ್ತವೆ. ಇವುಗಳ ಆಧಾರದಲ್ಲಿ ನಾಯಕತ್ವದ ವಿಧಗಳನ್ನು ಅರ್ಥೈಸಿಕೊಳ್ಳೋಣ.

ಪ್ರಮುಖವಾಗಿ ನಾಯಕತ್ವವನ್ನು 3 ವಿಧಗಳಲ್ಲಿ ಗುರುತಿಸಲಾಗಿದೆ

**1. ಸರ್ವಾಧಿಕಾರಿ ನಾಯಕತ್ವ 2. ಪ್ರಜಾಪ್ರಭುತ್ವ ನಾಯಕತ್ವ 3. ವರ್ಚಸ್ವಿ ನಾಯಕತ್ವ**

**ನಾಯಕರ ಗುಣಲಕ್ಷಣಗಳು**

**ಪ್ರಾಮಾಣಿಕತೆ** **ಸಂವಹನ**

**ಸೂಕ್ತವಾದವರನ್ನು ನಿಯೋಜಿಸುವ ಸಾಮರ್ಥ್ಯ** **ಸ್ವಯಂ ಅರಿವು**

**ಕೃತಜ್ಞತೆ** **ನಿರಂತರ ಕಲಿಕೆ**

**ಪ್ರಭಾವ ಬೀರುವಿಕೆ** **ಅನುಭೂತಿ** (ಪರಾನುಭೂತಿ)

**ಧೈರ್ಯ** **ಗೌರವ**

**ರಾಜಕೀಯ ನಾಯಕತ್ವ**

ಗ್ರಾಮ ಪಂಚಾಯಿತಿ ಚುನಾವಣೆಗಳು ಪಕ್ಷರಹಿತವಾಗಿದ್ದರು, ಜನಪ್ರತಿನಿಧಿಯಾಗಿ ಜನರ ನಿರೀಕ್ಷೆಗಳನ್ನು ಪೂರೈಸುವ ರಾಜಕೀಯ ಪ್ರಕ್ರಿಯೆಯ ಭಾಗವಾಗಿದ್ದು, ಪ್ರಮುಖವಾಗಿ, ಎಲ್ಲರಿಗೂ ಒಳಿತಾಗುವ ಯೋಜನೆಗಳನ್ನು ರೂಪಿಸುವ, ಅನುಷ್ಠಾನ ಮತ್ತು ಮೇಲ್ವಿಚಾರಣೆ ಮಾಡಬೇಕಾಗುತ್ತದೆ. ಸ್ಥಳೀಯರಿಗೆ ಮತ್ತು ಮತದಾರರಿಗೆ ಅನುಕೂಲವಾಗುವ ನಿರ್ಣಯಗಳನ್ನು ಕೈಗೊಳ್ಳುವುದು ಮತ್ತು ನಿಯಮಗಳನ್ನು ರೂಪಿಸುವ ಹೊಣೆಗಾರಿಕೆಯ ಜೊತೆಗೆ ಗ್ರಾಮ ಪಂಚಾಯಿತಿ ಮತ್ತು ಇತರೆ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಜೊತೆಗೂಡಿ ಕೆಲಸ ಮಾಡಬೇಕಾಗಿದೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಆಡಳಿತ ಪ್ರಕ್ರಿಯೆಯು ರಾಜಕೀಯ ಪ್ರಕ್ರಿಯೆಯ ಭಾಗವಾಗಿದೆ.

ಜನರ ಪ್ರತಿನಿಧಿಯಾಗಿ ಆಯ್ಕೆಯಾಗಿರುವ ಮತ್ತು ರಾಜಕೀಯ ಜೀವನಕ್ಕೆ ಕಾಲಿರಿಸಿರುವ ಚುನಾಯಿತ ಪ್ರತಿನಿಧಿಗಳು ರಾಜಕೀಯ ನಾಯಕರಾಗಿದ್ದು, ಎಲ್ಲರೊಂದಿಗೆ ಉತ್ತಮ ಸಂಬಂಧ, ನಮ್ಮ ನೆಲ, ಜಲ ಜನರಿಗೆ ಒಳ್ಳೆಯದನ್ನು ಬಯಸುವುದು, ಎಲ್ಲರಿಗೂ ಒಳ್ಳೆಯದಾಗುವ ದೀರ್ಘಕಾಲದ ಗುರಿಗಳು, ಪ್ರಭಾವಿಸುವ ಗುಣ, ಪ್ರಾಮಾಣಿಕತೆ, ನಿರ್ಧಾರ ಕೈಗೊಳ್ಳುವುದು, ವ್ಯವಹಾರ ಕೌಶಲ್ಯ ಅಳವಡಿಸಿಕೊಳ್ಳಬೇಕಾಗಿರುತ್ತದೆ.

ಮೇಲೆ ವಿವರಿಸಿರುವ ಅಂಶಗಳು ನಮ್ಮನ್ನು ಉತ್ತಮ ರಾಜಕೀಯ ನಾಯಕರನ್ನಾಗಿ ನಿರ್ಮಿಸುವಲ್ಲಿ ಸಹಕಾರಿಯಾಗಿವೆ. ಹೀಗೆಂದಾಕ್ಷಣ ಇಷ್ಟೇ ಗುಣಲಕ್ಷಣಗಳು ರಾಜಕೀಯ ನಾಯಕರನ್ನು ವ್ಯಾಖ್ಯಾನಿಸುತ್ತದೆ ಎಂದು ಸಹ ಭಾವಿಸಬೇಕಾಗಿಲ್ಲ. ಇವುಗಳ ಜೊತೆಗೆ,

ಮೌಲ್ಯಾಧಾರಿತ ಮಾದರಿ ಜೀವನ ನಿರ್ವಹಣೆ

ಉತ್ಸಾಹಿಯಾಗಿರುವುದು.

ಆಲಿಸುವಿಕೆ ಮತ್ತು ಪ್ರತಿಸ್ಪಂದಿಸುವ ಸಾಮರ್ಥ್ಯ

ನಿರೀಕ್ಷಿತ ಫಲಿತಾಂಶ ಸಾಧಿಸಲು ನಿರಂತರ ಪ್ರಯತ್ನ


ಹೊಸ ಅವಕಾಶಗಳನ್ನು ಗುರುತಿಸುವ ಮತ್ತು ಸಾಧಿಸುವ ಗುಣ

ಬದಲಾವಣೆಗಳ ಹರಿಕಾರರಾಗುವ ಸಾಮರ್ಥ್ಯ

ಹೀಗೆ ಹಲವು ಗುಣಲಕ್ಷಣಗಳನ್ನು ಒಳಗೊಂಡಿದೆ. ಗ್ರಾಮೀಣ ಜನರ ಮನದಾಳದಲ್ಲಿ, ನಮ್ಮ ಸಮಸ್ಯೆಗಳನ್ನು ಆಲಿಸಿ, ಪರಿಹಾರಗಳನ್ನು ನೀಡುವ, ಜನರ ಜೀವನ ಗುಣಮಟ್ಟವನ್ನು ಉತ್ತಮಪಡಿಸುವ ವ್ಯಕ್ತಿಯನ್ನು ಜನನಾಯಕರೆಂದು ಪರಿಭಾವಿಸುತ್ತಾರೆ. ಜನರ ನಿರೀಕ್ಷೆಯ ಜೊತೆಗೆ, ದೀರ್ಘಕಾಲದ ಗುರಿಗಳನ್ನು ಮನಸ್ಸಿನಲ್ಲಿರಿಸಿಕೊಂಡು ಜನರ ಜೀವನಮಟ್ಟವನ್ನು ಉತ್ತಮಪಡಿಸಲು ಶ್ರಮಿಸುವ ಜನರ ಪ್ರತಿನಿಧಿಯೇ ರಾಜಕೀಯ ನಾಯಕರು.

**ಉಪ ಸಂಹಾರ**

ಗ್ರಾಮ ಪಂಚಾಯಿತಿ ಆಡಳಿತ ವ್ಯವಸ್ಥೆಯಲ್ಲಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ಸಂಪನ್ಮೂಲ, ಸಹಕಾರ, ಸಮನ್ವಯತೆಯನ್ನು ಕಾಪಾಡಿಕೊಳ್ಳಲು ಪರಿಣಾಮಕಾರಿಯಾದ ನಾಯಕತ್ವದ ಅವಶ್ಯಕತೆ ಇರುತ್ತದೆ. ನಾಯಕತ್ವವು ಸಾಂದರ್ಭಿಕವಾಗಿ ಬಳಸುವುದು ಅಭಿವೃದ್ಧಿಯ ದೃಷ್ಟಿಕೋನದಲ್ಲಿ ಮಹತ್ವವನ್ನು ಪಡೆದುಕೊಂಡಿದೆ ಎಂಬುದು ಮನವರಿಕೆ ಮಾಡಲು ಈ ಅಧಿವೇಶನ ಸಹಾಯಕವಾಗಬೇಕು.



# ಗ್ರಾಮ ಪಂಚಾಯಿತಿ ಸಂಪನ್ಮೂಲಗಳು

ಸಿ.ಎಸ್.ಆರ್

ದರಗಳು

ತೆರಿಗೆಗಳು

ದೇಣಿಗೆಗಳು

ಶುಲ್ಕಗಳು

ಪಂಚಾಯಿತಿ ಆಸ್ತಿಯ ಆದಾಯ

ದಾನಗಳು

ಕೊಡುಗೆಗಳು

ನಗದು ಪುರಸ್ಕಾರ



## ಉದ್ದೇಶ

ಗ್ರಾಮ ಪಂಚಾಯಿತಿಯ ಸ್ವಂತ ಮತ್ತು ಸ್ಥಳೀಯ ಸಂಪನ್ಮೂಲಗಳನ್ನು ಗುರುತಿಸುವುದು.

ಶಾಸನಬದ್ಧ ಅನುದಾನದ ಅವಕಾಶಗಳನ್ನು ಪರಿಚಯಿಸುವುದು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಅನುದಾನ ಲಭ್ಯತೆಯನ್ನು ತಿಳಿಯಪಡಿಸುವುದು.

## ಉಪ ವಿಷಯಗಳು

ಗ್ರಾಮ ಪಂಚಾಯಿತಿಯ ಸ್ವಂತ ಮತ್ತು ಸ್ಥಳೀಯ ಸಂಪನ್ಮೂಲಗಳು

15ನೇ ಹಣಕಾಸು ಆಯೋಗದ ಅನುದಾನ

ಶಾಸನಬದ್ಧ ಅನುದಾನ (ರಾಜ್ಯ ಹಣಕಾಸು ಆಯೋಗದ ಅನುದಾನ)

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಕೂಲಿಕಾರರ ಆಯವ್ಯಯ)

ಸ್ವಚ್ಛ ಭಾರತ್ ಮಿಷನ್

ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ನಿರ್ವಹಣಾ ವೆಚ್ಚ.

ಇತರೆ (ದಾನಗಳು, ಸಿ.ಎಸ್.ಆರ್., ನಗದು ಪುರಸ್ಕಾರಗಳು ಇತ್ಯಾದಿ)

## ವಿಧಾನ

ವಿಷಯ ಮಂಡನೆ

ವಿಡಿಯೋ ಚಿತ್ರ ಪ್ರದರ್ಶನ–ಪ್ರಶಿಕ್ಷಣಾರ್ಥಿಗಳ ಪ್ರತಿಕ್ರಿಯೆ–ಚರ್ಚೆ–ಕ್ರೋಢೀಕರಣ

ಗುಂಪುಚರ್ಚೆ ಮತ್ತು ಮಂಡನೆ

## ಸಮಯ

60 ನಿಮಿಷಗಳು

## ಪೂರಕ ಸಾಮಗ್ರಿಗಳು

ವಿಡಿಯೋ ಚಿತ್ರ


ಗುಂಪು ಚರ್ಚೆಗೆ ವಿಷಯ:

1) ಗ್ರಾಮ ಪಂಚಾಯಿತಿಯ ಸ್ವಂತ ಮತ್ತು ಸ್ಥಳೀಯ ಸಂಪನ್ಮೂಲಗಳು
2) ಶಾಸನಬದ್ಧ ಅನುದಾನ
3) ಅಭಿವೃದ್ಧಿ ಯೋಜನೆಗಳು

ಗುಂಪುಚರ್ಚೆ ಮತ್ತು ಮಂಡನೆ

## ನಿರೀಕ್ಷಿತ ಫಲಿತಾಂಶ

ಚುನಾಯಿತ ಪ್ರತಿನಿಧಿಗಳು ಗ್ರಾಮ ಪಂಚಾಯಿತಿ ಹಂತದಲ್ಲಿ ಲಭ್ಯವಿರುವ ವಿವಿಧ ಬಗೆಯ ಸ್ವಂತ ಮತ್ತು ಸ್ಥಳೀಯ ಸಂಪನ್ಮೂಲಗಳನ್ನು, ಶಾಸನಬದ್ಧ ಅನುದಾನದ ಅವಕಾಶಗಳನ್ನು ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಅರ್ಥಮಾಡಿಕೊಳ್ಳುವುದು.





## ಅಧಿವೇಶನ ಪ್ರಕ್ರಿಯೆ

ವಿವರಗಳನ್ನು ಕಾಯ್ದೆಯ ಪ್ರಕರಣ 199 ದೊಂದಿಗೆ ಪ್ರಾರಂಭಿಸಿ – ಏಕೆ ಹಾಗೂ ಹೇಗೆ ಸಂಪನ್ಮೂಲಗಳನ್ನು ಕ್ರೋಡೀರಿಸಬೇಕು ಎಂಬುದರ ಬಗ್ಗೆ ಸ್ಪಷ್ಟತೆ ನೀಡುವುದು

ಈ ಕುರಿತು ಎರಡು ಸುತ್ತೋಲೆಗಳು ಲಭ್ಯವಿದ್ದು ಅವುಗಳನ್ನು ವಿಮರ್ಶಿಸುವುದು.

ಶಾಸನಬದ್ದ ಅನುದಾನದ ಮಾನದಂಡಗಳನ್ನು ವಿವರಿಸುತ್ತಾ ಹೇಗೆ ಉಪಯೋಗಿಸಬೇಕೆಂದು ಚರ್ಚಿಸುವುದು.

ಲೇಬರ್ ಬಜೆಟ್‌ಗೆ ಸಂಬಂಧಿಸಿದಂತೆ ವಿವರಗಳನ್ನು ಗ್ರಾಮ ಪಂಚಾಯಿತಿ ಹಂತದಲ್ಲಿ ಹೇಗೆ ಲೆಕ್ಕ ಮಾಡಬಹುದು ಮತ್ತು ಇದನ್ನು ಬಳಕೆ ಮಾಡುವುದು ಹೇಗೆ ಎಂಬುದರ ಬಗ್ಗೆ ತಿಳಿಸುವುದು.

ಇಲಾಖಾ ಸರ್ವೆಗಳ ಆಧಾರಗಳ ಮೇಲೆ ಇದನ್ನು ಗ್ರಾಮ ಪಂಚಾಯಿತಿಗೆ ಹಂಚಿಕೆ ಆಗುತ್ತಿದ್ದು, ಇದರ ಅಂದಾಜು ಹಾಗೂ ಬಳಕೆಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸುವುದು.

ಇದನ್ನು ವಿಶೇಷವಾಗಿ ಬಳಕೆ ಮತ್ತು ಇದರಲ್ಲಿ ಚುನಾಯಿತ ಸದಸ್ಯರುಗಳ ಪಾತ್ರ ಏನು ಎಂದು ತಿಳಿಸುವುದು.

ಇತರೆ ಸಂಪನ್ಮೂಲಗಳ ಬಗ್ಗೆ ಉದಾಹರಣೆಗಳೊಂದಿಗೆ ವಿವರಿಸುವುದು ಸೂಕ್ತ.

ಗ್ರಾಮ ಪಂಚಾಯಿತಿ ಹಂತದ ವಿವಿಧ ಸಂಪನ್ಮೂಲಗಳ ಪಟ್ಟಿ ಸಿದ್ಧಪಡಿಸಿಟ್ಟುಕೊಳ್ಳುವುದು.

ಶಾಸನಬದ್ಧ ಅನುದಾನದ ಅವಕಾಶ ಮತ್ತು ವಿವಿಧ ಅಭಿವೃದ್ಧಿ ಯೋಜನೆಗಳ ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಳ್ಳುವುದು.

ಗುಂಪುಚರ್ಚೆಗೆ ನೀಡಬೇಕಾದ ವಿಷಯಗಳ ಪಟ್ಟಿ ಮತ್ತು ಪ್ರಶಿಕ್ಷಣಾರ್ಥಿಗಳಿಗೆ ನೀಡಬೇಕಾದ ಸೂಚನೆಗಳನ್ನು ಸಿದ್ಧಪಡಿಸಿಕೊಳ್ಳುವುದು.

ಆರಂಭದಲ್ಲಿ ಅಧಿವೇಶನದ ಉದ್ದೇಶ, ಗ್ರಾಮ ಪಂಚಾಯಿತಿ ಹಂತದ ಸಂಪನ್ಮೂಲಗಳು, ಶಾಸನಬದ್ಧ ಅನುದಾನ, ವಿವಿಧ ಅಭಿವೃದ್ಧಿ ಯೋಜನೆಗಳ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡುವುದು.

ನಂತರ ವಿಡಿಯೋ ಚಿತ್ರ ಪ್ರದರ್ಶಿಸುವುದು ಮತ್ತು ಅದಕ್ಕೆ ಪ್ರಶಿಕ್ಷಣಾರ್ಥಿಗಳ (ಮಹಿಳೆಯರು, ವಿಶೇಷ ಚೇತನರು, ದುರ್ಬಲವರ್ಗದವರು ಸೇರಿದಂತೆ) ಪ್ರತಿಕ್ರಿಯೆ ಕೇಳುವುದು. ಅವರಿಂದ ಬರುವ ಮಾಹಿತಿಪೂರ್ಣ ಅಂಶಗಳನ್ನು ಬೋರ್ಡ್ ಮೇಲೆ ಬರೆಯುವುದು. ಮಾಹಿತಿ ಅಪೂರ್ಣವಾದಲ್ಲಿ ತಮ್ಮಲ್ಲಿರುವ ಮಾಹಿತಿಯನ್ನು ಹಂಚಿಕೊಳ್ಳುವುದು.

ಪ್ರಶಿಕ್ಷಣಾರ್ಥಿಗಳನ್ನು 3 ತಂಡಗಳಾಗಿ ವಿಂಗಡಿಸಿ ಗುಂಪುಚರ್ಚೆ ಮಾಡಲು ತಿಳಿಸುವುದು. 3 ಪ್ರತ್ಯೇಕ ವಿಷಯಗಳನ್ನು ನೀಡಿ, ತಂಡದಲ್ಲಿ ಚರ್ಚಿಸಿ, ಸಂಪನ್ಮೂಲಗಳ ಪಟ್ಟಿ ಮಾಡಲು ತಿಳಿಸುವುದು. ಚರ್ಚೆಯ ನಂತರ 3 ತಂಡಗಳಿಗೂ ಮಂಡನೆಗೆ ಅವಕಾಶ ನೀಡುವುದು. ಬಿಟ್ಟುಹೋದ ಅಂಶಗಳನ್ನು ಸೇರ್ಪಡೆ ಮಾಡಿ, ಗ್ರಾಮ ಪಂಚಾಯಿತಿಗೆ ಲಭ್ಯವಿರುವ ಸಂಪನ್ಮೂಲಗಳ ಪೂರ್ಣ ಮಾಹಿತಿ ನೀಡುವುದು. ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಮನ್ವಯತೆಯಿಂದ ಹೆಚ್ಚಿನ ಪ್ರಮಾಣದ ಸಂಪನ್ಮೂಲ ಸಂಗ್ರಹಣೆ ಹಾಗೂ ಅದರ ಪರಿಣಾಮಕಾರಿ ಬಳಕೆಯ ಬಗ್ಗೆ ಮನವರಿಕೆ ಮಾಡಿ ಉಪಸಂಹಾರ ಮಾಡುವುದು.

ಪೂರಕ ಮಾಹಿತಿ

## ಗ್ರಾಮ ಪಂಚಾಯಿತಿಯ ಸ್ವಂತ ಮತ್ತು ಸ್ಥಳೀಯ ಸಂಪನ್ಮೂಲಗಳು

1. **ತೆರಿಗೆಗಳು** – ಕಟ್ಟಡಗಳು, ಖಾಲಿ ನಿವೇಶನಗಳು, ಜಾಹೀರಾತು ಫಲಕಗಳು, ಮೊಬೈಲ್ ಟವರ್‌ಗಳು, ಸೌರಶಕ್ತಿ ಘಟಕಗಳು, ಪವನ ಶಕ್ತಿ ಯಂತ್ರಗಳಿಗೆ ಪಂಚಾಯಿತಿ ವಿಧಿಸುವ ತೆರಿಗೆಗಳು
2. **ದರಗಳು ಮತ್ತು ಶುಲ್ಕಗಳು** – ಕುಡಿಯುವ ನೀರು ಪೂರೈಕೆ ದರ, ಮನರಂಜೆ ಶುಲ್ಕ, ಮಾರುಕಟ್ಟೆ ಶುಲ್ಕ, ವಾಹನ ನಿಲುಗಡೆ ಶುಲ್ಕ, ಪಶುಗಳ ನೊಂದಣಿ ಶುಲ್ಕ, ಜಾಹೀರಾತು, ಪ್ರಕಟಣಾ ಫಲಕಗಳ ಶುಲ್ಕ, ಜಾತ್ರೆ ಶುಲ್ಕ, ಲೈಸೆನ್ಸ್ ಶುಲ್ಕ, ಖಾಸಗಿ ಬಡಾವಣೆಗಳ ಅಭಿವೃದ್ಧಿ ಶುಲ್ಕ, ದಂಡ ಇತ್ಯಾದಿ
3. **ಪಂಚಾಯಿತಿ ಆಸ್ತಿಯ ಆದಾಯ** – ಜಾಗದ ಬಾಡಿಗೆ, ವಾಣಿಜ್ಯ ಮಳಿಗೆ, ವಸತಿಗೃಹ, ಜಾಗ ಮಾರಾಟದ ಆದಾಯ, ನೆಡುತೋಪು, ಗೋಮಾಳ, ಕೆರೆ, ಮರಳು ಇತ್ಯಾದಿಗಳ ಆದಾಯ
4. **ಇತರೆ** – ಸಾರ್ವಜನಿಕ ಕೊಡುಗೆಗಳು, ದಾನಗಳು, ದೇಣಿಗೆಗಳು, ಸಾಲಗಳು, ಸಿ.ಎಸ್.ಆರ್., ನಗದು ಪುರಸ್ಕಾರ ಇತ್ಯಾದಿ.

### ಶಾಸನಬದ್ಧ ಅನುದಾನ

1. ರಾಜ್ಯ ಹಣಕಾಸು ಆಯೋಗದ ಅನುದಾನ – ಸರ್ಕಾರ ಪ್ರತಿ ವರ್ಷ ಜನಸಂಖ್ಯೆಗೆ ಅನುಗುಣವಾಗಿ ವಿದ್ಯುತ್, ಬೀದಿ ದೀಪ, ನೀರು ಸರಬರಾಜು, ನೈರ್ಮಲ್ಯ, ನೀರಿನ ಮೂಲ ಸಂರಕ್ಷಣೆ, ಕಲ್ಯಾಣ ಕಾರ್ಯಕ್ರಮಗಳಿಗೆ ನೀಡುವ ಅನುದಾನ.
2. 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಪಂಚಾಯಿತಿಯ ಜನಸಂಖ್ಯೆಗೆ ಅನುಗುಣವಾಗಿ ನೀಡುವ ಹಣಕಾಸು ಆಯೋಗದ ಅನುದಾನ. ಈ ಅನುದಾನ ಬಿಡುಗಡೆಗೆ 85:10:5 ಎಂಬ ಸೂತ್ರವನ್ನು ಅಳವಡಿಸಲಾಗಿದೆ. ಅಂದರೆ, ಶೇ.85 ರಷ್ಟನ್ನು ಗ್ರಾಮ ಪಂಚಾಯಿತಿಗೆ, ಶೇ.10 ರಷ್ಟನ್ನು ತಾಲ್ಲೂಕು ಪಂಚಾಯಿತಿಗೆ ಮತ್ತು ಶೇ.5 ರಷ್ಟನ್ನು ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡಲಾಗುತ್ತದೆ.

### ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಅನುದಾನ

**1. ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು**

ಕುಡಿಯುವ ನೀರು ಸರಬರಾಜು ಮತ್ತು ನಿರ್ವಹಣೆ ಯೋಜನೆ

ವಸತಿ ಯೋಜನೆಗಳು– ಅಂಬೇಡ್ಕರ್ ವಸತಿ ಯೋಜನೆ, ಬಸವ ವಸತಿ ಯೋಜನೆ

**2. ಕೇಂದ್ರ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು**


ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಕೂಲಿಕಾರರ ಆಯವ್ಯಯ)

ಸ್ವಚ್ಛ ಭಾರತ್ ಮಿಷನ್

ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ನಿರ್ವಹಣಾ ವೆಚ್ಚ.

### ಹದಿನೈದನೇ ಹಣಕಾಸು ಆಯೋಗದ ಅನುದಾನ

ಭಾರತದ ಸಂವಿಧಾನದಲ್ಲಿನ 280ನೇ ಪರಿಚ್ಛೇದದನ್ವಯ ಹಣಕಾಸು ಆಯೋಗದ ರಚನೆಗೆ ಅವಕಾಶ ಕಲ್ಪಿಸಲಾಗಿದೆ. ಇದು ಒಬ್ಬರು ಅಧ್ಯಕ್ಷರು ಮತ್ತು ನಾಲ್ಕು ಮಂದಿ ಸಹ ಸದಸ್ಯರುಗಳನ್ನು ಒಳಗೊಂಡಿದೆ. ಪ್ರತಿ ಹಣಕಾಸು ಆಯೋಗದ ಕಾಲಾವಧಿ ಐದು





ವರ್ಷ. ಇಲ್ಲಿ ರಾಷ್ಟ್ರ ಮತ್ತು ರಾಜ್ಯಗಳ ಹಣಕಾಸಿನ ವಿಚಾರಗಳನ್ನು ವ್ಯಾಖ್ಯಾನಿಸಲು ಅವಕಾಶ ನೀಡಲಾಗಿದೆ. ಪ್ರಸ್ತುತ 15ನೇ ಹಣಕಾಸು ಆಯೋಗದ ರಚನೆಯಾಗಿದೆ. ಇದರ ಅವಧಿಯು 1ನೇ ಏಪ್ರಿಲ್ 2020ರಿಂದ ಆರಂಭವಾಗಿದ್ದು, ಮುಂದಿನ ಐದು ವರ್ಷಗಳವರೆಗೆ ಇರುತ್ತದೆ.

**ಹದಿನೈದನೇ ಹಣಕಾಸು ಆಯೋಗದ ವರದಿಯನ್ವಯ ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಿರುವ ಅನುದಾನದ ಬಗ್ಗೆ ಈ ಕೆಳಗಿನಂತೆ ವಿವರಿಸಿದೆ.**

- ಅನುದಾನ ಹಂಚಿಕೆಗೆ ಹದಿನಾಲ್ಕನೇ ಹಣಕಾಸು ಆಯೋಗದಂತೆಯೇ, ನಿಗದಿತ ಪ್ರದೇಶದ ಒಟ್ಟು ಜನಸಂಖ್ಯೆ ಮತ್ತು ಅದರ ಒಟ್ಟು ಭೌಗೋಳಿಕ ಪ್ರದೇಶವನ್ನು, 90 ಮತ್ತು 10ರ ಅನುಪಾತದಲ್ಲಿ ಕ್ರಮವಾಗಿ ಪರಿಗಣಿಸಲಾಗಿದೆ.
- ಮೂರು ಸ್ತರದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಅದರಿಂದಾಗಿ, ದೀರ್ಘಕಾಲಿಕ ಸಮುದಾಯ ಆಸ್ತಿಗಳ ಸೃಜನೆ ಮತ್ತು ಸದರಿ ಸ್ತರದ ಸಂಸ್ಥೆಯ ಕಾರ್ಯಗಳ ಪ್ರಚೂರತೆಯನ್ನು ಹೆಚ್ಚಿಸುವುದು.
- ರಾಜ್ಯ ಮತ್ತು ಕೇಂದ್ರ ಪುರಸ್ಕೃತ ಕಾರ್ಯಕ್ರಮದ ಅನುದಾನವನ್ನು ಹೊರತುಪಡಿಸಿ, ಹೆಚ್ಚಿನ ನಿರ್ಬಂಧಿತ ಅನುದಾನವನ್ನು ವಿಮರ್ಶಾತ್ಮಕ ವಲಯಗಳಾದ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಒದಗಿಸುವುದು.
- ರಾಜ್ಯದಲ್ಲಿ 85:10:5 ಎಂಬ ಸೂತ್ರವನ್ನು ಅಳವಡಿಕೆ ಮಾಡಿಕೊಂಡು ಅನುದಾನ ಬಿಡುಗಡೆಗೆ ಆದೇಶಿಸಲಾಗಿದೆ. 85 ಪ್ರತಿಶತ ಗ್ರಾಮ ಪಂಚಾಯಿತಿಗೆ, 10 ಪ್ರತಿಶತ ತಾಲ್ಲೂಕು ಪಂಚಾಯಿತಿಗೆ ಮತ್ತು 5 ಪ್ರತಿಶತ ಅನುದಾನವನ್ನು ಜಿಲ್ಲಾ ಪಂಚಾಯಿತಿಗೆ ಬಿಡುಗಡೆಗೊಳಿಸಲು ದಿನಾಂಕ 13–05–2020ರ ಸರ್ಕಾರದ ಆದೇಶದಲ್ಲಿ ಹೊರಡಿಸಿದೆ.
- ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡುವ ಮೂಲ ಅನುದಾನದ 50 ಪ್ರತಿಶತವು ನಿರ್ಬಂಧಿತ ಅನುದಾನವಾಗಿರುತ್ತದೆ. ಅದರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಈ ಮೇಲೆ ತಿಳಿಸಿರುವ ವಿಮರ್ಶಾತ್ಮಕ ವಲಯಗಳಿಗೆ ಸಂಬಂಧಿಸಿದಂತೆ ವಿನಿಯೋಗಿಸಬೇಕಿರುತ್ತದೆ. ಕುಡಿಯುವ ನೀರಿನ ಸರಬರಾಜು, ಮಳೆ ನೀರು ಕೊಯ್ಲು, ನೀರು ಮರುಪೂರಣ ಮತ್ತು ಸಂರಕ್ಷಣೆಗೆ ಸಂಬಂಧಿತ ಕೆಲಸಗಳು ಹಾಗೂ ನೈರ್ಮಲ್ಯೀಕರಣ ಸೇವೆಗಳು ಉತ್ತಮಪಡಿಸಲು, ಬಯಲು ಬಹಿರ್ದೆಸೆ ಮುಕ್ತಗೊಳಿಸಿ ಸುಸ್ಥಿರತೆಯನ್ನು ಕಾಯ್ದುಕೊಳ್ಳಲು ಇರುವ ಕೆಲಸಗಳನ್ನು ಮಾತ್ರವೇ ಕೈಗೊಳ್ಳಬೇಕಿರುತ್ತದೆ.
- ಒಂದು ಪಕ್ಷದಲ್ಲಿ, ಕುಡಿಯುವ ನೀರು ಅಥವಾ ನೈರ್ಮಲ್ಯೀಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಚಟುವಟಿಕೆಗಳು ಪೂರ್ಣಗೊಂಡಿದ್ದರೆ (Saturate) ಅಂತಹ ಗ್ರಾಮ ಪಂಚಾಯಿತಿಗಳು ಕೇವಲ ಮತ್ತೊಂದು ಅಂಶಕ್ಕೆ ಮಾತ್ರ ಯೋಜನೆಯನ್ನು ರೂಪಿಸಿ, ಅನುಷ್ಠಾನಿಸುವುದು.
- ಕುಡಿಯುವ ನೀರಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರವು ಸೂಚಿಸಿರುವ ಜಲ ಜೀವನ್ ಮಿಷನ್(ಜೆ.ಜೆ.ಎಂ.) ಯೋಜನೆಯಡಿ ಅನುಷ್ಠಾನ ಮಾಡಲು ತಿಳಿಸಲಾಗಿರುತ್ತದೆ. ಅದರಂತೆ, ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಕುಡಿಯುವ ನೀರಿನ ಪ್ರಸ್ತುತ ವ್ಯವಸ್ಥೆಯ ಸಮೀಕ್ಷೆಯನ್ನು ಸಂಬಂಧಿಸಿದ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದವರು ಕೈಗೊಂಡು, ಅದರನ್ವಯ ಹಂತಹಂತವಾಗಿ ಜಿಲ್ಲೆಯ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರಿನ ಸೇವೆಯನ್ನು ಸಂಪೂರ್ಣಗೊಳಿಸುವ ಉದ್ದೇಶ ಹೊಂದಿದೆ. ಅದಕ್ಕಾಗಿ ಅಗತ್ಯಕ್ರಮಗಳನ್ನು ಕೈಗೊಳ್ಳಲು ತಿಳಿಸಿದೆ. ಈ ಸೇವೆಯನ್ನು ಪಡೆಯಲು ಅಗತ್ಯವಿರುವ ಅನುದಾನವನ್ನು ಗ್ರಾಮ ಪಂಚಾಯಿತಿಗಳು ತಮ್ಮ ಹದಿನೈದನೇ ಹಣಕಾಸು ಆಯೋಗದ ಅನುದಾನದಿಂದ ಭರಿಸಬಹುದಾಗಿರುತ್ತದೆ.
- ಅನುದಾನದ ಬಳಕೆಯಲ್ಲಿ ಮೂರು ಸ್ತರದ ಸಂಸ್ಥೆಗಳು ಚರ್ಚಿಸಿ, ಅಗತ್ಯವಿರುವ ಎಲ್ಲಾ ಕಾಮಗಾರಿಗಳು ಮತ್ತು ಬೃಹತ್ ಕಾಮಗಾರಿಗಳನ್ನು ಒಗ್ಗೂಡಿಸುವಿಕೆಯ ಮೂಲಕ ಕೈಗೊಳ್ಳಬಹುದಾಗಿದೆ.
- ಸರ್ಕಾರದ ಆದೇಶದೊಂದಿಗೆ ನೀಡಿರುವ ಕಾಮಗಾರಿಗಳನ್ನು ಹೊರತುಪಡಿಸಿ, ಬೇರೆ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾದಲ್ಲಿ, ಕಡ್ಡಾಯವಾಗಿ ಸರ್ಕಾರಕ್ಕೆ ಪ್ರಸ್ತಾವನೆ ನೀಡಿ, ಅನುಮೋದನೆ ಪಡೆದು ಮುಂದಿನ ಕ್ರಮವಹಿಸುವುದು.

- ❖ ಈ ಅನುದಾನಕ್ಕೆ ಸಂಬಂಧಿಸಿದಂತೆ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವ ಬೇಕಿರುತ್ತದೆ. ಪ್ರಸಕ್ತ ಸಾಲಿನ ಕ್ರಿಯಾಯೋಜನೆಯನ್ನು ಈಗಾಗಲೇ ಗ್ರಾಮಸಭೆಗಳ ಮೂಲಕ ಗ್ರಾಮ ಪಂಚಾಯಿತಿಗಳು ಜಿಪಿಡಿಪಿಯಲ್ಲಿ ಅಳವಡಿಸಿರುವುದು ಸರಿಯಷ್ಟೇ. ಆಯೋಗದ ಅನುದಾನದ ಮಾರ್ಗಸೂಚಿಯನ್ವಯ ಪರಿಷ್ಕರಣೆ ಮಾಡುವ ಅವಕಾಶವನ್ನು ಈಗ ಗ್ರಾಮ ಪಂಚಾಯಿತಿಗಳಿಗೆ ಭಾರತ ಸರ್ಕಾರವು ನೀಡಿದೆ.
- ❖ ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಪತ್ರದನ್ವಯ, ಪ್ರಸ್ತುತವಾಗಿ ಕೊರೋನಾ ವೈರಸ್‌ನ ಸಮಸ್ಯೆಯು ರಾಷ್ಟ್ರ ವ್ಯಾಪಿ ಇರುವುದರಿಂದ ಗ್ರಾಮಸಭೆ ಆಯೋಜನೆಯು ಕಷ್ಟಸಾಧ್ಯವಾಗಿರುತ್ತದೆ. ಹಾಗಾಗಿ, ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮ ಹಂತದ ಸಾಮಾನ್ಯ ಸಭೆಗಳಲ್ಲಿ ಕ್ರಿಯಾ ಯೋಜನೆಯನ್ನು ಚರ್ಚಿಸಿ, ಅನುಮೋದನೆ ಪಡೆಯುವುದು. ಪರಿಸ್ಥಿತಿ ಶಮನಗೊಂಡ ನಂತರದಲ್ಲಿ ಗ್ರಾಮಸಭೆಗಳನ್ನು ನಡೆಸಿ, ಕ್ರಿಯಾಯೋಜನೆಗೆ ದೃಢೀಕರಣ ಪಡೆಯುವುದು.
- ❖ ಈ ಯೋಜನೆಯ ಅನುದಾನದ ಕಾಮಗಾರಿಗಳ ವಿವರಕ್ಕೆ ಸಂಬಂಧಿಸಿದ ಯೋಜನೆ, ಅನುಷ್ಠಾನ ಮತ್ತು ಪಾವತಿಗಳನ್ನು ಜಿಪಿಡಿಪಿ ಪೋರ್ಟ್‌ಲ್ ಮತ್ತು ಇ–ಗ್ರಾಮಸ್ವರಾಜ್ ಪೋರ್ಟ್‌ಲ್‌ನ ಮೂಲಕವೇ ಕಡ್ಡಾಯವಾಗಿ ಕ್ರಮವಹಿಸುವುದು.
- ❖ ಕ್ರಿಯಾ ಯೋಜನೆಯನ್ನು ಸಂಬಂಧಿಸಿದ ಹಂತದ ಸಭೆಯಲ್ಲಿ ಅಂತಿಮಗೊಳಿಸಿದ ನಂತರ ಯಾವುದೇ ಮೇಲಿನ ಹಂತದ ಸಂಸ್ಥೆ ಅಥವಾ ಅಧಿಕಾರಿಗಳ ಅನುಮೋದನೆಯ ಅಗತ್ಯವಿರುವುದಿಲ್ಲ. ಆದರೆ, ಕ್ರಿಯಾ ಯೋಜನೆ ಸಿದ್ಧಪಡಿಸುವ ಸಂದರ್ಭದಲ್ಲಿ ಯೋಜನೆಯ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದು. ಸಂಬಂಧಿಸಿದ ಹಂತದ ಅಧಿಕಾರಿಗಳಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಯೋಜನೆಯ ಮಾರ್ಗಸೂಚಿ ಉಲ್ಲಂಘನೆಯಾಗದಂತೆ ಜಾಗರೂಕತೆಯಿಂದ ಕ್ರಿಯಾ ಯೋಜನೆ ಸಿದ್ಧಪಡಿಸಲು ತಿಳಿಸಿದೆ.
- ❖ ರಾಜ್ಯ ಸರ್ಕಾರದ ಮತ್ತು ಅಧಿನಿಯಮದ ಪ್ರಕಾರ ಒಟ್ಟು ಅನುದಾನದ 25 ಪ್ರತಿಶತ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿರಿಸುವುದು ಮತ್ತು 5% ಅನುದಾನವನ್ನು ವಿಕಲಚೇತನರುಗಳ ಶ್ರೇಯೋಭಿವೃದ್ಧಿಗಾಗಿ ಮೀಸಲಿರಿಸಲು ಸೂಚಿಸಿದೆ (ಇದರಲ್ಲಿ ವೈಯಕ್ತಿಕ ಸೌಲಭ್ಯಗಳನ್ನು ಒದಗಿಸಲು ಅವಕಾಶವಿರುವುದಿಲ್ಲ).
- ❖ ಈ ಅನುದಾನದಡಿ ಕೈಗೊಳ್ಳುವ ಎಲ್ಲಾ ಕಾಮಗಾರಿಗಳನ್ನು ಸಾಮಾಜಿಕ ಲೆಕ್ಕಪರಿಶೋಧನೆಗೆ ಒಳಪಡಿಸಬೇಕಿರುತ್ತದೆ.

## ಉಪ ಸಂಹಾರ

ಗ್ರಾಮದ ಅವಶ್ಯಕತೆಗಳನ್ನು ಮತ್ತು ಬೇಡಿಕೆಗಳನ್ನು ಸ್ಥಳೀಯ ಸರ್ಕಾರವಾಗಿ ಈಡೇರಿಸಲು ಅಗತ್ಯವಿರುವ ಅನುದಾನಗಳನ್ನು ಕೇಂದ್ರ, ರಾಜ್ಯ ಸರ್ಕಾರದ ಕಾರ್ಯಕ್ರಮಗಳು ಮತ್ತು ಸ್ವಂತ ಸಂಪನ್ಮೂಲಗಳ ಲಭ್ಯತೆ ಹಾಗೂ ಕ್ರೋಢೀಕರಣ ಮಾಡಲು ಅಗತ್ಯವಿರುವ ಮಾಹಿತಿ ನೀಡುವುದು. ಸ್ವಂತ ಮತ್ತು ಸ್ಥಳೀಯ ಸಂಪನ್ಮೂಲಗಳ ಸಂಗ್ರಹಕ್ಕೆ ಪ್ರೇರೇಪಣೆ ನೀಡುವುದು ಈ ಅಧಿವೇಶನದಿಂದ ಸಾಧ್ಯವಾಗಬೇಕು.



ಅಧಿವೇಶನ –11

# ಗ್ರಾಮ ಪಂಚಾಯಿತಿ ಸಭೆಗಳು, ಸ್ಥಾಯಿ ಸಮಿತಿಗಳು, ಉಪ ಸಮಿತಿಗಳು ಮತ್ತು ಕೆ.ಡಿ.ಪಿ. ಸಭೆ



## ಉದ್ದೇಶ

- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಂಘಟಿಸಲಾಗುವ ಸಾಮಾನ್ಯ ಸಭೆಗಳು ಮತ್ತು ವಿಶೇಷ ಸಭೆಗಳ ಸಂಘಟನೆಯ ಮಹತ್ವ  ಕುರಿತು ಸದಸ್ಯರಲ್ಲಿ ಅರಿವು ಮೂಡಿಸುವುದು.
- ಹಾಗೆಯೇ ಸ್ಥಾಯಿ ಸಮಿತಿಗಳ ರಚನೆ ಮತ್ತು ಮಹತ್ವವನ್ನು ಮನಗಾಣಿಸುವುದು.
- ಗ್ರಾಮ ಪಂಚಾಯಿತಿ ಮಟ್ಟದ ಕೆ.ಡಿ.ಪಿ. ಸಭೆಯ ಮಹತ್ವ ಮತ್ತು ಪರಿಣಾಮಕತೆಯನ್ನು ಅರ್ಥ ಮಾಡಿಸುವುದು.

## ಉಪ ವಿಷಯಗಳು

- ಸಾಮಾನ್ಯ ಸಭೆಗಳು
- ವಿಶೇಷ ಸಭೆಗಳು
- ಸ್ಥಾಯಿ ಸಮಿತಿಗಳು
- ಉಪ ಸಮಿತಿಗಳು
- ಕೆಡಿಪಿ ಸಭೆಗಳು

## ವಿಧಾನ

ವಿಷಯ ಮಂಡನೆ

ಅಣುಕು ಸಭೆಯ ಪ್ರಾತ್ಯಕ್ಷತೆ

ತ್ವರಿತ ಪ್ರಕ್ರಿಯೆ

## ಸಮಯ


75 ನಿಮಿಷಗಳು

## ಪೂರಕ ಸಾಮಗ್ರಿಗಳು

ಪಿ.ಪಿ.ಟಿ, ಸಿಡಿ, ಚಾರ್ಟ್‌ಗಳು, ಬಣ್ಣದ ಮಾರ್ಕರ್ ಪೆನ್ನುಗಳು, ಪೇಪರ್ಸ್,  ಕೆ.ಜಿ ಶೀಟ್ಸ್,  ಟೇಬಲ್ ಮತ್ತು ಖುರ್ಚಿಗಳು.

## ನಿರೀಕ್ಷಿತ ಫಲಿತಾಂಶ

- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆಗಳನ್ನು ಸಮರ್ಥವಾಗಿ ನಿರ್ವಹಿಸುವ ಮತ್ತು ಸೂಕ್ತ ನಿರ್ಧಾರಗಳನ್ನು ಕೈಗೊಂಡು ಜಾರಿಗೊಳಿಸುವ ಮೂಲಕ ಜನಸ್ನೇಹಿ ಮತ್ತು ಉತ್ತರದಾಯಿತ್ವ ಹೊಂದಿದ ಆಡಳಿತವನ್ನು ನೀಡಲು ಸಮರ್ಥರಾಗುವುದು.
- ಸ್ಥಾಯಿ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರುಗಳ ಜವಾಬ್ದಾರಿಗಳ ಹಂಚಿಕೆ ಮತ್ತು ಅಧಿಕಾರಿಗಳ ಉತ್ತರದಾಯಿತ್ವ ಕುರಿತು ಅರಿಯುವರು. ಸಭೆಗಳ ನಿರ್ಣಯಗಳ ಕುರಿತಂತೆ ಸ್ಥಾಪಿತ ಹಿತಾಸಕ್ತಿಗಳು ಹಾಗೂ ಗುಂಪುಗಾರಿಕೆ ಬಗೆಗೆ ಸದಸ್ಯರುಗಳು ಸಂವೇದನಶೀಲತೆಯನ್ನು ರೂಢಿಸಿಕೊಳ್ಳುವರು.
- ವಿವಿಧ ರೀತಿಯ ಸ್ಥಾಯಿ ಸಮಿತಿಗಳು ಮತ್ತು ಉಪಸಮಿತಿಗಳ ಮೂಲಕ ಸಮುದಾಯದ ಪ್ರತಿನಿಧಿಗಳು ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮನವರಿಕೆ ಮಾಡಲು ಪ್ರೇರಣೆ ಪಡೆಯುವರು.
- ಸದಸ್ಯರುಗಳು ತಮ್ಮ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಹೆಚ್ಚಿನ ಅರಿವನ್ನು ಪಡೆದು ಸಮಿತಿಗಳನ್ನು ಅರ್ಥಪೂರ್ಣವಾಗಿ ಆಯೋಜಿಸಲು ಸಜ್ಜುಗೊಳ್ಳುವರು.
- ವಿವಿಧ ಇಲಾಖೆಗಳು ಮತ್ತು ಯೋಜನೆಗಳ ಪ್ರಗತಿ ಪರಿಶೀಲನೆಯ ಮಹತ್ವವನ್ನು ಮನಗಾಣುವರು.






ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನಿಯಮಿತವಾಗಿ ಆಯೋಜಿಸಬೇಕಾದ ಸಭೆಗಳು ಮತ್ತು ಸ್ಥಾಯಿ ಸಮಿತಿಗಳ ಕುರಿತು ಪಿ.ಪಿ.ಟಿ/ಸಿ.ಡಿ/ಚಾರ್ಟುಗಳನ್ನು ಬಳಸಿ ವಿಷಯ ಮಂಡನೆ ಮಾಡುವುದು.

ಸಾಮಾನ್ಯ ಸಭೆಗಳು, ವಿಶೇಷ ಸಭೆಗಳು, ಸ್ಥಾಯಿ ಸಮಿತಿಗಳು, ಉಪ ಸಮಿತಿಗಳುಮತ್ತು ಕೆಡಿಪಿ ಸಭೆಗಳ ಆಯೋಜನೆ, ಮಹತ್ವ, ಸದಸ್ಯರುಗಳು, ಅಧ್ಯಕ್ಷರು ಹಾಗು ಅಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳನ್ನುಮನನ ಮಾಡಿಸುವುದು.

ಗ್ರಾಮ ಪಂಚಾಯಿತಿ ವ್ಯಾಪ್ತಿಯಡಿ ಬರುವ ವಿವಿಧ ಇಲಾಖೆಗಳು, ಇಲಾಖಾ ಕಾರ್ಯಕ್ರಮಗಳು ಮತ್ತು ಯೋಜನೆಗಳ ಕುರಿತು ಮನವರಿಕೆ ಮಾಡುವುದು.

ವಿಷಯ ಮಂಡನೆ ಮತ್ತು ಚರ್ಚೆಯ ನಂತರ ಸಾಮಾನ್ಯ ಸಭೆಯ ಅಣುಕು ಪ್ರದರ್ಶನವನ್ನು ನೀಡಲು ಸದಸ್ಯರುಗಳನ್ನು ಕೋರುವುದು. ಇದಕ್ಕಾಗಿ ಸಿದ್ದತೆಗೆಂದು 10 ನಿಮಿಷಗಳ ಸಮಯ ನಿಡುವುದು. ಸಾಮಾನ್ಯ ಸಬೆಯಲ್ಲಿ ಪಾಲಿಸಬೆಕಾದ ನಿಯಮಗಳು, ಭಾಗವಹಿಸುವಿಕೆ, ನಿರ್ಣಯ ತಳೆಯುವಿಕೆ ಮೊದಲಾದವುಗಳ ಕುರಿತು ಗಮನ ಹರಿಸಲು ಸುಚನೆ ನೀಡುವುದು.

ಅಣುಕು ಸಭೆಯ ಪ್ರದರ್ಶನಕ್ಕೆ 15 ನಿಮಿಷ ನೀಡುವುದು. ನಂತರ ಗುಂಪಿನಿಂದ ಗಮನಿಸಿದ ಅಂಶಗಳ ಕುರಿತು ಮಾಹಿತಿ ಪಡೆಯುವುದು. ಕೊನೆಯಲ್ಲಿ ಸುಗಮಕಾರರು ಸರಿ, ತಪ್ಪುಗಳನ್ನು ವಿಶ್ಲೇಷಿಸಿ, ಸಾಮಾನ್ಯ ನೀತಿ, ನಿಯಮಗಳನ್ನು ಮತ್ತೊಮ್ಮೆ ಮನನ ಮಾಡಿಸುವುದು.

ಸುಗಮಕಾರರು ವಿಷಯ ಮಂಡನೆಯ ಅಂಶಗಳನ್ನು ಆಲಿಸಿ ಅರ್ಥೈಸಿಕೊಳ್ಳಲು ಪ್ರಶಿಕ್ಷಣಾರ್ಥಿಗಳಿಗೆ ನೆರವಾಗುವುದು.

ಸಭಾ ನಿಯಮಗಳ ಪರಿಪಾಲನೆಯ ಅವಶ್ಯಕತೆ ಮತ್ತು ಅದರಿಂದ ಆಡಳಿತ ನಿರ್ವಹಣೆಯಲ್ಲಿ ಸಾಧಿಸಿಬಹುದಾದ ಪ್ರಗತಿ ಅಂಶಗಳಿಗೆ ಒತ್ತು ನೀಡುವುದು.

ಸ್ಥಾಯಿ ಸಮಿತಿಗಳ ಬಗ್ಗೆ ವಿವರಿಸುವಾಗ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಗಳಿಗೆ ಪೂರ್ವಭಾವಿಯಾಗಿ ಸ್ಥಾಯಿ ಸಮಿತಿಗಳ ಸಭೆಗಳು ಏಕೆ ನಡೆಯಬೇಕು ಎಂಬುದನ್ನು ಶಿಬಿರಾರ್ಥಿಗಳಿಗೆ ಮನವರಿಕೆ ಮಾಡುವುದು.

ಪ್ರಶಿಕ್ಷಣಾರ್ಥಿಗಳು ಕೇಳುವ ಪ್ರಶ್ನೆಗಳಿಗೆ ಸ್ಥಳೀಯ ಮಟ್ಟದ ಪರಿಹಾರ ಕಂಡುಕೊಳ್ಳುವುದು. ಉತ್ತರಿಸಲಾಗದ ಅಂಶಗಳನ್ನು ದಾಖಲಿಸಿಕೊಂಡು, ಸಂಬಂಧಿಸಿದವರಿಂದ ಸ್ಪಷ್ಟನೆ ಪಡೆದು ತರಬೇತಿ ಮುಗಿಯುವ ಮುನ್ನ ಮಾಹಿತಿ ನೀಡುವುದು.

ಗ್ರಾಮ ಪಂಚಾಯಿತಿಯಡಿ ಬರುವ ಪ್ರಮುಖ ಐದು ಇಲಾಖೆಗಳ ಪ್ರಗತಿ ಪರಿಶೀಲನೆ ಮಾಡುವ ಸಂದರ್ಭದಲ್ಲಿ ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳ ಕುರಿತು ಚರ್ಚಿಸುವುದು.




## ಗ್ರಾಮ ಪಂಚಾಯಿತಿ ಸಭೆಗಳು

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಿಂದ ಆಯ್ಕೆಯಾದ ಚುನಾಯಿತ ಸದಸ್ಯರುಗಳು ತಾವು ತೆಗೆದುಕೊಳ್ಳುವ ಎಲ್ಲಾ ನಿರ್ಧಾರಗಳಿಗೆ ತಾವೆಲ್ಲರೂ ಜವಾಬ್ದಾರರು ಎಂಬ ವೈಯಕ್ತಿಕ ಪಾಲುದಾರಿಕೆಯನ್ನು ಹೊಂದಿದೆ.ಜನಪರ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಸ್ಥಳೀಯ ಆಡಳಿತದ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಲುವಾಗಿ ಗ್ರಾಮ ಪಂಚಾಯತಿಯು ಸಭೆಗಳು ಹಾಗೂ ಸಮಿತಿಗಳ ಮೂಲಕ ನಿರ್ಣಯ ತೆಗೆದುಕೊಂಡು ಕಾರ್ಯನಿರ್ವಹಿಸುತ್ತದೆ. ಜನರ ಆಶೋತ್ತರಗಳನ್ನು ಪರಿಣಾಮಕಾರಿಯಾಗಿ ಈಡೇರಿಸಲು ಸಭೆಗಳನ್ನು ಯಶಸ್ವಿಯಾಗಿ ನಡೆಸುವ ಅಗತ್ಯವಿದೆ.

ಅಭಿವೃದ್ಧಿಯ ನಿಟ್ಟಿನಲ್ಲಿ ನಿರ್ಧಾರಗಳನ್ನು ಪಾರದರ್ಶಕವಾಗಿ ಕೈಗೊಳ್ಳುವಲ್ಲಿ ಗ್ರಾಮ ಪಂಚಾಯತಿ ಸಭೆಗಳು ಮಹತ್ವವನ್ನು ಪಡೆಯುತ್ತವೆ. ಸರ್ಕಾರ ಕಾಯಿದೆ ಬದ್ಧವಾಗಿ ಸಭೆಗಳನ್ನು ನಡೆಸಲು ಗ್ರಾಮ ಪಂಚಾಯತಿಗೆ ಅಧಿಕಾರ ಕೊಟ್ಟಿದೆ.ಈ ಅಧಿಕಾರವನ್ನು ಬಳಸುವ ಮೂಲಕ ಗ್ರಾಮ ಪಂಚಾಯತಿ ಸದಸ್ಯರು ನಿಯಮಿತವಾಗಿ ಸಭೆಗಳನ್ನು ನಡೆಸಬೇಕು.ಸಭೆಗಳಲ್ಲಿ ಆರೋಗ್ಯಕರವಾದ ಚರ್ಚೆಯನ್ನು ನಡೆಸಬೇಕು.ಸಾರ್ವಜನಿಕರಿಗೆ ಉಪಯುಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು.

**ಗ್ರಾಮ ಪಂಚಾಯಿತಿ ಸಭೆಗಳ ವಿಧಗಳು**

1) ಸಾಮಾನ್ಯ ಸಭೆ 2) ವಿಶೇಷ ಸಭೆ

**1) ಸಾಮಾನ್ಯ ಸಭೆ**

ಪ್ರತಿ ತಿಂಗಳು ಕನಿಷ್ಟ ಒಂದು ಸಾಮಾನ್ಯ ಸಭೆಯನ್ನು ನಡೆಸಬೇಕು. ಅಧ್ಯಕ್ಷರು ಸದಸ್ಯರೊಂದಿಗೆ ಚರ್ಚಿಸಿ ಸಭೆಯ ಸಮಯವನ್ನು ನಿರ್ಧರಿಸಬಹುದು. ಸಾಮಾನ್ಯ ಸಭೆಗೆ ನಿರ್ದಿಷ್ಟ ಉದ್ದೇಶ ಇರಬೇಕು.ಉದ್ದೇಶಕ್ಕೆ ಅನುಗುಣವಾಗಿ ಕಾರ್ಯಸೂಚಿ (ಅಜೆಂಡಾ) ಸಿದ್ಧಪಡಿಸಬೇಕು.ಅಜೆಂಡಾಕ್ಕೆ ಅನುಗುಣವಾಗಿ ಸಭಾ ಕಲಾಪಗಳನ್ನು ನಡೆಸಬೇಕು.ಸಭೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಸಭೆಗಳಲ್ಲಿನ ಕಾರ್ಯವಿಧಾನ) 1994 ರಲ್ಲಿನ ನಿಯಮಗಳಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿದೆ.

**ಸಭೆಯ ಪೂರ್ವ ತಯಾರಿಗಳು ಮತ್ತು ವಿಧಾನ:**

1. ಸದಸ್ಯರಿಗೆ/ ಅಧಿಕಾರಿಗಳಿಗೆ ಸಭೆಯ ನೋಟೀಸು (ಸಭೆಯ ಸೂಚನಾ ಪತ್ರ)
2. ಕಾರ್ಯಸೂಚಿ (ಅಜೆಂಡಾ) ತಯಾರಿಕೆ
3. ಸಾಮಾನ್ಯ ಸಭೆಗೆ ಕೋರಂ ಮತ್ತು ಕಾರ್ಯವಿಧಾನ
4. ಸಭೆಯಲ್ಲಿ ಪಾಲಿಸಬೇಕಾದ ನಿಯಮಗಳು
5. ಗ್ರಾಮ ಪಂಚಾಯಿತಿ ಸಭೆಯಲ್ಲಿ ಸಾರ್ವಜನಿಕರ ಭಾಗವಹಿಸುವಿಕೆ
6. ಗೊತ್ತುವಳಿಗಳು 7. ನಿರ್ಣಯಗಳು 8. ಅಡ್ಡ ಪ್ರಶ್ನೆಗಳು 9. ನಡವಳಿ ಪುಸ್ತಕ


**2) ವಿಶೇಷ ಸಭೆ:**

ಗ್ರಾಮ ಪಂಚಾಯತ್ ಅಧ್ಯಕ್ಷರು ತಮಗೆ ಅವಶ್ಯವೆಂದು ಭಾವಿಸಿದಾಗ ಮತ್ತು ಗ್ರಾಮ ಪಂಚಾಯತ್‌ನ ಒಟ್ಟು ಸದಸ್ಯರ ಮೂರನೇ ಒಂದು ಭಾಗ(1/3)ದಷ್ಟು ಕಡಿಮೆಯಿಲ್ಲದ ಸದಸ್ಯರು ವಿಶೇಷ ಸಭೆ ನಡೆಸಲು ಲಿಖಿತ ಕೋರಿಕೆ ಸಲ್ಲಿಸಿದಾಗ ಅಂತಹ ಕೋರಿಕೆಯು ತಲುಪಿದ 15 ದಿವಸಗಳೊಳಗೆ ಒಂದು ವಿಶೇಷ ಸಭೆಯನ್ನು ಕರೆಯಬೇಕು.

ತುರ್ತು ಸಂದರ್ಭದಲ್ಲಿ ಅಧ್ಯಕ್ಷರ ಪ್ರಕಾರ್ಯಗಳಲ್ಲಿ ತಿಳಿಸಿರುವಂತೆ ಪ್ರಕರಣ 62 (2) ರಂತೆ 24 ಘಂಟೆಗಳಲ್ಲಿ ತುರ್ತು ಸಭೆಯನ್ನು ಕರೆಯಬಹುದಾಗಿರುತ್ತದೆ. ಉದಾಹರಣೆಗೆ ವಿಕೋಪದ ಸಂದರ್ಭಗಳು.

**3) ಸ್ಥಾಯಿ ಸಮಿತಿಗಳು (ಪ್ರಕರಣ 61)**

1. ಸಾಮಾನ್ಯ ಸ್ಥಾಯಿ ಸಮಿತಿ
2. ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
3. ಸಾಮಾಜಿಕ ನ್ಯಾಯ ಸಮಿತಿ





### 4) ಉಪ ಸಮಿತಿಗಳು (ಪ್ರಕರಣ 61ಎ)

ಉಪಸಮಿತಿಗಳ ರಚನೆ ಬಗ್ಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 61ರಡಿ ನಿರ್ದಿಷ್ಟಪಡಿಸಲಾದ ಉದ್ದೇಶಗಳನ್ನು ಹೊರತುಪಡಿಸಿ ಇತರೆ ಯಾವುದೇ ಉದ್ದೇಶಕ್ಕಾಗಿ ಅದು ಗೊತ್ತುಪಡಿಸಿದ ಸದಸ್ಯರನ್ನು ಒಳಗೊಂಡ ಒಂದು ಅಥವಾ ಒಂದಕ್ಕಿಂತ ಹೆಚ್ಚು ಉಪ ಸಮಿತಿಗಳನ್ನು ರಚಿಸಬಹುದು.ಈ ಉಪಸಮಿತಿಗಳು ಯಾವ ಉದ್ದೇಶಕ್ಕಾಗಿ ರಚನೆಯಾಗಿದೆಯೋ ಅದನ್ನು ಈಡೇರಿಸುವುದಕ್ಕೆ ಅಗತ್ಯ ಹಾಗೂ ಸೂಕ್ತವಾದ ಅಧಿಕಾರಗಳನ್ನು ಹಾಗೂ ಪ್ರಕಾರ್ಯಗಳನ್ನು ವಹಿಸಬಹುದಾಗಿದೆ.ಸರ್ಕಾರದ ಹಂತದಲ್ಲಿ ಗ್ರಾಮಪಂಚಾಯತಿಗಳಲ್ಲಿ ಪ್ರಕರಣ 61ಎ ಅಡಿ ರಚಿಸಬಹುದಾದ ಉಪಸಮಿತಿಗಳ ರಚನೆ ಮತ್ತು ಪ್ರಕಾರ್ಯಗಳ ಕುರಿತು ಉಪವಿಧಿಗಳನ್ನು ರಚಿಸುವ ಕಾರ್ಯವು ಪ್ರಗತಿಯಲ್ಲಿದೆ. ಉಪಸಮಿತಿಗಳು ಈ ಕೆಳಕಂಡಂತಿವೆ:

1. ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ
2. ನ್ಯಾಯ ಬೆಲೆ ಅಂಗಡಿ ಮಟ್ಟದ ಜಾಗ್ರತಿ ಸಮಿತಿ
3. ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಮತ್ತು ಪೌಷ್ಠಿಕಾಂಶ ಸಮಿತಿ.
4. ಮಹಿಳೆಯರ ಮತ್ತು ಮಕ್ಕಳ ಸಾಗಾಣೆ ತಡೆಗಟ್ಟುವ ಮತ್ತು ಪುರ್ನವಸತಿ ಕಲ್ಪಿಸುವ ಸಮಿತಿ
5. ಬಾಲ ವಿಕಾಸ ಸಮಿತಿ
6. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ. (ಎಸ್.ಡಿ.ಎಂ.ಸಿ.)
7. ಜೀವ ವೈವಿಧ್ಯನಿರ್ವಹಣಾ ಸಮಿತಿ
8. ಗ್ರಾಮೀಣ ಶಿಕ್ಷಣ ಕಾರ್ಯಪಡೆ ಸಮಿತಿ
9. ಕೆರೆ ಅಭಿವೃದ್ಧಿ ನಿರ್ವಹಣಾ ಸಮಿತಿ
10. ಜಲಾನಯನ ನಿರ್ವಹಣಾ ಸಮಿತಿ
11. ಗ್ರಾಮ ಅರಣ್ಯ ಸಮಿತಿ
12. ಗ್ರಾಮ ಪಂಚಾಯಿತಿ ಕೋವಿಡ್ ನಿಯಂತ್ರಣ ಪಡೆ (ಜಿಪಿಟಿಎಫ್)

### 5) ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ(ಕೆ.ಡಿ.ಪಿ) ಪ್ರಗತಿ ಪರಿಶೀಲನಾ ಸಭೆ

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಎಲ್ಲಾ ಅಭಿವೃದ್ಧಿ ಇಲಾಖೆಗಳ ಸ್ಥಳೀಯ ಅಧಿಕಾರಿ/ಸಿಬ್ಬಂದಿಗಳಿಂದ ಅವರುಗಳಿಗೆ ಸಂಬಂಧಿಸಿದ ಯೋಜನೆ ಮತ್ತು ಅನುದಾನದ ವಿವರಗಳನ್ನು ಹಾಗೂ ಇವುಗಳ ಅನುಷ್ಠಾನದಲ್ಲಿ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸಲು ಹಾಗೂ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸೂಕ್ತ ಮಾರ್ಗದರ್ಶನ ನೀಡುವ ಉದ್ದೇಶವನ್ನು ಸರ್ಕಾರವು ಹೊಂದಿರುತ್ತದೆ. ಆದ್ದರಿಂದ ಗ್ರಾಮ ಪಂಚಾಯತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ತ್ರೈಮಾಸಿಕ ಪರಿಶೀಲನಾ ಸಮಿತಿಯ ಸಭೆ ಆಯೋಜಿಸಲಾಗುತ್ತದೆ.

ಬಡತನ ನಿರ್ಮೂಲನೆ, ಮಕ್ಕಳ ಮತ್ತು ಗರ್ಭಿಣಿಯರ ಆರೋಗ್ಯಕ್ಕಾಗಿ ಪೌಷ್ಠಿಕಾಂಶ ಒದಗಿಸುವ ಕಾರ್ಯಕ್ರಮಗಳ ಅನುಷ್ಠಾನ, ಮಕ್ಕಳ ಮತ್ತು ಮಹಿಳೆಯರ ಆರೋಗ್ಯ ಶೈಕ್ಷಣಿಕ, ಕಾರ್ಯಕ್ರಮಗಳ ಅನುಷ್ಠಾನ ಮತ್ತು ಪಡಿತರ ಧಾನ್ಯಗಳ ಸಮರ್ಪಕ ವಿತರಣೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಾರ್ಯನಿರ್ವಹಣೆ, ಪಶುಪಾಲನೆ ಚಿಕಿತ್ಸಾ ಕೇಂದ್ರಗಳ ಕಾರ್ಯನಿರ್ವಹಣೆ, ಗ್ರಾಮಪಂಚಾಯತಿ ಹಂತದಲ್ಲಿನ ವಿವಿಧ ಶಾಲೆಗಳಲ್ಲಿನ ಹಾಜರಾತಿ ಮತ್ತು ತರಗತಿಗಳ ನಿರ್ವಹಣೆಯ ಬಗ್ಗೆ, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಮತ್ತು ಸಂಬಂಧಪಟ್ಟ ಇತರೆ ಇಲಾಖೆಗಳ ಕಾರ್ಯಚಟುವಟಿಕೆಗಳ ಅನುಷ್ಠಾನ ಹಾಗೂ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸಲಾಗುವುದು.




### ಉಪ ಸಂಹಾರ

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಯೋಜಿಸಲಾಗುವ ವಿವಿಧ ಸಭೆಗಳ ಮಹತ್ವಗಳ ಕುರಿತು ಮಾಹಿತಿ ನೀಡುವುದು ಹಾಗೂ ಸಭೆಗಳನ್ನು ಆಯೋಜಿಸುವಾಗ ಅನುಸರಿಸಬೇಕಾದ ಪೂರ್ವ ತಯಾರಿ, ಕ್ರಮಗಳು ಮತ್ತು ಶಿಷ್ಟಾಚಾರಗಳ ಕುರಿತು ಅರಿವು ಮೂಡಿಸುವುದು ಈ ಅಧಿವೇಶನದಲ್ಲಿ ಆಗಬೇಕಾಗಿದೆ.

## ಅಧಿವೇಶನ –12

# ಗ್ರಾಮ ಪಂಚಾಯಿತಿ ಆಡಳಿತ ಮತ್ತು ಮಹಿಳೆ





## ಉದ್ದೇಶ

- ಗ್ರಾಮ ಪಂಚಾಯಿತಿ ಸದಸ್ಯರುಗಳು ಮಹಿಳೆ ಮತ್ತು ಪುರುಷರ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಕಾಣುವ ತರತಮಗಳ ಕುರಿತು ಆಲೋಚಿಸುವಂತೆ ಮಾಡುವುದು.
- ತಾರತಮ್ಯದಿಂದಾಗಿ ಮಹಿಳೆಯರ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆರ್ಥಿಕ ಹಾಗು ರಾಜಕೀಯ ಅಭೀವೃದ್ಧಿಯಲ್ಲಿನ ಕೊರತೆಗಳು, ಸಮಸ್ಯೆಗಳು ಹಾಗು ಅಭಿವೃದ್ಧಿಗೆ ಇರುವ ಮಾರ್ಗಗಳನ್ನು ಅರಿಯುವುದು.
- ಗ್ರಾಮ ಪಂಚಾಯಿತಿಯ ಕಾರ್ಯಗಳ ಅನುಷ್ಠಾನದಲ್ಲಿ ಸಮಾನತೆಯ ಆಂಶಗಳನ್ನು ಸಕಾರಾತ್ಮಕ ಮನೋಭಾವದಿಂದ ಸ್ವೀಕರಿಸಲು ಪೂರಕ ವಾತಾವರಣ ನಿಮಾಣ ಮಾಡುವುದು.

## ಉಪ ವಿಷಯಗಳು

ಗ್ರಾಮೀಣ ಪ್ರದೇಶದ ಮಹಿಳೆಯರ ಸಮಸ್ಯೆಗಳು

ಪಂಚಾಯಿತಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ

ಲಿಂಗಾಧಾರಿತ ದೃಷ್ಟಿಕೋನದಲ್ಲಿ ಅಭಿವೃದ್ಧಿ

## ಸಮಯ

60 ನಿಮಿಷಗಳು

## ವಿಧಾನ

ಗುಂಪು ಚಟುವಟಿಕೆ ಮತ್ತು ಮಂಡನೆ

ಕಿರುಚಿತ್ರದ ಕ್ಲಿಪಿಂಗ್ ವೀಕ್ಷಣೆ ಮತ್ತು ಸಂವಾದ

ಚರ್ಚೆ ಮತ್ತು ಕ್ರೋಢೀಕರಣ

ವಿಷಯ ಮಂಡನೆ – ಡಿ.ವಿ.ಡಿ ಮೂಲಕ ಪ್ರಸರಣ.

## ಪೂರಕ ಸಾಮಗ್ರಿಗಳು

- ಕಿರುಚಿತ್ರ
- ಕೆ.ಜಿ.ಶೀಟ್ಸ್, ಮಾರ್ಕರ್ ಪೆನ್ನುಗಳು

## ನಿರೀಕ್ಷಿತ ಫಲಿತಾಂಶ

ಸದಸ್ಯರುಗಳು ಗ್ರಾಮ ಪಂಚಾಯಿತಿಯ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಿದ್ಧಪಡಿಸುವಾಗ ಮಹಿಳೆಯರ ಸಕ್ರಿಯ ಭಾಗಹಿಸುವಿಕೆಗೆ ಉತ್ತೇಜನ ನೀಡುವರು.

ಅಭಿಪ್ರಾಯ ಮಂಡನೆ, ನಿರ್ಧಾರ ಕೈಗೊಳ್ಳುವಿಕೆಯ ಸಂದರ್ಭದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಧೃಡಪಡಿಸುವುದು ಮತ್ತು ಲಿಂಗ ಸಮಾನತೆಯ ಹಿನ್ನೆಲೆಯಲ್ಲಿ ಅಭಿವೃದ್ಧಿಯನ್ನು ಗಮನಿಸಿ, ಯೋಜನೆ ರೂಪಿಸಿ ಅನುಷ್ಠಾನಗೊಳಿಸುವರು.

## ಅಧಿವೇಶನ ಪ್ರಕ್ರಿಯೆ

ಸುಗಮಗಾರರು ಅಧಿವೇಶನ ವಿಷಯವಾದ ಗ್ರಾಮ ಪಂಚಾಯಿತಿ ಮತ್ತು ಮಹಿಳೆ ಕುರಿತು ಪ್ರಶಿಕ್ಷಣಾರ್ಥಿಗಳೊಂದಿಗೆ ಚರ್ಚಿಸುವುದು. ನಂತರ ವಿಷಯದ ಸ್ಪಷ್ಟತೆಗಾಗಿ ಗುಂಪು ಚರ್ಚೆ ಮಾಡೋಣವೆಂದು ತಿಳಿಸಿ ತಂಡಗಳ ರಚನೆಗೆ ಚಾಲನೆ ನೀಡುವುದು.

**ಗುಂಪು ಚಟುವಟಿಕೆ :** ಪ್ರಶಿಕ್ಷಣಾರ್ಥಿಗಳನ್ನು 4 ತಂಡಗಳಾಗಿ ರಚಿಸುವುದು. ಪ್ರತೀ ತಂಡಕ್ಕೆ ಕೆಳಗೆ ನೀಡಿರುವ ಒಂದೊಂದು ವಿಷಯಗಳ ಕುರಿತು 10 ನಿಮಿಷಗಳಲ್ಲಿ ಚರ್ಚಿಸಲು ತಿಳಿಸುವುದು.

- ✓ ಕೌಟುಂಬಿಕ & ಶೈಕ್ಷಣಿಕ ಸಮಸ್ಯೆಗಳು/ಸವಾಲುಗಳು
- ✓ ಸಾಮಾಜಿಕ & ಆರ್ಥಿಕ ಸಮಸ್ಯೆಗಳು/ಸವಾಲುಗಳು
- ✓ ರಾಜಕೀಯ ಸಮಸ್ಯೆಗಳು/ಸವಾಲುಗಳು
- ✓ ಗ್ರಾಮಗಳ ಅಭಿವೃದ್ಧಿಗೆ ಪಂಚಾಯಿತಿಯು ಪ್ರಸಕ್ತ ಮತ್ತು ಕೈಗೊಳ್ಳಬಹುದಾದ ಕಾರ್ಯಕ್ರಮಗಳು/ ಚಟುವಟಿಕೆಗಳು.

ಗುಂಪಿನಲ್ಲಿ ಚರ್ಚಿಸಿದ ವಿಷಯಗಳನ್ನು ಗುಂಪಿನ ಸದಸ್ಯರು ಪ್ರತಿನಿಧಿಸಿ ವಿಷಯ ಮಂಡಿಸಲು ತಿಳಿಸುವುದು ಮತ್ತು ಸುಗಮಗಾರರು ಸ್ಥಳೀಯವಾಗಿ ಮಹಿಳೆಯರ ಸಮಸ್ಯೆಗಳಿಗೆ ಗ್ರಾಮ ಪಂಚಾಯಿತಿಯು ಸ್ಪಂದಿಸಬೇಕಾದ ಅಗತ್ಯತೆಯನ್ನು ಅರ್ಥ ಮಾಡಿಸುವುದು.

ನಂತರದಲ್ಲಿ ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ವಿಷಯ ಮಂಡನೆಯ ವಿಡಿಯೋ ಪ್ರಸರಣವನ್ನು ಮಾಡುವುದು.

ವಿಷಯಗಳನ್ನು ಅರಿತ ನಂತರ, ಸಮಾಜದಲ್ಲಿನ ಅಸಮಾನತೆಯನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಪ್ರಯತ್ನಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ವಿವರಿಸುವುದು.

**ಉದಾ:**

- ನರೇಗಾ ಯೋಜನೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಹೆಚ್ಚಳ
- ಮಹಿಳಾ ಸ್ವಸಹಾಯ ಸಂಘಗಳ ಕೆಲಸಕ್ಕಾಗಿ ಷೆಡ್‌ಗಳ ನಿರ್ಮಾಣ
- ಮಹಿಳಾ ಗ್ರಾಮಸಭೆಗಳ ಪರಿಣಾಮಕಾರಿ ಆಯೋಜನೆ ಮತ್ತು ಸಾಮಾನ್ಯ ಸಭೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಹೆಚ್ಚಳ.
- ಗ್ರಾಮ ಪಂಚಾಯಿತಿಯ ಯೋಜನೆಗಳು ಮತ್ತು ಆಯವ್ಯಯಗಳು ಲಿಂಗಸಂವೇದಿಯಾಗಿ ನೋಡುವಿಕೆ.

ಅಂತಿಮವಾಗಿ ಅಧಿವೇಶನದಲ್ಲಿ ಉದ್ಭವಿಸುವ ಪ್ರಶ್ನೆಗಳಿಗೆ ಉತ್ತರಿಸುವುದು ಮತ್ತು ಪಂಚಾಯಿತಿಯನ್ನು ಮಾದರಿ ಗ್ರಾಮ ಪಂಚಾಯಿತಿಯನ್ನಾಗಿ ಮಾಡಲು ಮಹಿಳೆಯರ ಭಾಗವಹಿಸುವಿಕೆ ಮತ್ತು ಅವರ ಕೊಡುಗೆಗಳನ್ನು ಪ್ರೋತ್ಸಾಹಿಸುವುದು ಅತ್ಯವಶ್ಯಕ ಎಂದು ತಿಳಿಸಿ ಅಧಿವೇಶನವನ್ನು ಮುಕ್ತಾಯಗೊಳಿಸುವುದು.




ಭಾರತದಲ್ಲಿ ಇಂದಿಗೂ ಪಿತೃಪ್ರಧಾನ ಕೌಟುಂಬಿಕ ವ್ಯವಸ್ಥೆ ಇದ್ದು, ಇಂದಿಗೂ ಗಂಡು ಮಕ್ಕಳಿಗೆ ಆದ್ಯತೆ. ಹಿಂದಿನ ದಶಕಗಳಿಗೆ ಹೋಲಿಸಿದಲ್ಲಿ ಹೆಣ್ಣುಮಕ್ಕಳ ಕುರಿತ ಜನರ ಮನೋಭಾವದಲ್ಲಿ ಬದಲಾವಣೆ ಕಂಡುಬರುತ್ತಿದ್ದರೂ, ಗಂಡುಮಗುವಿನ ಬಗೆಗಿನ ವ್ಯಾಮೋಹ ಕಡಿಮೆಯಾದಂತೆ ತೋರುತ್ತಿಲ್ಲ. ಈ ಸನ್ನಿವೇಶದಲ್ಲಿ ಹೆಣ್ಣುಮಕ್ಕಳು ಮತ್ತು ಮಹಿಳೆಯರ ಸ್ಥಿತಿಗತಿಗಳು ಯಾವ ಸ್ಥಿತಿಯಲ್ಲಿವೆ ಎಂದು ಆಲೋಚಿಸುವುದು ಅತ್ಯಗತ್ಯ. ಮಹಿಳೆಯರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ನಿರಂತರವಾಗಿ ನಿರೂಪಿಸುತ್ತಾ, ಅಂತರಿಕ್ಷದಿಂದ ಹಿಡಿದು ವ್ಯವಸಾಯ, ಹೈನುಗಾರಿಕೆಯವರೆವಿಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಕಾರ್ಯೋನ್ಮುಖರಾಗಿದ್ದಾರೆ. ಆದರೆ ಎಲ್ಲಾ ಮಹಿಳೆಯರ ಸ್ಥಿತಿಗತಿಗಳು ಏಕರೂಪವಾಗಿಲ್ಲ ಎಂಬುದು ವಾಸ್ತವ. ಆದರೆ ಇಂದಿಗೂ ಮಹಿಳೆಯರು ಹಲವು ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರಮುಖವಾಗಿ

ಹೆಣ್ಣು ಭ್ರೂಣ ಹತ್ಯೆ,

ಹೆಣ್ಣು ಮಕ್ಕಳ ಕಳ್ಳಸಾಗಾಣಿಕೆ

ಶಿಶು ಮರಣ ಮತ್ತು ಹೆಣ್ಣು ಮಕ್ಕಳ ಮರಣ

ದೇವದಾಸಿ ಪದ್ಧತಿ





ತಾಯಂದಿರ ಮರಣ

ವರದಕ್ಷಿಣೆ ಕಿರುಕುಳ & ಸಾವು

ಬಾಲ್ಯ ವಿವಾಹ ಪದ್ಧತಿ,

ಕೆಲಸದ ಸ್ಥಳದಲ್ಲಿ ದೌರ್ಜನ್ಯ

ಶಾಲೆಯಿಂದ ಹೊರಗುಳಿಯುವ ಹೆಣ್ಣು ಮಕ್ಕಳು

ಕೌಟುಂಬಿಕ ದೌರ್ಜನ್ಯ – ಶಾರೀರಿಕ, ಮಾನಸಿಕ, ಲೈಂಗಿಕ ಕಿರುಕುಳ

ಬಾಲ ಕಾರ್ಮಿಕತೆ

ಅಸಮಾನ ಕೂಲಿ

ಬಾಲ್ಯದಲ್ಲಿಯೇ ತಾಯ್ತನ

ಅಪೌಷ್ಠಿಕತೆ ಮತ್ತು ರಕ್ತಹೀನತೆ

ಮಕ್ಕಳ ಮೇಲಿನ ಅತ್ಯಾಚಾರ

ಅನಾರೋಗ್ಯ (ಸಾಂಕ್ರಾಮಿಕ & ಅಸಾಂಕ್ರಾಮಿಕ)

**ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆ**

ವಿಕೇಂದ್ರೀಕರಣದ ಹರಿಕಾರರಾದ ಶ್ರೀ ಅಬ್ದುಲ್ ನಜ಼ೀರ್ ಸಾಬ್‌ರವರು 1983 ರಲ್ಲಿ ರಾಜ್ಯದಲ್ಲಿ ಮಹಿಳೆಯರಿಗೆ ಸ್ಥಳೀಯ ಸರ್ಕಾರದಲ್ಲಿ ಶೇಕಡ 25 ರಷ್ಟು ಮೀಸಲಾತಿಯನ್ನು ಪರಿಚಯಿಸಿದರು. 73 ನೇ ಸಂವಿಧಾನ ತಿದ್ದುಪಡಿಯು ಮಹಿಳೆಯರಿಗೆ ಶೇಕಡ 33 ರಷ್ಟು ಮಹಿಳಾ ಮೀಸಲಾತಿಯನ್ನು ಪರಿಚಯಿಸಿತು. ಕರ್ನಾಟಕ ರಾಜ್ಯವು ಒಂದು ಹೆಜ್ಜೆ ಮುಂದುವರೆದು 2015 ರಲ್ಲಿ ಗ್ರಾಮೀಣ ಸ್ಥಳೀಯ ಸರ್ಕಾರದಲ್ಲಿ ಶೇಕಡ 50 ರಷ್ಟು ಮಹಿಳಾ ಮೀಸಲಾತಿಯನ್ನು ಜಾರಿಮಾಡಿದೆ.


**ಚುನಾಯಿತ ಪ್ರತಿನಿಧಿಗಳು ಏನು ಮಾಡಬಹುದು?**

ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಿ, ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿ ಸರ್ಕಾರದ ಯೋಜನೆಗಳನ್ನು ಮಹಿಳೆಯರಿಗೆ ತಲುಪುವಂತೆ ನೋಡಿಕೊಳ್ಳಬೇಕು. ಪ್ರಮುಖವಾಗಿ ವೈಯಕ್ತಿಕ ಶೌಚಾಲಯ, ಶೌಚಾಲಯದ ಬಳಕೆ ಖಾತರಿಪಡಿಸುವಿಕೆ, ನರೇಗಾ ಕಾಮಗಾರಿಗಳಲ್ಲಿ ಮಹಿಳೆಯರಿಗೆ ಉತ್ತೇಜನ, ಪ್ರತಿ ಮಹಿಳೆಯು ಸಂಜೀವಿನಿ (ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ) ಅಡಿ ಸ್ವಸಹಾಯ ಸಂಘದ ಸದಸ್ಯರಾಗಲು ಪ್ರೋತ್ಸಾಹ, ದೀನದಯಾಳು ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ, ಪ್ರಧಾನಮಂತ್ರಿ ಉದ್ಯೋಗ ಸೃಷ್ಟಿ ಯೋಜನೆಯಡಿ ಸ್ವಯಂ ಉದ್ಯೋಗ/ ತರಬೇತಿ, ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ಮೂಲಕ ಆರ್ಥಿಕ ಸ್ವಾವಲಂಭನೆ, ಕೆಲಸಕ್ಕಾಗಿ ವರ್ಕ್ ಶೆಡ್ದುಗಳ ನಿಮಾಣ, ವಿಧವಾ, ಮನಸ್ವಿನಿ, ವೃದ್ಧಾಪ್ಯ ಮತ್ತು ವಿಶೇಷ ಚೇತನರ ವೇತನ ಸೌಕರ್ಯ ಒದಗಿಸುವಿಕೆ, ಬ್ಯಾಂಕ್ ಖಾತೆ ತೆರೆಯುವಿಕೆ, ಜೀವ ವಿಮೆ ಸೌಕರ್ಯ ಒದಗಿಸುವಿಕೆ, ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ ಯೋಜನೆ, ಗರ್ಭಿಣಿ ಮತ್ತು ಬಾಣಂತಿ ಮಹಿಳೆಯರು ಮತ್ತು ಮಕ್ಕಳಿಗೆ ಆರೋಗ್ಯ ಸೇವೆಗಳು ಮತ್ತು ಪೌಷ್ಠಿಕ ಆಹಾರದ ಸಮರ್ಪಕ ವಿತರಣೆಗೆ ಕ್ರಮ, ಮಹಿಳೆಯರು ಮತ್ತು ಮಕ್ಕಳಿಗೆ ಸಂಬಂಧಿಸಿದ ಸ್ಥಾಯಿ ಸಮಿತಿ ಮತ್ತು ಉಪ ಸಮಿತಿಗಳ ಸಭೆ ಸಂಘಟನೆಯ ಮೂಲಕ ಅವರ ಹಿತಾಸಕ್ತಿ ರಕ್ಷಣೆ, ಬಾಲ್ಯವಿವಾಹ, ವರದಕ್ಷಿಣೆ ಕಿರುಕುಳ/ಸಾವು, ಕೌಟುಂಬಿಕ ಕಲಹಗಳು, ದೈಹಿಕ ಮತ್ತು ಮಾನಸಿಕ ಹಿಂಸೆಗಳಾಗದಂತೆ ಕ್ರಮ ಜರುಗಿಸುವಿಕೆ ಈ ಮೊದಲಾದ ಕ್ರಮ ಕೈಗೊಳ್ಳುವ ಮೂಲಕ ಮಹಿಳೆಯರಿಗೆ ಸುರಕ್ಷಿತ ಪರಿಸರವನ್ನು ಹೊಂದಿರುವ ಗ್ರಾಮವನ್ನಾಗಿ ಮಾರ್ಪಡಿಸಬಹುದಾಗಿದೆ.

ಮಹಿಳೆಯರು ಮುಕ್ತವಾಗಿ ತಮ್ಮ ಬೇಡಿಕೆ, ಅಭಿಪ್ರಾಯ, ಅನಿಸಿಕೆಗಳನ್ನು ಹಂಚಿಕೊಳ್ಳಲು ಅವಕಾಶ ಇರುವಂತಹ ವಾತಾವರಣ ನಿರ್ಮಾಣ, ಯೋಜನೆಗಳು, ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡುವಾಗ ಅವುಗಳನ್ನು ಲಿಂಗತ್ವದ ದೃಷ್ಟಿಕೋನದಲ್ಲಿ ನೋಡುವ ಮತ್ತು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಚುನಾಯಿತ ಪ್ರತಿನಿಧಿಗಳು ಮತ್ತು ಪಂಚಾಯಿತಿಯು ಮಾಡಿದಲ್ಲಿ ನಮ್ಮ ಹಳ್ಳಿಗಳನ್ನು ಮಹಿಳಾ ಸಬಲೀಕರಣ ಹೊಂದಿದ ಮಹಿಳಾ ಸ್ನೇಹಿ ಗ್ರಾಮವೆಂದು ಘೋಷಿಸಬಹುದಾಗಿದೆ.

## ಉಪ ಸಂಹಾರ

ಸಂವಿಧಾನದಲ್ಲಿ ಅವಕಾಶ ಕಲ್ಪಿಸಿರುವ ಮೂಲಭೂತ ಹಕ್ಕಾದ ಸಮಾನತೆಯಂತೆ ಅಭಿವೃದ್ಧಿಯಲ್ಲಿ ಎಲ್ಲಾ ವರ್ಗದವರಿಗೂ ಅವಕಾಶವನ್ನು ನೀಡಬೇಕಾಗಿರುತ್ತದೆ. ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಯೋಜನೆಗಳನ್ನು ರೂಪಿಸುವಾಗ ದುರ್ಬಲ ವರ್ಗದವರನ್ನು ಗಣನೆಗೆ ತೆಗೆದುಕೊಳ್ಳುವುದು ಅತ್ಯಾವಶ್ಯಕ.



ಅಧಿವೇಶನ –13

# ಕ್ರಿಯಾತ್ಮಕ ದೂರದೃಷ್ಟಿ ಯೋಜನೆ ತಯಾರಿಕೆ



**ಉದ್ದೇಶ**

ಗ್ರಾಮ ಪಂಚಾಯಿತಿಯ ಮಾದರಿ 'ಕ್ರಿಯಾತ್ಮಕ ದೂರದೃಷ್ಟಿ ಯೋಜನೆ' ಸಿದ್ಧಪಡಿಸುವುದು.

**ಉಪ ವಿಷಯಗಳು**

'ಕನಸಿನ ಗ್ರಾಮ ಪಂಚಾಯಿತಿ'

ಧ್ಯೇಯ ವಾಕ್ಯ

ಗುರಿಗಳು

**ವಿಧಾನ**

ಸಂವಾದ

ಧ್ಯೇಯ ವಾಕ್ಯ ಗುರುತಿಸುವಿಕೆ ಮತ್ತು ಪ್ರಮುಖವಾದ 5 ಗುರಿಗಳನ್ನು ನಿಗದಿಪಡಿಸುವುದಕ್ಕಾಗಿ ಗುಂಪು ಚಟುವಟಿಕೆ

**ಸಮಯ**

105 ನಿಮಿಷಗಳು

**ಪೂರಕ ಸಾಮಗ್ರಿಗಳು**

ಮಾರ್ಕರ್ ಪೆನ್, ಕೆ.ಜಿ.ಶೀಟ್ಸ್

**ನಿರೀಕ್ಷಿತ ಫಲಿತಾಂಶ**

ಗ್ರಾಮ ಪಂಚಾಯಿತಿಯ ಮಾದರಿ ಕ್ರಿಯಾತ್ಮಕ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸುತ್ತಾರೆ.

**ಅಧಿವೇಶನ ಪ್ರಕ್ರಿಯೆ**

1. ದೂರದೃಷ್ಟಿ ಯೋಜನೆ ರೂಪಿಸಲು ಸಹಾಯಕವಾಗುವ ಚಟುವಟಿಕೆಯನ್ನು ಮಾಡಿಸುವುದು.

**ಚಟುವಟಿಕೆ**


ಕುಳಿತಲ್ಲೇ ಎಲ್ಲಾ ಪ್ರಶಿಕ್ಷಣಾರ್ಥಿಗಳನ್ನು ನಿಧಾನವಾಗಿ ಕಣ್ಣುಮುಚ್ಚಿ ಕೂರುವಂತೆ ತಿಳಿಸುವುದು

ಕೆಳಗಿನ ಕೆಲವು ಮಾರ್ಗಸೂಚಿಗಳನ್ನು ಆರಂಭದಲ್ಲೇ ತಿಳಿಸಿ, ಅದರಂತೆ ಪಾಲಿಸಲು ಹೇಳುವುದು.

- ಮೊದಲಿಗೆ ಉಸಿರಾಟದ ಮೇಲೆ ಗಮನಹರಿಸುವಂತೆ ತಿಳಿಸುವುದು. ಅದಕ್ಕಾಗಿ ಮೂರರಿಂದ ಐದು ಬಾರಿ ದೀರ್ಘ ಉಚ್ವಾಸ ಮತ್ತು ನಿಶ್ವಾಸ ಕ್ರಿಯೆಯನ್ನು ಮಾಡಿಸುವುದು.
- ಅವರುಗಳಿಗೆ ಗ್ರಾಮೀಣ ಪ್ರದೇಶದ ಎರಡು ಪರಿಸ್ಥಿತಿಗಳನ್ನು ವಿವರಿಸುವುದಾಗಿ, ಅವುಗಳನ್ನು ಕಣ್ಣು ತೆರೆಯದೇ ಮನಸಿನಲ್ಲೇ ಊಹೆ ಮಾಡಿಕೊಳ್ಳುತಾ ಮುನ್ನಡೆಯುವಂತೆ ತಿಳಿಸುವುದು.
- ಆಗಿಂದ್ದಾಗೆ ನೀಡುವ ಸೂಚನೆಯನ್ನು ತಪ್ಪದೇ ಪಾಲಿಸುವಂತೆ ಮನವರಿಕೆ ಮಾಡುವುದು.
- ಚಟುವಟಿಕೆ ಅಂತಿಮಗೊಳ್ಳುವ ತನಕ ಯಾರೂ ಕಣ್ಣನ್ನು ತೆರೆಯಬಾರದೆಂದು ಹೇಳುವುದು.
- ನಿಶಬ್ಧತೆಯನ್ನು ಕಾಪಾಡುವಂತೆ ತಿಳಿಸುವುದು.

**ಮೊದಲನೆಯ ಪರಿಸ್ಥಿತಿ**

ಒಂದು ಗ್ರಾಮಕ್ಕೆ ಭೇಟಿ ನೀಡುವುದು. ನಿಗದಿತ ಕಾಲಕ್ಕೆ ಬಸ್ ದೊರೆಯದೇ ತಾಲ್ಲೂಕು ಕೇಂದ್ರದಲ್ಲಿ ಕಾದು ಕುಳಿತು ಸುಸ್ತಾಗುವುದು. ಬಸ್ ಬಂದ ಬಳಿಕ, ಹೇಗೋ ಕಷ್ಟಪಟ್ಟು ಬಸ್ ಹತ್ತುವುದು. ದಾರಿ ಉದ್ದಕ್ಕೂ ಹಳ್ಳಬಿದ್ದ ರಸ್ತೆ, ಊರು ತಲುಪಿದರೆ ಸಾಕಪ್ಪ ಎನ್ನುವಷ್ಟರ ಮಟ್ಟಿಗೆ ಬೇಸರ. ಊರು ಸಮೀಪಿಸಿತು, ಇಳಿಯುವ ತಯಾರಿ ಮಾಡಿಕೊಳ್ಳುವುದು. ಬಸ್ಸಿನಿಂದ ಇಳಿದ ತಕ್ಷಣವೇ ಕಣ್ಣಿಗೆ ಕಂಡ ಮುರಿದುಬಿದ್ದಿರುವ ಹರಕಲು ಗೋಡೆ, ಕಸದಿಂದ ಕೂಡಿರುವ ಬಸ್‌ನಿಲ್ದಾಣ.





ಚಿಕಿತ್ಸೆಗಾಗಿ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಲು ಬೇರೆ ಬಸ್ ಕಾಯುತ್ತಿರುವ ಗರ್ಭಿಣಿ, ಬಾಣಂತಿಯರು.. ಕೂರಲು ಸೂಕ್ತ ಸ್ಥಳವಿಲ್ಲ, ನಿಲ್ಲಲು ತ್ರಾಣವಿಲ್ಲದೇ ತೊಳಲಾಡುತ್ತಿರುವುದು.

ಬಸ್ ಮುಂದಕ್ಕೆ ಹೋದಂತೆ ಕಣ್ಣಿಗೆ ಬಿದ್ದ ಶಾಲೆ, ಕಾಂಪೌಂಡ್ ಇಲ್ಲದೆ ಮಕ್ಕಳು ಚೆಲ್ಲಾಪಿಲ್ಲಿಯಾಗಿ ಶಾಲೆಯ ಮುಂದೆ ಓಡಾಡುತ್ತಿರುವುದು. ಶಾಲಾವರಣದಲ್ಲಿ ಬಿದ್ದಿರುವ ಕಸದ ರಾಶಿ, ನೀರು ಕಾಣದೆ ನಿಂತಿರುವ ಗಿಡಗಳು, ಅಶಿಸ್ತಿನ ತಾಣದಂತೆ ಕಾಣತೊಡಗಿತು.

ಮನೆಗೆ ಹೋಗಲು ಮುಂದುವರೆದೆ, ದಾರಿ ಯಾವುದು, ಚರಂಡಿ ಯಾವುದು ಎನ್ನುವಷ್ಟರ ಮಟ್ಟಿನ ಗೊಂದಲ.... ರಸ್ತೆಯ ಮಧ್ಯದಲ್ಲಿ ಪೂರ್ಣವಾಗಿ ಚರಂಡಿಯಿಂದ ಹೊರಬಿದ್ದ ನೀರು ಹರಿದು ಬರುತ್ತಿದೆ, ಅಲ್ಲೆ ಪಕ್ಕದಲ್ಲಿ ನಲ್ಲಿ ನಿಲ್ಲಿಸದ ಕಾರಣ ಇನ್ನಷ್ಟು ಹೆಚ್ಚಾಗಿರುವ ನೀರಿನ ಹರಿವು. ಬೇಸರದಲ್ಲೇ ಮುಂದುವರೆಯುವುದು, ಅದೇ ದಾರಿಯಲ್ಲಿರುವ ಗುಡಿಸಲಿನಲ್ಲಿ ವಾಸವಾಗಿರುವ ವಯಸ್ಸಾದ ಹೆಂಗಸು, ಗುಡಿಸಲಿನೊಳಗೆ ಯಾರನ್ನೋ ಬಯ್ಯುತ್ತಿದ್ದಾಳೆ, ಬೆಳಗಿನ ಸೂರ್ಯನಿಗೆ ದಾರಿ ತೋರಿಸುವಂತೆ ಬೀದಿದೀಪಗಳ ರಾರಾಜಿಸುವಿಕೆ. ಬೀದಿಯಲ್ಲಿ ಆಟವಾಡುತ್ತಿರುವ ವಯೋ ಸಹಜವಾಗಿರದ ಅಪೌಷ್ಟಿಕ ಮಕ್ಕಳು, ಮನೆಯ ಪಡಸಾಲೆಯಲ್ಲಿ ಆರ್ತನಾದದ ಆರೋಗ್ಯ ವ್ಯತಿರಿಕ್ತತೆಯಿಂದ ಬಳಲುತ್ತಿರುವ ಹಿರಿಯ ನಾಗರಿಕರು, ನೀರಿಗಾಗಿ ಜಗಳವಾಡುತ್ತಿರುವ ಮಹಿಳೆಯರು.

**ಎರಡನೆಯ ಪರಿಸ್ಥಿತಿ**

ಗ್ರಾಮಕ್ಕೆ ಭೇಟಿ ನೀಡಲು ತಾಲ್ಲೂಕು ಕೇಂದ್ರದ ಬಸ್ ನಿಲ್ದಾಣಕ್ಕೆ ಬಂದಾಕ್ಷಣ ಬಸ್ ಸಮಯಕ್ಕೆ ಸರಿಯಾಗಿ ಬರುವುದು. ಪ್ರಯಾಣ ಮಾಡಿರುವುದು ತಿಳಿಯದಂತೆ ಗ್ರಾಮಕ್ಕೆ ಬಂದಿಳಿಯುವುದು. ಗ್ರಾಮಕ್ಕೆ ಪ್ರವೇಶಿಸುತ್ತಿದ್ದಂತೆ, ಮರಗಿಡಗಳ ಸ್ವಾಗತ, ಬಸ್‌ನಿಂದ ಇಳಿಯುತ್ತಿದ್ದಂತೆ ಕಂಡ ಸ್ವಚ್ಚ ಕೂರುವ ಆಸನಗಳುಳ್ಳ ಬಸ್ ನಿಲ್ದಾಣ, ಆರೋಗ್ಯಯುತವಾಗಿ ಕಂಡ ಗರ್ಭಿಣಿ ಮತ್ತು ಬಾಣಂತಿಯರು, ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಲು ಆ ಬಸ್ ನಿಲ್ದಾಣದೊಳಗೆ ಕುಳಿತಿರುವುದು.

ಬಸ್ ಮುಂದಕ್ಕೆ ಹೋದಂತೆ, ಅತಿ ಸ್ಪಷ್ಟವಾದ ಹಿರಿಯ ಪ್ರಾಥಮಿಕ ಶಾಲೆಯ ಬೋರ್ಡ್, ಕಾಂಪೌಂಡ್‌ನೊಳಗೆ ಮಕ್ಕಳ ಸದ್ದು, ಕೆಲವರು ಗಿಡಕ್ಕೆ ನೀರೆರೆಯುತ್ತಿದ್ದರೆ, ಶಾಲಾ ಸ್ವಚ್ಚತೆ ಮುಗಿಸಿ ಕೆಲವರು ಗುಂಪಿನಲ್ಲಿ ಓದುತ್ತಿರುವುದು, ಶಾಲಾ ಶಿಕ್ಷಕರು ಮೇಲ್ವಿಚಾರಣೆ ಮಾಡುತ್ತಿರುವುದು. ಹಸಿರು ಮರ–ಗಿಡಗಳಿಂದ ಕಂಗೊಳಿಸುತ್ತಿರುವ ಶಾಲೆ. ಮನೆಯ ಕಡೆಗೆ ಹೋಗಲು ಮುಂದುವರೆದರೆ, ಗ್ರಾಮದ ಆರಂಭದಲ್ಲೇ ಸಣ್ಣ ಸ್ವಚ್ಚ ಉದ್ಯಾನವನ, ಚೊಕ್ಕವಾದ ರಸ್ತೆ ಮತ್ತು ಚರಂಡಿಗಳು, ಮನೆಯ ಮುಂದಿನ ನಲ್ಲಿಯ ನೀರು ಸಂಗ್ರಹಕ್ಕೆ ಇಟ್ಟ ಪಾತ್ರೆ, ನೀರು ತುಂಬಿದಾಕ್ಷಣ ನಲ್ಲಿ ನಿಲ್ಲಿಸುವಂತೆ ಮಗನಿಗೆ ಸೂಚಿಸುತ್ತಿರುವ ಮನೆಯೊಡತಿ. ಮನೆ ತಲಪುವವರೆವಿಗೂ ಕಣ್ಣಿಗೆ ಕಾಣದ ಗುಡಿಸಲುಗಳು, ಜಾನುವಾರುಗಳಿಗಾಗಿ ಪ್ರತ್ಯೇಕ ಕೊಟ್ಟಿಗೆ ವ್ಯವಸ್ಥೆ, ದಾರಿಯಲ್ಲಿ ಆಟವಾಡುತ್ತಿದ್ದ ದಷ್ಟಪುಷ್ಟವಾದ ಮಕ್ಕಳು, ಬೆಳಕಿನನ್ವಯ ಸ್ವಯಂ ಚಾಲಿತ ಬೀದಿ ದೀಪದ ವ್ಯವಸ್ಥೆ, ಕೃಷಿ ಚಟುವಟಿಕೆಗಾಗಿ ಜಮೀನಿನ ಕಡೆಗೆ ಹೊರಡುತ್ತಿದ್ದ ಜನರ ದಂಡು, ಆರೋಗ್ಯದಾಯಕರಂತೆ ಕಂಡ ಹಿರಿಯ ನಾಗರಿಕರುಗಳು ಮತ್ತು ಅವರುಗಳ ಗುಂಪು ಚರ್ಚೆ, ಪ್ರತಿ ಮನೆಯಲ್ಲಿ ನೀರಿನ ನಲ್ಲಿ ವ್ಯವಸ್ಥೆ ಮತ್ತು ಸಮಯಾಧಾರಿತ ನೀರಿನ ಪೂರೈಕೆ. ಇವೆಲ್ಲವನ್ನು ಕಂಡು ಹರ್ಷದಿಂದ ಮನೆಯೊಳಗೆ ನಡೆದೆವು.

ಇಷ್ಟು ತಿಳಿಸುವುದರೊಂದಿಗೆ ಚಟುವಟಿಕೆಯನ್ನು ಅಂತಿಮ ಘಟ್ಟಕ್ಕೆ ತರುವುದು.

ಈಗ ನಿಮ್ಮ ಎರಡು ಕೈಗಳನ್ನು ಪರಸ್ಪರ ಉಜ್ಜುವುದು. ನಿಮಗೆ ತಡೆದುಕೊಳ್ಳಬಹುದಾದ ಶಾಖಕ್ಕೆ ಅನುಸಾರವಾಗಿ ಉಜ್ಜಿದ ನಂತರ, ನಿಮ್ಮ ಕಣ್ಣುಗಳ ಮೇಲೆ ಕೈಯನ್ನು ಇರಿಸಿ.

ನಿಧಾನವಾಗಿ ಕಣ್ಣುಗಳನ್ನು ತೆರೆಯಿರಿ.

ಈಗ ಹೇಗೆನ್ನಿಸುತ್ತಿದೆ ಎಂದು ಪ್ರಶಿಕ್ಷಣಾರ್ಥಿಗಳನ್ನು ಪ್ರಶ್ನಿಸಿ. ಅವರುಗಳಿಂದ ಪ್ರತಿಕ್ರಿಯೆ ಪಡೆದುಕೊಳ್ಳಿ.

ಯಾವ ಸನ್ನಿವೇಶವನ್ನು ತಮ್ಮ ಗ್ರಾಮ ಮತ್ತು ಗ್ರಾಮ ಪಂಚಾಯಿತಿಯಲ್ಲಿ ಇರಬೇಕೆಂದು ಭಾವಿಸುವಿರೆಂದು ಕೇಳುತ್ತಾ, ಅವರುಗಳ ಅಭಿಪ್ರಾಯವನ್ನು ಅಭಿವ್ಯಕ್ತಪಡಿಸಲು ಅವಕಾಶ ನೀಡುವುದು.

ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ 'ದೂರದೃಷ್ಟಿ ಯೋಜನೆ' ರೂಪಿಸುವಾಗ ಮಾನವ ಅಭಿವೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿ ಅಂಶಗಳನ್ನು ಒಳಗೊಂಡಂತೆ ಮೂಲಸೌಕರ್ಯಗಳನ್ನು ನಿರ್ಮಿಸುವ ಅವಶ್ಯಕತೆಯನ್ನು ಮನಗಾಣಿಸುವುದು.

ಸ್ಥಳೀಯವಾಗಿ ಪ್ರತಿ ಗ್ರಾಮ ಪಂಚಾಯಿತಿಗೆ ತನ್ನ ವ್ಯಾಪ್ತಿಯ ಹಲವು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪೂರಕವಾದ 'ಧ್ಯೇಯ ವಾಕ್ಯ' ರೂಪಿಸಲು ಸಹಕರಿಸುವುದು.

ಗ್ರಾಮ ಪಂಚಾಯಿತಿ ಧ್ಯೇಯ ವಾಕ್ಯ ರಚಿಸುವಾಗ ಗಮನಿಸಬೇಕಾದ ಭಾಗೀದಾರರುಗಳು, ಗ್ರಾಮ ಪಂಚಾಯಿತಿಯ ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಅರ್ಥೈಸುವಿಕೆ, ಕಾರ್ಯನಿರ್ವಹಿಸಬೇಕಾದ ವಲಯಗಳು ಮತ್ತು ಅವುಗಳನ್ನು ಒದಗಿಸುವ ಬಗೆಗಳ ಬಗ್ಗೆ ತಿಳಿಸುವುದು.

ಧ್ಯೇಯ ವಾಕ್ಯಗಳನ್ನು ಗುರುತಿಸಲು ಸಹಕಾರಿಯಾಗಲೆಂದು ಈ ಕೆಳಗಿನ ಉದಾಹರಣೆಗಳನ್ನು ನೀಡಲಾಗಿದೆ.

- ಸ್ಥಳೀಯ ಸರ್ಕಾರವನ್ನು ಬಲಪಡಿಸುವ ನಿಟ್ಟಿನಲ್ಲಿ ಗುಣಮಟ್ಟದ ಶಿಕ್ಷಣ, ತರಬೇತಿ, ಮತ್ತು ಬೆಂಬಲ ನೀಡುವುದು ಹಾಗೂ ಸಂಶೋಧನೆಯನ್ನು ನಡೆಸುವುದು.
- ತ್ವರಿತ ಮತ್ತು ನಂಬಿಕೆಯ ಮೂಲಕ ಅಂಚೆ ಪಾರ್ಸಲ್, ಹಣದ ವರ್ಗಾವಣೆ, ಬ್ಯಾಂಕಿಂಗ್, ವಿಮೆ ಮತ್ತು ರಿಟೇಲ್ ಸೇವೆಗಳನ್ನು ಒದಗಿಸುವುದು.
- ಮಾನವನ ಜೀವನದ ಗುಣಮಟ್ಟವನ್ನು ಉತ್ತಮಪಡಿಸುವ ಮೂಲಕ ಸಮಾಜವನ್ನು ಉನ್ನತೀಕರಿಸಲು ಪ್ರಯತ್ನಿಸುವುದು.


ಗುರುತಿಸಿದ ಧ್ಯೇಯ ವಾಕ್ಯಕ್ಕೆ ಅನುಸಾರವಾದ ಅತಿ ಪ್ರಮುಖ ಅನಿಸುವ ಐದು ಅಥವಾ ಆರು ಗುರಿಗಳನ್ನು ಗುರುತಿಸುವುದು. ಉದಾಹರಣೆಯಾಗಿ,

- ಗ್ರಾಮ ಪಂಚಾಯಿತಿಯ 0~5 ವರ್ಷದೊಳಗಿನ ಎಲ್ಲಾ ಮಕ್ಕಳು ಅಪೌಷ್ಟಿಕತೆಯಿಂದ ಬಳಲದಂತೆ ಖಚಿತಪಡಿಸುತ್ತೇವೆ.
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ಕೊಡಿಸುವುದರ ಮೂಲಕ ಚುಚ್ಚುಮದ್ದು ಸಂಪೂರ್ಣ ಗ್ರಾಮ ಪಂಚಾಯಿತಿ ಎಂದು ಘೋಷಿಸುತ್ತೇವೆ.
- 6~14 ವಯಸ್ಸಿನ ಯಾವ ಮಗುವು (ವಿಶೇಷವಾಗಿ ಹೆಣ್ಣುಮಗು) ಶಾಲೆಯಿಂದ ಹೊರಗುಳಿಯದಂತೆ ಶೇ.100ರಷ್ಟು ಖಾತರಿಪಡಿಸುತ್ತೇವೆ.
- ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರು ರಕ್ತಹೀನತೆಯಿಂದ ಬಳಲದಂತೆ ಖಾತರಿಪಡಿಸುತ್ತೇವೆ.
- ನೀರು ಸಂರಕ್ಷಣೆಗಾಗಿ ಮಳೆನೀರು ಮತ್ತು ಮನೆ ಬಳಕೆ ನೀರನ್ನು ಮರಬಳಕೆ ಅಥವಾ ಇಂಗಿಸುವಂತೆ ಖಚಿತಪಡಿಸುತ್ತೇವೆ.
- ಪ್ರತಿ ಮನೆಯ ಮುಂದೆ ಅಥವಾ ಸರ್ಕಾರಿ ಜಾಗದಲ್ಲಿ ಗಿಡ ನೆಟ್ಟು, ಪೋಷಿಸುವುದರ ಮೂಲಕ ಹಸರೀಕರಣ ಮಾಡುತ್ತೇವೆ.
- ಹಿರಿಯ ನಾಗರಿಕರಿಗೆ ಉತ್ತಮ ಆರೋಗ್ಯ ಮತ್ತು ಸಾಮಾಜಿಕ ಭದ್ರತೆ ನೀಡುವಲ್ಲಿ ಶೇ.100ರಷ್ಟು ಖಾತರಿಪಡಿಸುತ್ತೇವೆ.
- ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಅವಶ್ಯಕತೆಗನುಗುಣವಾಗಿ ಸಮುದಾಯ ಸಹಭಾಗಿತ್ವದೊಂದಿಗೆ ವಿಸ್ತಾರ ಯೋಜನೆಯನ್ನು ರೂಪಿಸುವ ಮುಖೇನ ಕಾರ್ಯರೂಪಗೊಳಿಸುತ್ತೇವೆ.

ಪ್ರತಿ ಗ್ರಾಮ ಪಂಚಾಯಿತಿಗಳು ತಮ್ಮ ತಮ್ಮ ಗ್ರಾಮ ಪಂಚಾಯಿತಿಗೆ ಒಂದು ಧ್ಯೇಯ ವಾಕ್ಯ ಮತ್ತು 5 ಅಥವಾ 6 ಗುರಿಗಳನ್ನು ನಿಗದಿಪಡಿಸುವುದು.

**ಸುಗಮಗಾರರಿಗೆ ಸೂಚನೆಗಳು**

ಚಟುವಟಿಕೆಯನ್ನು ವಿಸ್ತರಿಸಿ, ಪ್ರಶಿಕ್ಷಣಾರ್ಥಿಗಳ ಮನಮುಟ್ಟುವುದಕ್ಕಾಗಿ ಚಟುವಟಿಕೆಯನ್ನು ಪೂರ್ವಭಾವಿಯಾಗಿ ಅಭ್ಯಾಸ ಮಾಡುವುದು.








### ವಿಷಯದ ಕುರಿತ ಟಿಪ್ಪಣಿ

## ಮಾದರಿ ಕ್ರಿಯಾತ್ಮಕ ದೂರದೃಷ್ಟಿ ಯೋಜನೆ

ಕ್ರಿಯಾತ್ಮಕ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾನವ ಅಭಿವೃದ್ಧಿ ಅಂಶಗಳನ್ನು ಮತ್ತು ಸುಸ್ಥಿರ ಅಭಿವೃದ್ಧಿ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವುದು. ಇದರೊಂದಿಗೆ ಗ್ರಾಮ ಪಂಚಾಯಿತಿ ತನ್ನ ಎಲ್ಲಾ ಭಾಗೀದಾರರುಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ಸಿದ್ಧಪಡಿಸಬೇಕಿರುತ್ತದೆ.

- ಸ್ಥಳೀಯ ಸರ್ಕಾರವನ್ನು ಬಲಪಡಿಸುವ ನಿಟ್ಟಿನಲ್ಲಿ ಗುಣಮಟ್ಟದ ಶಿಕ್ಷಣ, ತರಬೇತಿ, ಮತ್ತು ಬೆಂಬಲ ನೀಡುವುದು ಹಾಗೂ ಸಂಶೋಧನೆಯನ್ನು ನಡೆಸುವುದು.
- ತ್ವರಿತ ಮತ್ತು ನಂಬಿಕೆಯ ಮೂಲಕ ಅಂಚೆ ಪಾರ್ಸಲ್, ಹಣದ ವರ್ಗಾವಣೆ, ಬ್ಯಾಂಕಿಂಗ್, ವಿಮೆ ಮತ್ತು ರಿಟೇಲ್ ಸೇವೆಗಳನ್ನು ಒದಗಿಸುವುದು.
- ಮಾನವನ ಜೀವನದ ಗುಣಮಟ್ಟವನ್ನು ಉತ್ತಮಪಡಿಸುವ ಮೂಲಕ ಸಮಾಜವನ್ನು ಉನ್ನತೀಕರಿಸಲು ಪ್ರಯತ್ನಿಸುವುದು.

ಈ ಹಿನ್ನಲೆಯಲ್ಲಿ ಗ್ರಾಮ ಪಂಚಾಯಿತಿಯು ತನ್ನ ಧ್ಯೇಯ ವಾಕ್ಯವನ್ನು ರಚಿಸುವುದು. ಧ್ಯೇಯ ವಾಕ್ಯಕ್ಕೆ ಪೂರಕವಾಗಿರುವ 5 ಅಥವಾ 6 ಗುರಿಗಳನ್ನು ನಿಗದಿಪಡಿಸಿಕೊಳ್ಳುವುದು.

- ಗ್ರಾಮ ಪಂಚಾಯತಿಯ 0~5 ವರ್ಷದೊಳಗಿನ ಎಲ್ಲಾ ಮಕ್ಕಳು ಅಪೌಷ್ಟಿಕತೆಯಿಂದ ಬಳಲದಂತೆ ಖಚಿತಪಡಿಸುತ್ತೇವೆ.
- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಎಲ್ಲಾ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ಕೊಡಿಸುವುದರ ಮೂಲಕ ಚುಚ್ಚುಮದ್ದು ಸಂಪೂರ್ಣ ಗ್ರಾಮ ಪಂಚಾಯತಿ ಎಂದು ಘೋಷಿಸುತ್ತೇವೆ.
- 6~14 ವಯಸ್ಸಿನ ಯಾವ ಮಗುವು (ವಿಶೇಷವಾಗಿ ಹೆಣ್ಣುಮಗು) ಶಾಲೆಯಿಂದ ಹೊರಗುಳಿಯದಂತೆ ಶೇ.100ರಷ್ಟು ಖಾತರಿಪಡಿಸುತ್ತೇವೆ.
- ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರು ರಕ್ತಹೀನತೆಯಿಂದ ಬಳಲದಂತೆ ಖಾತರಿಪಡಿಸುತ್ತೇವೆ.
- ನೀರು ಸಂರಕ್ಷಣೆಗಾಗಿ ಮಳೆನೀರು ಮತ್ತು ಮನೆ ಬಳಕೆ ನೀರನ್ನು ಮರಬಳಕೆ ಅಥವಾ ಇಂಗಿಸುವಂತೆ ಖಚಿತಪಡಿಸುತ್ತೇವೆ.
- ಪ್ರತಿ ಮನೆಯ ಮುಂದೆ ಅಥವಾ ಸರ್ಕಾರಿ ಜಾಗದಲ್ಲಿ ಗಿಡ ನೆಟ್ಟು, ಪೋಷಿಸುವುದರ ಮೂಲಕ ಹಸರೀಕರಣ ಮಾಡುತ್ತೇವೆ.
- ಹಿರಿಯ ನಾಗರಿಕರಿಗೆ ಉತ್ತಮ ಆರೋಗ್ಯ ಮತ್ತು ಸಾಮಾಜಿಕ ಭದ್ರತೆ ನೀಡುವಲ್ಲಿ ಶೇ.100ರಷ್ಟು ಖಾತರಿಪಡಿಸುತ್ತೇವೆ.
- ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಅವಶ್ಯಕತೆಗನುಗುಣವಾಗಿ ಸಮುದಾಯ ಸಹಭಾಗಿತ್ವದೊಂದಿಗೆ ವಿಸ್ತಾರ ಯೋಜನೆಯನ್ನು ರೂಪಿಸುವ ಮುಖೇನ ಕಾರ್ಯರೂಪಗೊಳಿಸುತ್ತೇವೆ.

ಈ ರೀತಿಯಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಧ್ಯೇಯ ವಾಕ್ಯ ಮತ್ತು ಗುರಿಗಳನ್ನು ನಿಗದಿಪಡಿಸಿಕೊಳ್ಳುವುದರಿಂದ ತಮ್ಮ ಅವಧಿಯಲ್ಲಿ ಗ್ರಾಮಗಳ ಸಮಗ್ರ ಅಭಿವೃದ್ಧಿಯ ಕುರಿತು ಪರಿಣಾಮಕಾರಿ ಕ್ರಿಯಾ ಯೋಜನೆಯನ್ನು ರೂಪಿಸಬಹುದಾಗಿದೆ.






ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿ ಅವಕಾಶವಿರುವ ಎಲ್ಲಾ ಸಂಪನ್ಮೂಲಗಳನ್ನು ಒಗ್ಗೂಡಿಸುವುದರ ಮೂಲಕ ಸದೃಢ ಗ್ರಾಮಗಳನ್ನು ರೂಪಿಸುವಲ್ಲಿ ಸಹಕಾರಿಯಾಗುವಂತೆ ಯೋಜನೆಗಳನ್ನು ರೂಪಿಸಬಹುದು.

# ತರಬೇತಿ ಮೌಲ್ಯಮಾಪನ



## ಉದ್ದೇಶ

ಪ್ರಶಿಕ್ಷಣಾರ್ಥಿಗಳು ತರಬೇತಿಯ ಕಲಿಕಾಂಶಗಳನ್ನು ಪರಿಣಾಮಕಾರಿಯಾಗಿ ಅರ್ಥೈಸಿಕೊಂಡಿರುವುದನ್ನು ತಿಳಿದುಕೊಳ್ಳುವುದು.

ತರಬೇತಿಯುನ್ನು ಉತ್ತಮಪಡಿಸಲು ಪ್ರಶಿಕ್ಷಣಾರ್ಥಿಗಳಿಂದ ಹಿಮ್ಮಾಹಿತಿಯನ್ನು ಪಡೆದುಕೊಳ್ಳುವುದು.

ಪ್ರಶಿಕ್ಷಣಾರ್ಥಿಗಳಲ್ಲಿ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ಅಳವಡಿಸಿಕೊಳ್ಳಲು ಪ್ರತಿಜ್ಞಾ ವಿಧಿಯನ್ನು ಬೋಧಿಸುವುದು.

## ಉಪ ವಿಷಯಗಳು

ಸ್ವರಾಜ್ಯ – ಪ್ರತಿಜ್ಞಾ ವಿಧಿ

ತರಬೇತಿ ಮೌಲ್ಯಮಾಪನ

ತರಬೇತಿ ಕುರಿತು ಪ್ರಶಿಕ್ಷಣಾರ್ಥಿಗಳ ಅಭಿಪ್ರಾಯ ಮತ್ತು ಅನಿಸಿಕೆ

ವಂದನಾರ್ಪಣೆ

ರಾಷ್ಟ್ರಗೀತೆಯೊಂದಿಗೆ ಮುಕ್ತಾಯ

## ಸಮಯ

60 ನಿಮಿಷಗಳು

## ವಿಧಾನ

- ನಿಗದಿತ ನಮೂನೆಯಲ್ಲಿ ಅಭಿಪ್ರಾಯಗಳ ಸಂಗ್ರಹಣೆ

## ಪೂರಕ ಸಾಮಗ್ರಿಗಳು

- ಸ್ವರಾಜ್ಯ – ಪ್ರತಿಜ್ಞಾ ವಿಧಿಯ ಟಿಪ್ಪಣಿ
- ಮೌಲ್ಯಮಾಪನ ನಮೂನೆ
- ರಾಷ್ಟ್ರಗೀತೆ ಧ್ವನಿ ಸುರಳಿ

## ನಿರೀಕ್ಷಿತ ಫಲಿತಾಂಶ

- ತರಬೇತಿ ಆಯೋಜನೆ ಮತ್ತು ಚೌಕಟ್ಟಿನ ಬಗ್ಗೆ ಪ್ರಶಿಕ್ಷಣಾರ್ಥಿಗಳ ಅಭಿಪ್ರಾಯ ದೊರೆಯುತ್ತದೆ.
- ತರಬೇತಿಯನ್ನು ಮುಂದಿನ ದಿನಗಳಲ್ಲಿ ಉತ್ತಮಪಡಿಸಲು ಸಹಕಾರಿಯಾಗುವುದು.

## ಅಧಿವೇಶನ ಪ್ರಕ್ರಿಯೆ

- ಪ್ರಾರಂಭದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ತರಬೇತಿಯ ಮೌಲ್ಯಮಾಪನವನ್ನು ಮಾಡಿಸಲು ಸಂಸ್ಥೆಯು ನಿಗದಿಪಡಿಸಿರುವ ನಮೂನೆಯನ್ನು ವಿತರಿಸಿ ಭರ್ತಿ ಮಾಡಲು ತಿಳಿಸುವುದು.
- ಮಹಿಳೆ ಮತ್ತು ಪುರುಷ ಪ್ರಶಿಕ್ಷಣಾರ್ಥಿಗಳಿಂದ ತರಬೇತಿಯ ಕುರಿತು ಮೌಖಿಕ ಹಿಮ್ಮಾಹಿತಿಯನ್ನು ಪಡೆದುಕೊಳ್ಳುವುದು.
- ಎಲ್ಲಾ ಪ್ರಶಿಕ್ಷಣಾರ್ಥಿಗಳಿಗೆ ಗ್ರಾಮ ಸ್ವರಾಜದ ಕಲ್ಪನೆಯನ್ನು ಅಳವಡಿಸಿಕೊಳ್ಳಲು ಕೆಳಗಿನ ಪ್ರತಿಜ್ಞಾ ವಿಧಿಯನ್ನು ಬೋಧಿಸುವುದು.

## ಸ್ವರಾಜ್ಯ – ಪ್ರತಿಜ್ಞಾ ವಿಧಿ

ಶ್ರೀ / ಶ್ರೀಮತಿ / ಡಾ. / ಕು. ................................................................................. ಆದ ನಾನು ಸಂವಿಧಾನಬದ್ಧವಾಗಿ ಸ್ಥಾಪಿತವಾದ ................................................................................. ಗ್ರಾಮ ಪಂಚಾಯಿತಿಯ ಸದಸ್ಯರಾಗಿ ಸಂವಿಧಾನದ ಆಶಯದಂತೆ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಉದ್ದೇಶದನ್ವಯದಂತೆ ಕರ್ತವ್ಯ ನಿರ್ವಹಿಸಲು ಬದ್ಧವಾಗಿರುತ್ತೇವೆಂದು ಮತ್ತು ಅಧಿನಿಯಮದ ಮೂಲ ಆಶಕ್ಕೆ ಯಾವುದೇ ಧಕ್ಕೆ ಬಾರದಂತೆ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತೇವೆಂದು ಈ ಮೂಲಕ ಪ್ರತಿಜ್ಞೆ ಮಾಡುತ್ತೇನೆ.

ಅಂತಿಮವಾಗಿ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತಾ ನಂತರದಲ್ಲಿ ರಾಷ್ಟ್ರಗೀತೆಯೊಂದಿಗೆ ತರಬೇತಿಯನ್ನು ಮುಕ್ತಾಯಗೊಳಿಸುವುದು.

**ಸುಗಮಕಾರರಿಗೆ ಸೂಚನೆ**

ಪ್ರಶಿಕ್ಷಣಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ತರಬೇತಿ ಮೌಲ್ಯಮಾಪನದ ಪ್ರತಿಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು.

ಸ್ವರಾಜ್ಯ ಪ್ರತಿಜ್ಞಾ ವಿಧಿಯನ್ನು ಪ್ರಶಿಕ್ಷಣಾರ್ಥಿಗಳು ಪಡೆದುಕೊಳ್ಳುವಾಗ ಸಂಸ್ಥೆಯಿಂದ ನೀಡಿರುವ ಟಿಪ್ಪಣಿಯನ್ನು ಪರದೆಯ ಮೇಲೆ ಪ್ರಸ್ತುತಪಡಿಸುವುದು.

ರಾಷ್ಟ್ರಗೀತೆಯ ಧ್ವನಿ ಸುರಳಿ ಇರುವುದನ್ನು ಖಚಿತ ಪಡಿಸಿಕೊಳ್ಳುವುದು.



## ಅನುಬಂಧ–1

# ತರಬೇತಿ ವೇಳಾಪಟ್ಟಿ

| ಅಧಿವೇಶನ ಮತ್ತು ಸಮಯ | ಅಧಿವೇಶನದ ವಿಷಯ |
|---|---|
| ದಿನ – 1 | |
| ಬೆ. 10.30 ರಿಂದ 11.00 | ಶಿಬಿರಾರ್ಥಿಗಳ ನೋಂದಣಿ |
| ಬೆ. 11.00ರಿಂದ 11.45 | ನೂತನ ಚುನಾಯಿತ ಪ್ರತಿನಿಧಿಗಳಿಗೆ ಸ್ವಾಗತ ಮತ್ತು ತರಬೇತಿಯ ಉದ್ಘಾಟನೆ ಮತ್ತು ಪ್ರಾಸ್ತಾವಿಕ ನುಡಿಗಳು |
| ಅಧಿವೇಶನ–1<br>ಬೆ. 12.00ರಿಂದ 12.45 | ಪರಿಚಯಾತ್ಮಕ ಚಟುವಟಿಕೆ, ನಿರೀಕ್ಷೆಗಳ ಪಟ್ಟಿ ಮತ್ತು ತರಬೇತಿಯಲ್ಲಿ ಪಾಲಿಸಬೇಕಾದ ಅನೌಪಚಾರಿಕ ನಿಯಮಗಳ ರಚನೆ |
| ಅಧಿವೇಶನ–2<br>ಮ. 12.45 ರಿಂದ 1.45 | ಪಂಚಾಯಿತಿ ಇತಿಹಾಸ, ಪ್ರಜಾಪ್ರಭುತ್ವ, ವಿಕೇಂದ್ರೀಕರಣ ಮತ್ತು ಪಂಚಾಯತ್‌ರಾಜ್ ವ್ಯವಸ್ಥೆ |
| ಮ. 2.30 ರಿಂದ 2.45 | ಪುನಶ್ಚೇತನ ಚಟುವಟಿಕೆ |
| ಅಧಿವೇಶನ–3<br>ಮ. 02.45.ರಿಂದ 04.00 | ಗ್ರಾಮ ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳು |
| ಮ. 04.00.ರಿಂದ 04.30 | ಯೂ–ಟ್ಯೂಬ್ ಮೂಲಕ ಪ್ರಶ್ನೋತ್ತರ ಕಾರ್ಯಕ್ರಮ |
| | ಟೀ ವಿರಾಮದೊಂದಿಗೆ ದಿನದ ಅಂತ್ಯ |
| ದಿನ – 2 | |
| ಬೆ. 10.30 ರಿಂದ 11.00 | ಪುನರ್ಮನನ |
| ಅಧಿವೇಶನ–4<br>ಬೆ. 11.00. ರಿಂದ 12.00 | ಗ್ರಾಮ ಪಂಚಾಯಿತಿ ರಚನೆ, ಆಡಳಿತಾತ್ಮಕ ಸ್ವರೂಪ, ಅಧಿಕಾರಗಳು ಮತ್ತು ಹೊಣೆಗಾರಿಕೆಗಳು |
| ಅಧಿವೇಶನ–5<br>ಮ. 12.15.ರಿಂದ 01.30 | ಗ್ರಾಮ ಪಂಚಾಯಿತಿಯ ಕಡ್ಡಾಯ ಪ್ರಕಾರ್ಯಗಳು |
| ಮ. 01.30.ರಿಂದ 02.30 | ಊಟದ ವಿರಾಮ |
| ಮ. 2.30 ರಿಂದ 2.45 | ಪುನಶ್ಚೇತನ ಚಟುವಟಿಕೆ |
| ಅಧಿವೇಶನ–6<br>ಮ. 02.45.ರಿಂದ 04.00 | ನಾವೇನು ಮಾಡಬೇಕು? (ಅಭಿವೃದ್ಧಿಯ ದೃಷ್ಟಿಕೋನ) |
| ಮ. 04.00 ರಿಂದ 04.30 | ಯೂ–ಟ್ಯೂಬ್ ಮೂಲಕ ಪ್ರಶ್ನೋತ್ತರ ಕಾರ್ಯಕ್ರಮ |
| | ಟೀ ವಿರಾಮದೊಂದಿಗೆ ದಿನದ ಅಂತ್ಯ |

| ಅಧಿವೇಶನ ಮತ್ತು ಸಮಯ | ಅಧಿವೇಶನದ ವಿಷಯ |
|---|---|
| ದಿನ – 3 | |
| ಬೆ. 10.30 ರಿಂದ 11.00 | ಪುನರ್ಮನನ |
| ಅಧಿವೇಶನ–7<br>ಬೆ. 11.00.ರಿಂದ 12.15 | ದೂರದೃಷ್ಟಿ ಯೋಜನೆ ಮತ್ತು ನಮ್ಮ ಗ್ರಾಮ ನಮ್ಮ ಯೋಜನೆಯ ಪರಿಕಲ್ಪನೆ |
| ಬೆ. 12.15 ರಿಂದ 12.30 | ಟೀ ವಿರಾಮ |
| ಅಧಿವೇಶನ–8<br>ಮ. 12.30 ರಿಂದ 01.30 | ಗ್ರಾಮ ಸ್ವರಾಜ್ ಘಟಕಗಳು |
| ಮ. 01.30.ರಿಂದ 02.30 | ಊಟದ ವಿರಾಮ |
| ಮ. 2.30 ರಿಂದ 2.45 | ಪುನಶ್ಚೇತನ ಚಟುವಟಿಕೆ |
| ಅಧಿವೇಶನ–9<br>ಮ. 02.45 ರಿಂದ 04.00 | ನಾಯಕತ್ವ. |
| ಮ. 04.00 ರಿಂದ 04.30 | ಯೂ–ಟ್ಯೂಬ್ ಮೂಲಕ ಪ್ರಶ್ನೋತ್ತರ ಕಾರ್ಯಕ್ರಮ |
| | ಟೀ ವಿರಾಮದೊಂದಿಗೆ ದಿನದ ಅಂತ್ಯ |
| ದಿನ – 4 | |
| ಬೆ. 10.30 ರಿಂದ 11.00 | ಪುನರ್ಮನನ |
| ಅಧಿವೇಶನ–10<br>ಬೆ. 11.00 ರಿಂದ 12.00 | ಗ್ರಾಮ ಪಂಚಾಯಿತಿ ಸಂಪನ್ಮೂಲಗಳು |
| ಬೆ. 12.00 ರಿಂದ 12.15 | ಟೀ ವಿರಾಮ |
| ಅಧಿವೇಶನ–11<br>ಮ. 12.15 ರಿಂದ 01.30 | ಗ್ರಾಮ ಪಂಚಾಯಿತಿ ಸಭೆಗಳು, ಸ್ಥಾಯಿ ಸಮಿತಿಗಳು, ಉಪ ಸಮಿತಿಗಳು ಮತ್ತು ಕೆ.ಡಿ.ಪಿ. ಸಭೆ |
| ಮ. 01.30.ರಿಂದ 02.30 | ಊಟದ ವಿರಾಮ |
| ಮ. 2.30 ರಿಂದ 2.45 | ಪುನಶ್ಚೇತನ ಚಟುವಟಿಕೆ |
| ಅಧಿವೇಶನ–12<br>ಮ. 02.45 ರಿಂದ 03.45 | ಗ್ರಾಮ ಪಂಚಾಯಿತಿ ಆಡಳಿತ ಮತ್ತು ಮಹಿಳೆ |
| ಮ. 03.45ರಿಂದ 04.15 | ಯೂ–ಟ್ಯೂಬ್ ಮೂಲಕ ಪ್ರಶ್ನೋತ್ತರ ಕಾರ್ಯಕ್ರಮ |
| | ಟೀ ವಿರಾಮದೊಂದಿಗೆ ದಿನದ ಅಂತ್ಯ |

| ಅಧಿವೇಶನ ಮತ್ತು ಸಮಯ | ಅಧಿವೇಶನದ ವಿಷಯ |
|---|---|
| ದಿನ – 5 | |
| ಬೆ. 10.30 ರಿಂದ 11.00 | ಪುನರ್ಮನನ |
| ಅಧಿವೇಶನ–13<br>ಬೆ.11.00.ರಿಂದ 12.00 | ಕ್ರಿಯಾತ್ಮಕ ದೂರದೃಷ್ಟಿ ಯೋಜನೆ ತಯಾರಿಕೆ |
| ಬೆ. 12.00 ರಿಂದ 12.15 | ಟೀ ವಿರಾಮ |
| ಅಧಿವೇಶನ–14<br>ಮ. 12.15 ರಿಂದ 01.00 | ಕ್ರಿಯಾತ್ಮಕ ದೂರದೃಷ್ಟಿ ಯೋಜನೆ ತಯಾರಿಕೆ – ಮುಂದುವರೆಯುವುದು |
| ಮ. 1.00 ರಿಂದ 1.30 | ತರಬೇತಿ ಮೌಲ್ಯಮಾಪನ |
| ಮ. 01.30.ರಿಂದ 02.30 | ಊಟದ ವಿರಾಮ |
| ಮ. 02.30 ರಿಂದ 03.00 | ತರಬೇತಿ ಕುರಿತು ಪ್ರಶಿಕ್ಷಣಾರ್ಥಿಗಳ ಅಭಿಪ್ರಾಯ ಮತ್ತು ಅನಿಸಿಕೆ |
| ಮ. 03.00 ರಿಂದ 04.00 | ರಾಜ್ಯ ಮಟ್ಟದ ಅಧಿಕಾರಿಗಳಿಂದ ಯೂ–ಟ್ಯೂಬ್ ಮೂಲಕ ಸಂವಾದ |
| ಮ. 04.00 ರಿಂದ 04.30 | ತರಬೇತಿ ಸಮಾರೋಪ<br>• ಸ್ವರಾಜ್ಯ – ಪ್ರತಿಜ್ಞಾ ವಿಧಿ<br>• ವಂದನಾರ್ಪಣೆ<br>• ರಾಷ್ಟ್ರಗೀತೆಯೊಂದಿಗೆ ಮುಕ್ತಾಯ |
| | ಟೀ ವಿರಾಮದೊಂದಿಗೆ ತರಬೇತಿ ಮುಕ್ತಾಯ |

## ಅನುಬಂಧ-2

# ತರಬೇತಿ ಮೌಲ್ಯಮಾಪನ ನಮೂನೆ

ಕರ್ನಾಟಕ ಸರ್ಕಾರ

## ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ – ಮೈಸೂರು

## "ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಸಾಮರ್ಥ್ಯಾಭಿವೃದ್ಧಿ ತರಬೇತಿ'

**5 ದಿನಗಳ ಮುಖಾ-ಮುಖಿ ತರಬೇತಿ**

## ತರಬೇತಿ ಕಾರ್ಯಕ್ರಮದ ಮೌಲ್ಯಮಾಪನ ನಮೂನೆ

| | |
|---|---|
| ತಾಲ್ಲೂಕಿನ ಹೆಸರು | |
| ಗ್ರಾಮ ಪಂಚಾಯಿತಿ ಹೆಸರು | |
| ತರಬೇತಿ ನಡೆಸಿದ ದಿನಾಂಕ | |
| ವರ್ಗ | |

**ತರಬೇತಿಗೆ ಅಳವಡಿಸಿದ ವಿಷಯಗಳ ಕುರಿತು ಶಿಬಿರಾರ್ಥಿಗಳ ಅಭಿಪ್ರಾಯ**

| ಕ್ರ. ಸಂ. | ಅಧಿವೇಶನಗಳು | ಅತ್ಯುತ್ತಮ | ಉತ್ತಮ | ಸಾಧಾರಣ | ಕನಿಷ್ಠ |
|---|---|---|---|---|---|
| 01 | ಪರಿಚಯಾತ್ಮಕ ಚಟುವಟಿಕೆ, ನಿರೀಕ್ಷೆಗಳ ಪಟ್ಟಿ ಮತ್ತು ತರಬೇತಿಯಲ್ಲಿ ಪಾಲಿಸಬೇಕಾದ ಅನೌಪಚಾರಿಕ ನಿಯಮಗಳ ರಚನೆ | | | | |
| 02 | ಪಂಚಾಯಿತಿ ಇತಿಹಾಸ, ಪ್ರಜಾಪ್ರಭುತ್ವ, ವಿಕೇಂದ್ರೀಕರಣ ಮತ್ತು ಪಂಚಾಯತ್‌ರಾಜ್ ವ್ಯವಸ್ಥೆ | | | | |
| 03 | ಗ್ರಾಮ ಪಂಚಾಯಿತಿ ನೀತಿ ನಿರ್ದೇಶಕ ತತ್ವಗಳು | | | | |
| 04 | ಗ್ರಾಮ ಪಂಚಾಯಿತಿ ರಚನೆ, ಆಡಳಿತಾತ್ಮಕ ಸ್ವರೂಪ, ಅಧಿಕಾರಗಳು ಮತ್ತು ಹೊಣೆಗಾರಿಕೆಗಳು | | | | |
| 05 | ಗ್ರಾಮ ಪಂಚಾಯಿತಿಯ ಕಡ್ಡಾಯ ಪ್ರಕಾರ್ಯಗಳು | | | | |
| 06 | ನಾವೇನು ಮಾಡಬೇಕು? (ಅಭಿವೃದ್ಧಿಯ ದೃಷ್ಟಿಕೋನ) | | | | |
| 07 | ದೂರದೃಷ್ಟಿ ಯೋಜನೆ ಮತ್ತು ನಮ್ಮ ಗ್ರಾಮ ನಮ್ಮ ಯೋಜನೆಯ ಪರಿಕಲ್ಪನೆ | | | | |
| 08 | ಗ್ರಾಮ ಸ್ವರಾಜ್ ಘಟಕಗಳು | | | | |
| 09 | ನಾಯಕತ್ವ | | | | |
| 10 | ಗ್ರಾಮ ಪಂಚಾಯಿತಿ ಸಂಪನ್ಮೂಲಗಳು | | | | |
| 11 | ಗ್ರಾಮ ಪಂಚಾಯಿತಿ ಸಭೆಗಳು, ಸ್ಥಾಯಿ ಸಮಿತಿಗಳು, ಉಪ ಸಮಿತಿಗಳು ಮತ್ತು ಕೆ.ಡಿ.ಪಿ. ಸಭೆ | | | | |

| ಕ್ರ. ಸಂ. | ಅಧಿವೇಶನಗಳು | ಅತ್ಯುತ್ತಮ | ಉತ್ತಮ | ಸಾಧಾರಣ | ಕನಿಷ್ಠ |
|---|---|---|---|---|---|
| 12 | ಗ್ರಾಮ ಪಂಚಾಯಿತಿ ಆಡಳಿತ ಮತ್ತು ಮಹಿಳೆ | | | | |
| 13 | ಕ್ರಿಯಾತ್ಮಕ ದೂರದೃಷ್ಟಿ ಯೋಜನೆ ತಯಾರಿಕೆ | | | | |

**ತರಬೇತಿ ಕಾರ್ಯಕ್ರಮಕ್ಕೆ ಒದಗಿಸಲಾದ ಸಾಂಸ್ಥಿಕ ವ್ಯವಸ್ಥೆ :**
**(ತರಬೇತಿ ಕೊಠಡಿ ವ್ಯವಸ್ಥೆ, ಊಟೋಪಚಾರದ ವ್ಯವಸ್ಥೆ)**

**ತರಬೇತಿ ಕೈಪಿಡಿ ಕುರಿತು ತಮ್ಮ ಅಭಿಪ್ರಾಯಗಳು:**

**ತರಬೇತಿಯ ಯಾವ ಅಧಿವೇಶನ ತಮಗೆ ಅತೀ ಹೆಚ್ಚಿನ ಉಪಯೋಗಕ್ಕೆ ಬಂದಿದೆ?**

**ಈ ತರಬೇತಿಯಿಂದ ನಿಮ್ಮಲ್ಲಾದ ಮೂರು ಪ್ರಮುಖ ಬದಲಾವಣೆಗಳೇನು?**

**ಈ ತರಬೇತಿಯಲ್ಲಿ ನೀವು ಕಲಿತ ಮೂರು ಪ್ರಮುಖಾಂಶಗಳಾವುವು?**

**ಈ ತರಬೇತಿಯ ನಂತರದಲ್ಲಿ, ನೀವು ಕಾರ್ಯಕ್ಷೇತ್ರದಲ್ಲಿ ಯಾವ ವ್ಯತ್ಯಾಸವನ್ನು ತರಲು ಇಚ್ಚಿಸಿದ್ದೀರಿ?**

**ತರಬೇತಿ ಅವಧಿಯಲ್ಲಿ ಹೆಚ್ಚು ಚರ್ಚಿತವಾದ ವಿಷಯಗಳು:**

**ತರಬೇತಿಯನ್ನು ಇನ್ನೂ ಉತ್ತಮ ಪಡಿಸಲುಬೇಕಾದ ಅಂಶಗಳು:**

**ಪ್ರಶಿಕ್ಷಣಾರ್ಥಿಯ ಹೆಸರು :**
**ಪ್ರಶಿಕ್ಷಣಾರ್ಥಿಯ ಸಹಿ :**
**ದೂರವಾಣಿ ಸಂಖ್ಯೆ :**

# ಟಿಪ್ಪಣಿ

# ಟಿಪ್ಪಣಿ